(SRI V. VENKATAPPA)

	School	*Strength*
	(3) Harlalasandra High School.	120
	(4) Government High School, Ramanagaram.	407
(*b*)	(i) Government High School, Mandya.	382
	(ii) There is no Government High School at Kanakapura.	

(*c*) Yes.

Disturbance in Channapatna on 15th May 1957.

Q.—586. Sri B. K. PUTTARAMIYA (Channapatna).—

Will the Government be pleased to state :—

(*a*) whether it has come to their notice that at a Chand Urus meeting on 15th May 1957 in the night at the Mosque of Mashayak Syed Yahia Saheb Mubaliqua Dania, Channapatna, of a gathering of three to four thousand men and women, a gang of four to five hundred rowdies of the Channapatna Congress gang rushed abusing with deadly weapons into the Mosque to murder the priest and one Khaleelulla, B.A., a speaker, and created untold misery and disturbance;

(*b*) whether it is a fact that no police help was rendered in spite of repeated requests and that Mr. Khaleelulla was assaulted;

(*c*) whether any complaint was submitted to the police by Mashayak Syed Yahia Saheb;

(*d*) the action that the police have taken in the matter;

(*e*) whether they would consider to appoint a committee to go into the wrongs done by the Channapatna police and to report to them for taking needful action against the officials for the negligence of their duties?

A.—Sri C. M. POONACHA (Minister for Home Affairs and Industries).—

(*a*) On the night of 15th May 1957 Chand Urus was observed in Daira and in the Mosque of Masayak Syed Yahia Saheb of Channapatna. Daira people performed annual ceremony of their leader Bandagi Mian, Syed Ahmed Mian. The gathering in this Mosque was about two to three hundred including children. There was no disturbance and the meeting ended peacefully.

(*b*) No.

(*c*) No.

(*d*) There was no need for the Police to take any action on the incident referred to above.

(*e*) No wrongs were done by the Channapatna Police and there were no allegations against them. As such there is no need for any committee of enquiry.

MYSORE AGRICULTURAL INCOME-TAX BILL, 1957.

Presentation of Select Committee Report.

Sri T. MARIAPPA (Minister for Finance).—Sir, I beg to present the Report of the Select Committee on the Mysore Agricultural Income-Tax Bill, 1957.

Mr. SPEAKER.—The Report of the Select Committee on the Mysore Agricultural Income-Tax Bill, 1957, is presented to the House.

MYSORE IRRIGATION (LEVY OF BETTERMENT CONTRIBUTION AND WATER RATE) BILL, 1957.

Motion to consider (Continued)

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಮೈಸೂರು ರಾಜ್ಯದ ನೀರಾವರಿಯ (ಮೇಲ್ವಾಟು ಅಂಶದಾನವನ್ನೂ ಮತ್ತು ನೀರು ಸರದಿಯನ್ನೂ ವಿಧಿಸುವುದರ ಸಂಬಂಧದ) 1957 ನೆಯ ಇಸವಿಯ ವಿಧೇಯಕದ ವಿಚಾರವಾಗಿ ಚರ್ಚೆಮಾಡುತ್ತಾ ಈ ಮಸೂದೆಯಲ್ಲಿ ಒಳಗೊಂಡಿರತಕ್ಕ ಹಲವು ನೀತಿಗಳನ್ನು ವಿರೋಧ ಪಕ್ಷದ ನಾಯಕರು ಬಹುವಾಗಿ ಟೀಕಿಸಿದರು. ಆ ರೀತಿ ಟೀಕಿಸುತ್ತಾ, ಗಾಂಧೀವಾದಿಗಳಾದ ಮತ್ತು ಗಾಂಧಿ ಭಕ್ತರಾದ ಕಾಂಗ್ರೆಸ್ಸಿನವರು ಇಂತಹ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸಿದ್ದಾರಲ್ಲಾ ಎಂದು

ಹೇಳಿ ಆಶ್ಚರ್ಯಪಟ್ಟರು. ಈ ಸಭೆಯಲ್ಲಿ ಅನೇಕವೇಳೆ ಎದುರು ಪಕ್ಷದ ಸದಸ್ಯರು ಗಾಂಧಿ ವಾದವನ್ನು ಎತ್ತಿ ಹೇಳಿದ್ದಾರೆ. ಗಾಂಧೀಭಕ್ತರಾಗಿದ್ದುಕೊಂಡು ಈ ರೀತಿಯಾಗಿ ವರ್ತಿಸುವುದು ನಮಗೆ ಆಶ್ಚರ್ಯವನ್ನುಂಟುಮಾಡಿವೆಯೆಂದು ಕಾಂಗ್ರೆಸ್ ಸದಸ್ಯರನ್ನು ಟೀಕಿಸಿದ್ದಾರೆ. ನಾನಾದರೂ ಈ ಸಭೆಯಲ್ಲಿರುವ ಎದುರು ಪಕ್ಷದ ಸದಸ್ಯರಿಗೆ ಬಹಳ ವಿನಯದಿಂದ ಹೇಳುವುದು ಏನೆಂದರೆ, ದಯಮಾಡಿ ಎದುರು ಪಕ್ಷದ ಸದಸ್ಯರು ಗಾಂಧೀ ಹೆಸರನ್ನು ಪದೇಪದೇ ಚರ್ಚೆಯಲ್ಲಿ ಉಪಯೋಗಿಸಕೂಡದು. ಕಾಂಗ್ರೆಸ್ ಪಕ್ಷದ ಸದಸ್ಯರು ಯಾವ ಕಾನೂನನ್ನು ಮಂಡಿಸುವಾಗಾಗಲಿ, ಯಾವ ಬಡ್ಜೆಟ್ಟನ್ನು ಸಭೆಯಮುಂದೆ ಇಡುವಾಗಾಗಲಿ ಮಾನ್ಯ ಸದಸ್ಯರು ಗಾಂಧೀ ಹೆಸರನ್ನು ಉಪಯೋಗಿಸಿಕೊಂಡು ಗಾಂಧೀ ವಾದವನ್ನು ಎತ್ತಿ ಮಾತನಾಡುವುದು ಸರಿಯಲ್ಲ. ಎದುರು ಪಕ್ಷದವರು ಪದೇ ಪದೇ 'ನೀವು ಗಾಂಧೀ ತತ್ವವನ್ನು ಅನುಸರಿಸುತ್ತಿದ್ದೀರಾ?' ಎಂದು ಕೇಳುತ್ತಾರೆ. ಗಾಂಧೀವಾದ ಒಂದು ಜೀವನ ಮಾರ್ಗ. ಅದು ಕಾಂಗ್ರೆಸ್ಸಿನವರಿಗೇ ಮೀಸಲಾಗಿದೆಯೆಂದು ನಾನು ಭಾವಿಸುವುದಿಲ್ಲ. ಗಾಂಧಿಯ ವಾದದಂತೆ ಯಾರು ಯಾರು ಜೀವನ ನಡೆಸುವುದಕ್ಕೆ ಸಾಧ್ಯವಾಗುತ್ತದೋ ಅವರೆಲ್ಲರಿಗೂ ಅನ್ವಯವಾಗುತ್ತದೆ. ಎದುರು ಪಕ್ಷದವರು ಗಾಂಧೀ ವಾದವನ್ನು ವಿಶೇಷವಾಗಿ ಎತ್ತುತ್ತಾರೆ. ಅದು ಸರಿಯಲ್ಲ. ಜನಜೀವನದಲ್ಲಿ ಗಾಂಧಿಯ ತತ್ವವನ್ನು ಅನುಷ್ಠಾನಕ್ಕೆ ತರಬೇಕು ; ಆದರೆ ಪದೇ ಪದೇ ಈ ಸಭೆಯ ಕಾರ್ಯ ಕಲಾಪಗಳು ನಡೆಯುವಾಗ ಗಾಂಧೀ ವಾದವನ್ನು ಎತ್ತಿ ಹೇಳಬೇಕಾದ ಅಗತ್ಯವಿಲ್ಲ. ಅದನ್ನು ನಾನು ವಿಶದೀಕರಿಸಿ ಹೇಳುವುದಾದರೆ ಗಾಂಧೀವಾದವನ್ನು ಅನುಷ್ಠಾನಕ್ಕೆ ತರುವುದಕ್ಕೆ ಕಾಂಗ್ರೆಸ್ ಪಕ್ಷದ ಸದಸ್ಯರು ಮಾಡುತ್ತಾ ಇರುವ ಪ್ರಯತ್ನಗಳಿಗಿಂತ ಮಿಗಿಲಾದ ಪ್ರಯತ್ನಗಳನ್ನು ಎದುರು ಪಕ್ಷದವರು ಮಾಡುತ್ತಾ ಇಲ್ಲವೆಂದು ಮಾತ್ರ ನಾನು ಹೇಳುತ್ತೇನೆ.

ಇನ್ನೂ ಒಂದು ತತ್ವವನ್ನು ಪ್ರತಿಪಾದಿಸುವುದಕ್ಕೆ ಅವರು ಪ್ರಯತ್ನಪಟ್ಟರು ಸಮಾಜವಾದವನ್ನು ಒಪ್ಪಿಕೊಂಡಿದ್ದರೂ ಕೂಡ ಇಂತಹ ಕಾನೂನುಗಳನ್ನು ತರುತ್ತೀರಿ, ಇದು ಸರಿಯೆ ಎಂದು ಪ್ರಶ್ನೆ ಮಾಡಿದರು. ಸಮಾಜವಾದವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದಿದ್ದರೆ ವಿರೋಧ ಪಕ್ಷದ ನಾಯಕರು ಆ ಮಾತನ್ನಾಡುತ್ತಿರಲಿಲ್ಲ ಎಂದು ಅನ್ನಿಸುತ್ತದೆ, ಸ್ವಾಮಿ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಮಾರಾಟ ತೆರಿಗೆ ಮಸೂದೆಯ ಮೇಲೆ ಅವರು ತಂದ ತಿದ್ದುಪಡಿಗಳಿಗಿಂತ ಇನ್ನೇನೂ ಹೆಚ್ಚಿನ ಸಾಕ್ಷ್ಯ ಬೇಕಿಲ್ಲ. ಮಲ್ ಬಟ್ಟೆಯಮೇಲೆ, ಫೈನ್ ಕ್ಲಾತ್ ಮೇಲೆ ತೆರಿಗೆ ಹಾಕುತ್ತೇವೆ ಎಂದರೆ ನಿಮಗೆ ಜನರು ಮಲ್ಲು ಬಟ್ಟೆ ಹಾಕಿಕೊಂಡು ಓಡಾಡುವುದು ಇಷ್ಟವಿಲ್ಲವೆ, ಅವರು ನಿಮ್ಮೆದುರಿಗೆ ತೆಳ್ಳನೆ ಬಟ್ಟೆ, ಮಲ್ಲು ಬಟ್ಟೆ ಹಾಕಿಕೊಂಡು ತಿರುಗಾಡಬಾರದೆ, ಇದೇನೆ ನಿಮ್ಮ ಗಾಂಧಿವಾದ, ನಿಮ್ಮ ಸಮಾಜವಾದ ? ಎಂದು ಕೇಳಿದರು. ಹಾಗೆಯೇ ಸೀಮೆಯೆಣ್ಣೆ ಮೇಲೆ ತೆರಿಗೆ ಹಾಕಿದರೆ, ಸಾರಾಯಿಮೇಲೆ ತೆರಿಗೆ ಹಾಕಿದರೆ, ಗಾಂಜಾ ಮೇಲೆ ತೆರಿಗೆ ಹಾಕಿದರೆ, ಇನ್ನೂ ಕೆಲವು ಬಾಬುಗಳ ಮೇಲೆ ತೆರಿಗೆ ಹಾಕಿದರೆ ಆಕ್ಷೇಪಣೆ ಮಾಡಿದರು. ಹೀಗೆ ಎದುರು ಪಕ್ಷದಲ್ಲಿ ಕೆಲವರು ಹೇಳಿದರೆಂದು ಹೇಳುವಾಗ ನಾನು ಎಲ್ಲರನ್ನೂ ಉದ್ದೇಶಿಸಿ ಹೇಳುವುದಿಲ್ಲ. ಹೀಗೆ ಸಮಾಜವಾದವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೆ ಸುಮ್ಮನೆ ಒಂದು ಟೀಕೆಗಾಗಿ ಇದನ್ನೆಲ್ಲಾ ಹೇಳಿದ್ದಾರೆ.

Sri B. K. PUTTARAMIYA (Channapatna).—On a point of order, Sir. ಈಗ ಎದುರು ಪಕ್ಷದವರು ಹೇಳಿರುವ ವಾದಗಳಿಗೆಲ್ಲಾ ಶ್ರೀ ಪುಟ್ಟಸ್ವಾಮಿಯವರೇ ಪೂರ್ಣವಾಗಿ ಉತ್ತರ ಕೊಡುತ್ತಾರೋ ಅಥವಾ ಮಂತ್ರಿಗಳಿಂದ ಉತ್ತರ ಬರುತ್ತದೆಯೋ ಎಂಬುದನ್ನು ತಿಳಿಯಬೇಕಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಚನ್ನಪಟ್ಟಣದ ಮಾನ್ಯ ಸದಸ್ಯರು ಈ ರೀತಿ ಹೇಳುತ್ತಿರುವುದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಇಲ್ಲಿ ನಡೆಯುವ ಚರ್ಚೆಗೆ ಉತ್ತರ ಕೊಡುವುದಕ್ಕೆ ಮಂತ್ರಿಗಳಿಗೆ ಮಾತ್ರ ಹಕ್ಕಿಲ್ಲ, ಯಾರು ಬೇಕಾದರೂ ಉತ್ತರ ಕೊಡಬಹುದು. ಚರ್ಚೆ ಯಾವಾಗ ಪ್ರಾರಂಭವಾಯಿತೋ ಆಗ ವಾದಕ್ಕೆ ಪ್ರತಿವಾದವನ್ನು ಯಾರು ಬೇಕಾದರೂ ಮಂಡಿಸಬಹುದು. ಅಂದ ಮಾತ್ರಕ್ಕೆ ನನ್ನ ವಾದಕ್ಕೆ ಪ್ರತಿವಾದವನ್ನು ವಿರೋಧ ಪಕ್ಷದ ನಾಯಕರು ಮಂಡಿಸಬೇಕೆಂದಲ್ಲ. ಚನ್ನಪಟ್ಟಣದ ಮಾನ್ಯ ಸದಸ್ಯರು ಒಂದು ಪ್ರತಿವಾದವನ್ನು ಹೇಳಬಹುದು, ಅದು ಚೆನ್ನಾಗಿ ಗೊತ್ತು. ಬಹುಶಃ ಮಧ್ಯೆ ಅಡಚಣೆ ಬಂದಿರಲಿ ಎಂದೇನಾದರೂ ಹೇಳಿದರೋ ಏನೋ. ಸಮಾಜವಾದ ಸ್ಥಾಪನೆಯಾಗುವಾಗ ಸರಿಯಾಗಿ ವರ್ತಿಸದಿದ್ದರೆ, ಟೀಕೆ ಮುಂದುವರಿಸಿದರೆ ಆಗ ಅಂಥವರು ಪ್ರತಿವಾದಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಮಾತ್ರ ಹೇಳುತ್ತೇನೆ.

ಇನ್ನು ಈ ಕಾನೂನಿನ ಅಂಶಗಳನ್ನು ಸ್ವಲ್ಪ ಪರಿಶೀಲಿಸಬೇಕಾಗಿದೆ. ಸ್ವಾಮಿ, ಈ ಕಾನೂನಿನಲ್ಲಿ ಅಡಕವಾಗಿರತಕ್ಕ ಬೆಟರ್‌ಮೆಂಟ್ ಫೀ ಹಾಕುವುದನ್ನು ನಾನಂತೂ ಸಂಪೂರ್ಣವಾಗಿ ಒಪ್ಪುತ್ತೇನೆ. ಹಾಗೆಯೇ ನೀರು ಸರಬರಾಯಿ ತೆರಿಗೆ ಹಾಕುವುದಕ್ಕೆ ಕೂಡ ನನ್ನ ಸಂಪೂರ್ಣ ಒಪ್ಪಿಗೆಯಿದೆ. ಆದರೆ ಇದರಲ್ಲಿರುವ ಕೆಲವು ಲೋಪದೋಷಗಳನ್ನು ಮಾತ್ರ, ಕಾನೂನು ಇಲ್ಲಿ ಮಂಡಿಸಿರುವ ರೀತಿಯಲ್ಲಿ ಇರುವ ಲೋಪದೋಷಗಳನ್ನು ಮಾತ್ರ, ಹೇಳ ಬಯಸುತ್ತೇನೆ. ಈ ಮಸೂದೆ ಸೆಲೆಕ್ಟ್ ಸಮಿತಿಗೆ ಹೋಗುವುದರ ಪ್ರಯುಕ್ತ ಆ ಸಮಿತಿಯವರು ಈ ಸಭೆಯಲ್ಲಿ ನಡೆದ ಟೀಕೆಗಳು, ವಾದಗಳು ಮುಂತಾದುವನ್ನು ಮನಸ್ಸಿನಲ್ಲಿಟ್ಟುಕೊಂಡು ಅದರ ಬೆಳಕಿನಲ್ಲಿ ಸರಿಯಾದ ರೀತಿಯ ತೀರ್ಮಾನಕ್ಕೆ ಬರುತ್ತಾರೆಂದು ನಂಬುತ್ತೇನೆ. ಆ ವಿಶ್ವಾಸದಿಂದ ಈ ಕಾನೂನಿನ ಕೆಲವು ಕಲಮುಗಳನ್ನು ಪರಿಶೀಲಿಸಲು ನಾನು ಅಪೇಕ್ಷೆಪಡುತ್ತೇನೆ.

ಈ ಮಸೂದೆಯ ಎರಡನೆಯ ಕಲಮಿನ (e) ಭಾಗದಲ್ಲಿ ಪ್ರತಿಪಕ್ಷದ ನಾಯಕರು ಚರ್ಚೆಮಾಡುತ್ತಾ ಇದೇನು "all canals, channels" ಎಂದಿದೆ, canals ಬೇರೆ, channels ಬೇರೆ ಎಂಬ ಅರ್ಥವೆ, 'canal' ಅಂದರೆ ಇಂಗ್ಲೀಷ್ ಕೆನಾಲ್, ಸೂಯೆಜ್ ಕೆನಾಲ್ ಎಂಬುದೆ ಎಂದು ಕೇಳಿದರು. ಈ ವಿಷಯದಲ್ಲಿ ಡಿಕ್ಷನೆರಿ ನೋಡಿಕೊಂಡು ಬಂದಿದ್ದೇನೆಂದು ಹೇಳಿದರು. ನಾನೂ ಸಹ ಡಿಕ್ಷನೆರಿಯಲ್ಲಿ ಆ ಪದಗಳಿಗೆ ಅರ್ಥ ನೋಡಿಕೊಂಡು ಬಂದಿದ್ದೇನೆ. 'canal' ಅಂದರೆ Artificial watercourse for inland navigation' ಎಂಬ ಅರ್ಥವಿದೆ, ಇನ್ನೊಂದು ಅರ್ಥ 'Artificial irrigation channel' ಎಂದಿದೆ. 'Channel, ಅಂದರೆ ' Natural or artificial running water' ಎಂಬ ಅರ್ಥವಿದೆ. ಕನ್ನಡದಲ್ಲಿ ಬಹಳ ಚೆನ್ನಾಗಿ ತರ್ಜುಮೆ ಮಾಡಿದ್ದಾರೆ, canals, channels, ಎಂಬುದಕ್ಕೆ ಕಾಲುವೆಗಳು, ನಾಲೆಗಳು ಎಂದು ತರ್ಜುಮೆ ಮಾಡಿದ್ದಾರೆ. ಇದರ ಪ್ರಕಾರ 'Canal' ಅಂದರೆ 'ಕಾಲುವೆ' 'Channel' ಅಂದರೆ

(ಶ್ರೀ ಕೆ. ಪುಟ್ಟಸ್ವಾಮಿ)

'ನಾಲೆ' ಎಂದಾಗುತ್ತದೆ. ಇರಿಗೇಷನ್ ಆಕ್ಟ್‌ನಲ್ಲಿ ಬೆಟರ್‌ಮೆಂಟ್ ಲೆವಿ ಆನ್ ಇರಿಗೇಟೆಡ್ ಲ್ಯಾಂಡ್ ವಿಚಾರ ಚರ್ಚೆ ಮಾಡುವಾಗ 'canal' ಎಂಬುದು ಇಂಗ್ಲೀಷ್ ಕೆನಾಲೆ ಅಥವಾ ಸೂಯೆಜ್ ಕೆನಾಲೆ ಎಂಬ ಸಂಶಯ ಬಂದಿದೆ, ಅರ್ಥವಾಗಲಿಲ್ಲ. . . . . .

Sri K. KENCHAPPA (Hiriyur).—I have quoted canals that should be constructed between the various branches of Ganges.

ಶ್ರೀ ಕೆ. ಪುಟ್ಟಸ್ವಾಮಿ.—'Channel' ಅನ್ನುವದು restricted sense, ಇನ್ನೊಂದು wider sence. ಕನ್ನಡದಲ್ಲಿ ಕಾಲುವೆ ಮತ್ತು ನಾಲೆ ಎಂದಿದೆ. ಕಾನೂನು ಮಾಡುವಾಗ ಈ ಪದಗಳನ್ನು ಉಪಯೋಗಿಸಬೇಕಾದದ್ದು ಅತ್ಯಗತ್ಯ. ಸಾಮಾನ್ಯವಾಗಿ ನಾಲೆ ಮತ್ತು ಕಾಲುವೆ ಅಂದರೆ ಎರಡೂಕೂಡ ಒಂದೇ ಶಬ್ದ. ಆದರೆ ಪ್ರಯಾಣಕ್ಕೆ ಸಾಮಾನು ಸಾಗಿಸುವುದಕ್ಕೆ ಕಾಲುವೆ ತೆಗೆದು ಉಪಯೋಗಿಸುತ್ತಾರೆ, ವ್ಯವಸಾಯಕ್ಕೆ ನೀರನ್ನು ಉಪಯೋಗಿಸುವಾಗ ನಾಲೆ ಮಾಡುತ್ತಾರೆಂದು ಕಾಣುತ್ತದೆ. ಇಲ್ಲಿ ವ್ಯವಸಾಯಕ್ಕಾಗಿ ಉಪಯೋಗಿಸುವ ನೀರಿನ ಮೇಲೆ ಬೆಟರ್‌ಮೆಂಟ್ ಲೆವಿ ಮತ್ತು ನೀರಿನ ತೆರಿಗೆ ಹಾಕುವಾಗ ಕೆನಾಲ್ ಮತ್ತು ಛಾನಲ್ ಎಂಬ ಪದ ಉಪಯೋಗಿಸಿರಬಹುದು, ಎರಡರಲ್ಲೂ ನೀರನ್ನು ವ್ಯವಸಾಯಕ್ಕಾಗಿ ತೆಗೆದುಕೊಳ್ಳಬಹುದು ಎಂಬುದು ನನ್ನ ಭಾವನೆ. ಬಹುಶಃ ಮರಾಮತ್ ಇಲಾಖೆ ಮಂತ್ರಿಗಳು ಇದನ್ನು ವಿಶದಪಡಿಸಬಹುದು.

ಆ ಮೇಲೆ " ಬಂಧಾರಾಗಳು" ಎಂದಿದೆ. ಅದೇನು? ಹರಿಯುವ ನೀರು ಬಂದುಮಾಡಿದರೆ ಬಂಧಾರ ಆಗುತ್ತದೆ ಎಂತಲೆ ? ನನಗೆ ಅದು ಅರ್ಥವಾಗದೆ ಬೇರೆ ಭಾಗಗಳಿಂದ ಬಂದಿರುವ ಸದಸ್ಯರನ್ನು ಕೇಳಿದೆ. ಅವರು ಕೂಡ ಬಂಧಾರ ಎಂಬ ಪದದ ವಿಚಾರದಲ್ಲಿ ಸ್ವಲ್ಪ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಅದಕ್ಕೆ ಮಾನ್ಯ ಮಂತ್ರಿಗಳು ಅರ್ಥವಿವರಣೆ ಕೊಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ.

ಹಾಗೆಯೇ "spring ponds, kuntas, talpariges and madugus" ಎಂದಿದೆ. 'Madugus' ಎಂಬುದಕ್ಕೆ ಕನ್ನಡದಲ್ಲೂ ಸಹ 'ಮಡುಗುಗಳು' ಎಂದಿದೆ, 'ಮಡುಗು' ಎಂದರೆ 'ಮದವಾಯಿ' ಎಂದೇನಾದರೂ ಅರ್ಥವಾಗಬಹುದೆ ಎಂದು ಯೋಚಿಸಿದೆ. ಆದರೆ 'ಮಡವಾಯಿ' ಇಂಡಿಪೆಂಡೆಂಟ್ ಇರಿಗೇಷನ್ ಸೋರ್ಸ್ ಅಲ್ಲ ; ದೊಡ್ಡ ಕಾಲುವೆಯಿಂದ ಸಣ್ಣ ಕಾಲುವೆಗೆ ನೀರನ್ನು ಬಿಡುವ ಒಂದು ಚರಂಡಿಗೆ ಮಡವಾಯಿ ಎಂದು ಹೇಳಬಹುದು. ಆದರೆ ಕನ್ನಡದ ತರ್ಜುಮೆಯೇನು ತಾವು ಕೊಟ್ಟಿದ್ದೀರೋ ಅದರಲ್ಲಿ 'ಮಡುಗುಗಳು' ಎಂದಿದೆ. ಇದು ಅರ್ಥವಾಗಲಿಲ್ಲ, ನಾನು ಉದ್ಯೋಗದಲ್ಲಿ ವಕೀಲ. ನಾಳೆ ವ್ಯವಹಾರದಲ್ಲಿ ಇದರ ಸರಿಯಾದ ಅರ್ಥ ತಿಳಿಯದಿದ್ದರೆ ಕಷ್ಟವಾಗುತ್ತದೆಂಬ ಸಂಶಯಬಂತು. ಹರಿಯುವ ನೀರನ್ನು ಉಪಯೋಗಿಸಿಕೊಳ್ಳಲು ಇರುವ ಒಂದು ಸಣ್ಣ ನಾಲೆಗೆ 'ಮಡುಗು' ಎಂದು ಇರಬೇಕು. ಈ ವಿಚಾರದಲ್ಲಿ ಸಂಶಯವಿದೆ, ಇದರ ಅರ್ಥವೇನೆಂಬುದನ್ನು ಮಂತ್ರಿಗಳು ವಿಶದೀಕರಿಸಬೇಕಾಗುತ್ತದೆ.

ಮೂರನೆಯ ಆರ್ಟಿಕಲ್ ಸಂಪೂರ್ಣವಾಗಿ ಅರ್ಥ ಕೊಡುವುದಿಲ್ಲ. ಅದನ್ನು ಕನ್ನಡದಲ್ಲಿ ಕೂಡ ಓದಿ ನೋಡಿದೆ, ಇಂಗ್ಲೀಷಿನಲ್ಲಿರುವುದು ಮತ್ತು ಕನ್ನಡದಲ್ಲಿರುವುದು ಎರಡನ್ನೂ ಓದಿದೆ. ಒಂದು ಭಾಗ ಏನಾದರೂ ಕೈಬಿಟ್ಟಿದ್ದಾರೋ ಏನೋ ಎಂದು ಅನುಮಾನ ಬಂದಿದೆ. ಕೈಬಿಟ್ಟಿದ್ದರೆ ಟೀಕೆ ಮಾಡುವುದು ಅಸಂಗತವಾಗುತ್ತದೆ, ಕೈಬಿಟ್ಟು ಹೋಗಿರುವ ಭಾಗ ತಿಳಿದರೆ ಒಳ್ಳೆಯದು. ಮೂರನೆಯ ಕ್ಲಾಜು ಈ ರೀತಿಯಿದೆ.

"Clause 3: The Government shall be entitled to levy a betterment contribution, in accordance with the provisions of this Act, from the landholder or holder of any land which, in its opinion, by the construction, restoration, expansion or alteration of any work by the Government, whether after the commencement of this Act or at any time before such commencement, but not earlier than—

(i) the first January 1944 in the Mysore Area ;

(ii) the first January 1947 in the Madras Area;

(iii) the first August 1947 in the Hyderabad Area; and

(iv) the first Januray 1950 in the Bombay Area and the Coorg District."

ಇದು ಸಂಪೂರ್ಣವಾಗಿ ಅರ್ಥವಾಗಲಿಲ್ಲ. ಯಾವುದಾದರೂ ವಾಕ್ಯ ಪೂರ್ಣವಾಗಿಲ್ಲವೋ ಏನೋ, ಅದೂ ಅಲ್ಲದ್ದೆ."

"The Government shall be entitled to levy a betterment contribution from the landholder."

ಎಂದಿದೆ.

'collect from the landholder' is correct. But if it is levy, it can only be a levy on the landholder. 'levied on the land or collected from the landholder' I do not know whether any portion is left out. It does not make any meaning.'

ಏತಕ್ಕೆ ಇದು ಅರ್ಥವಾಗುವುದಿಲ್ಲವೆಂದರೆ ಸರ್ಕಾರದವರು ಯಾವ ಕಾಲದಿಂದ ಯಾವಯಾವ ಜಮೀನಿನ ಮೇಲೆ ಈ ಬೆಟರ್‌ಮೆಂಟ್ ಫೀಜನ್ನು ಹಾಕುತ್ತಾರೆಂಬುದೇ ಇದರಲ್ಲಿ ಗೊತ್ತಾಗುವಂತಿಲ್ಲ. ಯಾವುದಾದರೊಂದು ಅಣೆಕಟ್ಟೆಯ ಕಟ್ಟಡ ಸಂಪೂರ್ಣವಾದಲಾಗಾಯ್ತಿನಿಂದ ಈ ಬೆಟರ್‌ಮೆಂಟ್ ತೆರಿಗೆ ಹಾಕಲಾಗುತ್ತದೆಯೇ ಅಥವಾ ಯಾವ ಕಾಲದಿಂದ ಆ ಅಣೆಕಟ್ಟೆಯ ನೀರನ್ನು ಜಮೀನಿಗೆ ಕೊಡುತ್ತಾರೋ ಆ ತಾರೀಖಿನಿಂದ ಈ ತೆರಿಗೆಯನ್ನು ವಿಧಿಸಲಾಗುತ್ತದೆಯೇ ಎನ್ನುವುದನ್ನು ಇಲ್ಲಿ ಹೇಳಿರುವಷ್ಟು ವಾಕ್ಯದಿಂದಲೇ ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಕಾರಣ ಇದರಲ್ಲಿ ಏನೋ ಇನ್ನೂ ಕೆಲವು ಪದಗಳು ಬಿಟ್ಟುಹೋಗಿರಬೇಕೆಂದು ಕಾಣುತ್ತದೆ. ಈ ವಿಚಾರದಲ್ಲಿ ಮಾನ್ಯಮಂತ್ರಿಗಳು ಸ್ವಲ್ಪ ವಿವರಣೆ ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಶಾಖೆಯ ಮಂತ್ರಿಗಳು).—ಈ "ಬೆಟರ್‌ಮೆಂಟ್

ಲೆವಿ'' ಯಾವ ಕಾಲದಿಂದ ಅಥವಾ ಯಾವ ತಾರೀಖಿನಿಂದ ಪ್ರಾರಂಭವಾಗುತ್ತದೆಂಬ ವಿಚಾರವನ್ನು ಮಾನ್ಯ ಸದಸ್ಯರು ಕೇಳುತ್ತಿರಬಹುದು. ಆದರೆ ಈ ಬಗ್ಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಬೇರೆ ತಾರೀಖುಗಳಿಂದ ಇದು ಜಾರಿಗೆ ಬರತಕ್ಕದ್ದಾಗಿದೆ.

Sri K. PUTTASWAMY.—This clause, if it is read, is not making a full meaning. "The Government shall be entitled to levy a betterment contribution in accordance with the provisions of this Act from the Land-holder ... ..."

ಈಗ ಈ ಪ್ರೊಪೋಜಿಷನ್ ವಿಚಾರ ಬೇಡಿ. ಇಲ್ಲಿ "From" ಎನ್ನುವುದು ಬೇಕಾಗಿಲ್ಲ. The land holder or holder of any land which, in its opinion by the Construction......... ಎಂದು ಹೇಳಿದರೆ ಆಗ ಇದರ ಅರ್ಥ ಸಂಪೂರ್ಣವಾಗುವುದಿಲ್ಲ. ಬೇರೆ ಯಾವುದೋ ಒಂದು word ಇಲ್ಲಿ ಬಿಟ್ಟುಹೋಗಿದೆಯೆಂದು ಕಾಣುತ್ತದೆ......

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಈಗ ಮಸೂದೆಯ ಬಗ್ಗೆ ತಮ್ಮ ಜನರಲ್ ರಿಮಾರ್ಕ್ಸ್‌ಗಳನ್ನು ಹೇಳಿದರೆ ಸಾಕೆಂದು ತೋರುತ್ತದೆ.

Sri K. KENCHAPPA.—An amendment seems to have been tabled in this respect. The words 'the land is benefited' are omitted. ಈ ಪದಗಳನ್ನು ಸೇರಿಸಿಕೊಂಡರೆ ಸರಿಹೋಗುತ್ತದೆ.

Sri B. K. PUTTARAMIYA.—He is unnecessarily taking away the time of the House. He can send an amendment as well.

ಶ್ರೀ ಕೆ. ಪುಟ್ಟಸ್ವಾಮಿ.—ಈ ತರಹ ಬುದ್ಧಿವಾದ ನಮಗೆ ಈ ಮಾನ್ಯ ಸದಸ್ಯರಿಂದ ಬೇಕಾಗಿಲ್ಲ. ಇವರಿಂದ ಬುದ್ಧಿವಾದ ಹೇಳಿಸಿಕೊಳ್ಳುವಂಥ ಅಡಚಣೆಯೇನೂ ನನಗೆ ಬಂದಿಲ್ಲ. ಈ ಸದಸ್ಯರಿಂದ ನಾನು ಕಲಿಯಬೇಕಾದದ್ದು ಏನೂ ಇಲ್ಲ. ಆದರೆ ಈಗತಾನೆ ಒಬ್ಬ ಮಾನ್ಯ ಸದಸ್ಯರು ಹೇಳಿದರು ಈ ಸಂದರ್ಭದಲ್ಲಿ ಒಂದು ಅಮೆಂಡ್‌ಮೆಂಟ್ ಬಂದಿದೆಯೆಂದೂ, ಇಲ್ಲಿ "land which is benefited" ಎಂಬ ಪದಗಳು ಬಿಟ್ಟುಹೋಗಿವೆಯೆಂದೂ ಹೇಳಿದರು. ಆ ಪ್ರಕಾರ ಇಲ್ಲಿ the land which is benefited, ಎಂಬ ಪದಗಳನ್ನು ಸೇರಿಸಿಕೊಂಡರೆ ಆಗ ಇದರ ಅರ್ಥ ಸಂಪೂರ್ಣವಾಗಿ ಆಗುತ್ತದೆ. ಹೀಗೆ "benefited ಜಮೀನು" ಎಂದರೆ ಯಾವುದು? ಯಾವ ತಾರೀಖಿನ ಲಾಗಾಯ್ತು?.........

*ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ಸಂದರ್ಭಗಳಲ್ಲಿ 1947ನೆಯ ಇಸವಿ ಹಾಕಿದೆ; ಇನ್ನು ಕೆಲವು ಸಂದರ್ಭಗಳಲ್ಲಿ 1944ನೆಯ ಇಸವಿ ಹಾಕಿದೆ. ಈ ವಿಚಾರದಲ್ಲಿ ತಮಗೆ ಅನುಮಾನ ಬಂದಿದೆಯೇನೋ ತಿಳಿಯದು. ಆದರೆ ಈಗ ಇರತಕ್ಕ ರಾಜ್ಯ ಐದು ಬೇರೆ ಬೇರೆ ಭಾಗಗಳನ್ನು ಒಳಗೊಂಡಿರತಕ್ಕದ್ದಾಗಿದೆ. ಹೀಗೆ ಒಟ್ಟುಗೂಡುವುದಕ್ಕೆ ಮುಂಚೆ ಆ ಹಳೆಯ ರಾಜ್ಯ ವಿದ್ದ ಕಾಲದಲ್ಲೇ ಕೆಲವು ನೀರಾವರಿ ಕಾಂಗಾರಿಗಳನ್ನು ಆ ಭಾಗಗಳಲ್ಲಿ ಒಂದೊಂದು ಕಾಂಗಾರಿಯನ್ನು ಒಂದೊಂದು ಕಾಲದಲ್ಲಿ ಕೈಗೊಳ್ಳಲಾಗಿದೆ. ನಮ್ಮ ಹಳೆಯ ಮೈಸೂರು ರಾಜ್ಯವಿದ್ದಾಗ 1944ರಲ್ಲಿ ತುಂಗಭದ್ರ ಇತ್ಯಾದಿ ಕೆಲವು ಜಲಾಶಯಗಳ ಕೆಲಸವನ್ನು ಪ್ರಾರಂಭಿಸಲಾಯಿತು. ಆದರೆ ಆ ಕಾರ್ಯಗಳಿನ್ನೂ ಮುಗಿದಿಲ್ಲ. ಬಹುಶಃ ಈ ಕಾರ್ಯಗಳೆಲ್ಲ ಈ ವರ್ಷ ಅಥವಾ ಮುಂದಿನ ವರ್ಷದ ಅವಧಿಯೊಳಗಾಗಿ ಪೂರೈಸಬಹುದು. ನಮ್ಮ ಹಳೆಯ ಮೈಸೂರು-ಮದರಾಸ್; ಹೈದರಾಬಾದ್ ಇತ್ಯಾದಿ ಕಡೆಗಳಲ್ಲಿ ಈಗ ಅರ್ಧ, ಮುಕ್ಕಾಲುವಾಸಿ ಕೆಲಸಗಳಾಗಿ ಇನ್ನು ಕೊಂಚ ಬಾಕಿ ಉಳಿದಿರತಕ್ಕ ಕೆಲಸಗಳು ಕೆಲವು ಇವೆ. ಆದರೆ ಈಗ ಸಭೆಯ ಮುಂದಿರುವ ಬಿಲ್ಲು ಸದ್ಯದಲ್ಲೇ ಆಕ್ಟಾಗಿ ಜಾರಿಗೆ ಬರುವುದರಲ್ಲಿದೆ. ಆದ್ದರಿಂದ ಈ ಆಕ್ಟ್ ಜಾರಿಗೆ ಬರತಕ್ಕ ತಾರೀಖಿನಿಂದ ಮುಂದೆ ಕಟ್ಟಲ್ಪಡುವ ಎಲ್ಲಾ ಜಲಾಶಯಗಳ ಬಗ್ಗೆ ಮತ್ತು ಈ ಆಕ್ಟ್ ಜಾರಿಗೆ ಬರುವ ತಾರೀಖಿನ ಹಿಂದೆ ಸೂಚಿಸಲಾಗಿರತಕ್ಕ ತಾರೀಖುಗಳಿಂದ ಆಯಾ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಈ ಆಕ್ಟ್ ಜಾರಿಗೆ ಬರಲಿದೆ. ಆದರೆ ಜಮೀನುಗಳಿಗೆ ಯಾವ ತಾರೀಖಿನಿಂದ ನೀರನ್ನೊದಗಿಸಲಾಗುತ್ತದೆಯೋ ಆ ತಾರೀಖಿನಿಂದ ಟ್ಯಾಕ್ಸನ್ನು ವಿಧಿಸಲಾಗುವುದು. ಆದುದರಿಂದ ಈಗ ಇದು ಕಾನೂನುಗಳ ಕಡಿತಕ್ಕೇರಿದರೂ ಇದು ಹಿಂದಿನ 1944-45ರ ಲಾಗಾಯ್ತಿನಿಂದ ಎಲ್ಲೆಲ್ಲಿ ಈ ನೀರಾವರಿ ಕಾಂಗಾರಿಗಳ ಕೆಲಸ ನಡೆಯುತ್ತಿದೆಯೋ ಆ ತಾರೀಖಿನಿಂದಲೂ ಇದು ಜಾರಿಗೆ ಬಂದಂತೆ—ಜಾರಿಯಲ್ಲಿದ್ದಂತೆ ಎನ್ನುವುದೇ ಈ ಕ್ಲಾಜಿನಲ್ಲಿ "ಅನ್ವಯಿಸುತ್ತದೆ" ಎಂಬ ಶಬ್ದದ ಅರ್ಥ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯಮಂತ್ರಿಗಳು ಕೊಟ್ಟ ವಿವರಣೆಗಾಗಿ ಅವರಿಗೆ ನನ್ನ ವಂದನೆಗಳು. ಯಾವತ್ತು ಜಮೀನಿಗೆ ನೀರನ್ನು ಒದಗಿಸಲಾಗುತ್ತದೆಯೋ ಆ ದಿವಸದಿಂದ ಈ ಸುಧಾರಣಾ ಅಂಶದಾನವನ್ನು ಕೊಡುವುದು ಭದ್ರವಾಗುತ್ತದೆಯೆಂಬುದಾಗಿ ತಿಳಿಸಿದರು. ಹಳೆಯ ಮೈಸೂರಿನಲ್ಲಿ 1944ನೇ ಇಸವಿಯ ಜನವರಿಯಿಂದೀಚೆಗೂ, ಮದರಾಸ್ ಕ್ಷೇತ್ರದಲ್ಲಿ 1947ನೇ ಇಸವಿ ಜನವರಿ ತಿಂಗಳಿನಿಂದೀಚೆಗೂ, ಹೈದ್ರಾಬಾದ್ ಕ್ಷೇತ್ರದಲ್ಲಿ 1947ನೇ ಆಗಸ್ಟ್ ತಿಂಗಳಿನಿಂದೀಚೆಗೂ ಮತ್ತು ಆ ಬೊಂಬಾಯಿ ಮತ್ತು ಕೊಡಗು ಪ್ರಾಂತ್ಯಗಳಲ್ಲಿ 1950ನೆ ಜನವರಿಯಿಂದೀಚೆಗೂ ಕೈಗೊಳ್ಳಲಾಗಿರುವ ಜಲಾಶಯಗಳ ಮೇಲೆ ಈ ಮೇಲ್ಪಾಡಾದ ಅಂಶದಾನವನ್ನು ಹಾಕತಕ್ಕದ್ದು ಎಂಬುದೇ ಈ (3)ನೇ ಕಲಂನ ಅರ್ಥ. ಈವರೆಗೂ ನಮ್ಮ ಮೈಸೂರಿನಲ್ಲಿ ಇರಿಗೇಷನ್ ಆಕ್ಟ್ ಎಂಬ ಒಂದು ಆಕ್ಟ್ ಜಾರಿಯಲ್ಲಿತ್ತು. ಆ ಆಕ್ಟಿನ ಆರನೆ ಅಧ್ಯಾಯದಲ್ಲಿ ಕಾಂಟ್ರಿಬ್ಯೂಷನ್ ವಿಧಿಸುವುದು ಮತ್ತು ಅದನ್ನು ವಸೂಲ್ಮಾಡುವುದು ಎಂಬುದಾಗಿ ಎರಡು ಅಂಶಗಳು ಇರುತ್ತವೆ. 1944ರಿಂದ ಈಚೆಗೆ ಹಳೆ ಮೈಸೂರು ದೇಶದಲ್ಲಿ ನುಗು-ತುಂಗಾ-ತುಂಗಭದ್ರಾ ಎಂಬ ಕೆಲವು ದೊಡ್ಡ ನೀರಾವರಿ ಕಾಂಗಾರಿಗಳು ಮತ್ತು ಇನ್ನೂ ಕೆಲವು ಸಣ್ಣ ಕಾಂಗಾರಿಗಳೂ ನಡೆಸಲ್ಪಟ್ಟಿರುತ್ತವೆ. ಈ ಜಲಾಶಯಗಳಿಂದ ನೀರನ್ನು ಸಾಗುವಳಿಗೆ ತೆಗೆದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಪ್ರತಿಯೊಬ್ಬ ಸಾಗುವಳೀದಾರನಿಂದ ಅಥವಾ ಹಿಡುವಳಿದಾರನಿಂದ ಎಕರೆಯೊಂದಕ್ಕೆ ಈ ಮೇಲ್ಪಾಟಿನ ಅಂಶದಾನವನ್ನು ಎಷ್ಟರತನಕ ಅಥವಾ ಯಾವ ದರದಲ್ಲಿ ವಸೂಲ್ಮಾಡಿಕೊಳ್ಳಬೇಕೆಂಬುದರ ಬಗ್ಗೆ ಆ ಹಿಡುವಳಿದಾರರಿಂದ ಒಂದು ಮುಚ್ಚಳಿಕೆಯನ್ನು ಸರ್ಕಾರದವರು ಈ ಹಿಂದೆ ಬರೆಸಿಕೊಂಡಿರುತ್ತಾರೆ.

2-30 P.M.

ಈ ಪ್ರತಿಯೊಂದು ನೀರಾವರಿ ಕಾಂಗಾರಿಗಳಲ್ಲೂ ಒಂದೊಂದಕ್ಕೆ ಎಷ್ಟು ಹಣ ನಿಶ್ಚಯವಾಗಿದೆ ಎಂಬ

(ಶ್ರೀ ಕೆ. ಪುಟ್ಟಸ್ವಾಮಿ)

ಅಂಕಿ ಅಂಶಗಳು ನನಗೆ ತಿಳಿಯದು. ನನಗೆ ಗೊತ್ತಿರುವ ಹಾಗೆ 150ರಿಂದ 300 ರೂಪಾಯಿಗಳವರೆಗೆ ಆಗಬಹುದು. ಈ ಮಸೂದೆ ಕಾನೂನು ಆದಮೇಲೆ ಸರಕಾರಿ ಅಧಿಕಾರಿಗಳು ಯಾವ ಯಾವದು ಎಷ್ಟೆಷ್ಟು ಎಂದು ನಿಶ್ಚಯ ಮಾಡುತ್ತಾರೋ ಅದರ ಮೇಲೆ ಅದು ಆಗುತ್ತದೆ ಎಂಬುದು ಮುಖ್ಯ ಪ್ರಶ್ನೆ. ಈಗಾಗಲೇ ಮುಚ್ಚಳಿಕೆ ಎಂದರೆ ಅಗ್ರಿಮೆಂಟ್ ಸರಕಾರಕ್ಕೂ ಹಿಡುವಳಿದಾರರಿಗೂ ಆಗಿದೆ. ಸರಕಾರ ನೀರಾವರಿ ಕಾಮಗಾರಿಗಳನ್ನು ಮಾಡುವುದು ಮತ್ತು ರೈತರು ಎಷ್ಟು ಹಣಕ್ಕೆ ಒಪ್ಪಿಕೊಂಡಿರುತ್ತಾರೋ ಅಷ್ಟು ಹಣ ಕೊಡುವುದು. ಗುಂಡ್ಲುಪೇಟೆ ತಾಲ್ಲೂಕ್ ಚಿಕ್ಕಹೊಳೆಯಲ್ಲಿ 750 ರೂಪಾಯಿ ಕಾಂಟ್ರಿಬ್ಯೂಷನ್ ನಿಷ್ಕರ್ಷೆಯಾಗಿದೆ ಎಂದು ತಿಳಿದಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ನಿಷ್ಕರ್ಷೆಯಾಗಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ವೇಳೆ ನಿಶ್ಚಯವಾಗದೆ ಇರಬಹುದು. ಮಾರ್ಪಾಟು ಮಾಡಿಕೊಳ್ಳಲಿಕ್ಕೆ ಬರುತ್ತದೆ. ಎಷ್ಟೆಷ್ಟು ನೀರಾವರಿ ಕಾಮಗಾರಿಗಳು ನಡೆದಿವೆ, ನೀರಾವರಿ ಕಾಮಗಾರಿಗಳ ರೀತ್ಯಾ ಕಾಂಟ್ರಿಬ್ಯೂಷನ್ ಕೊಡುವದಕ್ಕೆ ಎಷ್ಟು ಎಂದು ಕಡೆಗೆ ಮುಚ್ಚಳಿಕೆ ಬರೆಸಿಕೊಂಡು ಸರಕಾರಕ್ಕೂ ಹಿಡುವಳಿದಾರರಿಗೂ concluded agreement ಆಗಿದೆ ಎಂಬ ವಿಚಾರವನ್ನು ಉತ್ತರಕೊಡುವ ಸಮಯದಲ್ಲಿ ಮಂತ್ರಿಗಳು ಹೇಳಬೇಕೆಂದು ನಾನು ಕೋರುತ್ತೇನೆ. ಮದರಾಸ್, ಹೈದರಾಬಾದ್, ಕೊಡಗು ಈ ಪ್ರದೇಶಗಳಲ್ಲಿ ಕೂಡ ಎಷ್ಟು ಇದೆ ಎಂಬುದನ್ನು ಸಭೆಗೆ ತಿಳಿಸಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದ ಹಾಗೆ, ಅನೇಕ ಕಡೆ ಇರಿಗೇಷನ್ ಎನ್‌ಕ್ವಾಯಿರಿ ಮಾಡಿ ರೈತರು ಎಷ್ಟು ಕಾಂಟ್ರಿಬ್ಯೂಷನ್, ಕಂದಾಯ ಕೊಡುವುದಕ್ಕೆ ಒಪ್ಪಿಕೊಳ್ಳುತ್ತಾರೋ ಅಷ್ಟಕ್ಕೆ ಸರಕಾರವು ಒಪ್ಪಿಗೆಗೆ ಬರುತ್ತದೆ. 1944ರಿಂದ ಈಚೆಗೆ ಪ್ರಾರಂಭ ಮಾಡಿರತಕ್ಕಂಥ ಕೆಲವು ಕೆಲಸಗಳ ಇರಿಗೇಷನ್ ಇನ್‌ಕ್ವಾಯಿರಿ ಮಾಡಿಲ್ಲ ಮತ್ತು ಮುಚ್ಚಳಿಕೆ ಬರೆಸಿಕೊಳ್ಳಲಿಲ್ಲ. ಎಲ್ಲಿ ಒಪ್ಪಿಕೊಂಡಿದ್ದಾರೋ ಅಲ್ಲಿ ಕೆಲಸ ಪ್ರಾರಂಭ ಮಾಡಿದ್ದಾರೆ. ಯಾರಿಗೂ ಅನ್ಯಾಯವಾಗುವುದಿಲ್ಲ. 600-700 ರೂಪಾಯಿ ಕೊಡುತ್ತೇನೆಂದರೂ ಕಾನೂನು ಪ್ರಕಾರ ಹೆಚ್ಚಿಗೆ ತೆಗೆದುಕೊಳ್ಳಲಿಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು 3ನೆಯ ಕಲಮಿನ ಬಗ್ಗೆ ನನ್ನದು ಏನೇನೂ ಟೀಕೆ ಇಲ್ಲ. ನಾಲ್ಕನೆಯ ಕಲಮಿನ ವಿಚಾರ ಪರಿಶೀಲನೆ ಮಾಡಬೇಕು. ನಮ್ಮ ಹಳೆಯ ಮೈಸೂರಿನಲ್ಲಿ ಜಾರಿಯಲ್ಲಿ ಇರತಕ್ಕಂಥ ಇರಿಗೇಷನ್ ಆಕ್ಟಿನ ಆರನೆಯ ಅಧ್ಯಾಯದ ರೀತ್ಯಾ ಇರಿಗೇಷನ್ ಇನ್‌ಕ್ವಾಯಿರಿ ವಿಚಾರ ಮಾಡುವದಕ್ಕೆ P.W.D. ಆಫೀಸರುಗಳಿಗೆ ಅವಕಾಶವಿದೆ. ಸಾಮಾನ್ಯವಾಗಿ ಈ ಕೆಲಸವನ್ನು ಅಸಿಸ್ಟೆಂಟ್ ಇಂಜಿನಿಯರರು ಮಾಡುತ್ತಾರೆ. 1950ರ ಮುಂಚೆ ಕಾಣುತ್ತದೆ, ನಮ್ಮ ಆರ್ಥಿಕ ಮಂತ್ರಿಯವರಾದ ಶ್ರೀ ಮರಿಯಪ್ಪನವರು P.W.D. ಮಂತ್ರಿಯಾಗಿದ್ದಾಗ, ರೆವಿನ್ಯೂ ಆಫೀಸರರಿಗೆ ಮಾಡಲಿಕ್ಕೆ ಬಹಳ ನಿಧಾನವಾಗುತ್ತದೆ, ಅಷ್ಟು ವೇಗದಿಂದ ಕೆಲಸಕಾರ್ಯಗಳು ನಡೆಯುವದಿಲ್ಲವಾದ್ದರಿಂದ ಇರಿಗೇಷನ್ ಇನ್‌ಕ್ವಾಯಿರಿ ಮುಗಿಯದ ಹೊರತು ಮುಂದಿನ ಕೆಲಸವಾಗುವದಿಲ್ಲವೆಂದು ಒಂದು ತಿದ್ದುಪಡಿಯನ್ನು ತಂದು P.W.D. ಆಫೀಸರುಗಳು ಮಾಡುವದಕ್ಕೆ ಒಂದು ವ್ಯವಸ್ಥೆ ಮಾಡಿದರು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಪ್ರೊಜೆಕ್ಟು ರಿಪೇರಿ ಮಾಡತಕ್ಕ ಅಸಿಸ್ಟೆಂಟ್ ಇಂಜಿನಿಯರರು ಇನ್‌ಕ್ವಾಯಿರಿ ಮಾಡಬೇಕಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಲ್ಪ ಕಾಲವಿಳಂಬವಾಗುತ್ತದೆ. ರೆವಿನ್ಯೂ ಅಧಿಕಾರಿಗಳು ಈ ಕೆಲಸವನ್ನು ವಹಿಸಿಕೊಂಡರೆ ಅವರಿಗೆ ಅನೇಕ ಬೇರೆಬೇರೆ ತೀವ್ರವಾಗಿ ಮಾಡತಕ್ಕ ಕೆಲಸಕಾರ್ಯಗಳು ಇರುವದರ ಪ್ರಯುಕ್ತ ನೀರಾವರಿ ಕಾಮಗಾರಿಗಳ ಬಗ್ಗೆ ಎಷ್ಟು ಮುತುವರ್ಜಿ ವಹಿಸಬೇಕೋ ಅಷ್ಟು ವಹಿಸಲು ಆಗುವದಿಲ್ಲ. ಆದಕಾರಣ ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಒಂದು ತಿದ್ದುಪಡಿ ಆಯಿತು. ಈಗ ಪುನಃ ಯಥಾಪ್ರಕಾರ ಕಲೆಕ್ಟರ, ಡೆಪ್ಯುಟಿ ಕಮಿಷನರ, ಸಬ್ ಡಿವಿಜನಲ್ ಆಫೀಸರರು ಮಾಡುವುದು ಆಗಿದೆ. ಹಿಂದೆ ಅವರು ಜವಾಬ್ದಾರಿ ವಹಿಸಿ ಕೆಲಸಮಾಡಿದಾಗ ಇದು ಸಮರ್ಪಕವಾಗಿ ಆಗುವುದಿಲ್ಲ ಎಂದು ಕಂಡ ಬಂದಿದೆ. ಈ ಪ್ರೊಜೆಕ್ಟು ಯಾರು ತಯಾರುಮಾಡುತ್ತಾರೋ ಅವರೇ ಎಷ್ಟು ಎಕರೆ ನೀರಾವರಿ ಆಗುತ್ತದೆ ಎಲ್ಲಿ ಅಣೆಕಟ್ಟು ಆಗಬೇಕು ಎಂಬುದನ್ನು ನಿರ್ಧರಿಸಬೇಕು.

Sri H. K. VEERANNA GOWDH.—Is the Hon'ble Member referring to clause 6 ?

Sri K. PUTTASWAMY.—No, Sir. I am referring to clause 4 which says :

> "Subject to such rules as may be prescribed, the Collector shall determine the contribution payable in respect of each of the lands mentioned in section 3, after taking into account the increase in its capital value as estimated in the prescribed manner."

ಇದನ್ನು ರೆವಿನ್ಯೂ ಅಧಿಕಾರಿಗಳು ಮಾಡುವದರಿಂದ ಬಹಳ ನಿಧಾನವಾಗುವದಕ್ಕೆ ಅವಕಾಶವಿದೆ. ಆ ಸ್ಥಳದಲ್ಲಿ P.W.D. ಅಧಿಕಾರಿಗಳು ಸರ್ವೆ ಮಾಡಬೇಕಾಗುತ್ತದೆ. ಆಗತಕ್ಕಂಥ ಅಣೆಕಟ್ಟು, ನೀರಾವರಿ ಆಗತಕ್ಕ ಅಚ್ಚುಕಟ್ಟು ಎಷ್ಟು ಎಂಬುದನ್ನು ಅವರೇ ನಿರ್ಧರಿಸಬೇಕಾಗುತ್ತದೆ. ಯಾವ ಸ್ಥಳದಲ್ಲಿ ನೀರಾವರಿಗೆ ಅನುಕೂಲವಾಗುತ್ತದೆ ಎಂಬುದನ್ನು ಅವರೇ ಮಾಡಬೇಕಾಗುತ್ತದೆ. ಸ್ಥಳೀಯ ಜನರಿಗೂ ಗೊತ್ತುಆಗುತ್ತದೆ. ಅಣೆಕಟ್ಟಿನ ಖರ್ಚು ಎಷ್ಟು ಅದಕ್ಕೆ ತಕ್ಕ ಕಾಂಟ್ರಿಬ್ಯೂಷನ್ ಎಷ್ಟು ಎಲ್ಲವೂ ಗೊತ್ತಾಗುತ್ತದೆ. ಜಮೀನು ನೀರಾವರಿ ಆಗುವುದರಿಂದ ಎಷ್ಟರಮಟ್ಟಿಗೆ ಬೆಳೆ ಹೆಚ್ಚಾಗಬಹುದು ಎಂಬುದು ಗೊತ್ತಾಗುತ್ತದೆ. ಜಮೀನು ನೀರಾವರಿಯಾಗಿ ಬೆಳೆ ಹೆಚ್ಚಿಗೆ ಬಂದರೂ ಕಾಂಟ್ರಿಬ್ಯೂಷನ್ 500 ರೂಪಾಯಿ ಮೀರಕೂಡದು ಎಂಬುದು ಸಮರ್ಪಕವಾಗಿದೆ. ಕಲೆಕ್ಟರ್ ಸಬ್‌ಡಿವಿಜನಲ್ ಆಫೀಸರರಿಗಿಂತ ಈ ಕಾರ್ಯ P.W.D. ಆಫೀಸರರು ಮಾಡುವುದಕ್ಕೆ ಹೆಚ್ಚು ಅನುಕೂಲ ಇರುತ್ತದೆ. ಆದಕಾರಣ ಏತಕ್ಕೆ ಈ ರೀತಿಯಾಗಿ ಮಾಡಬಾರದು ಎಂಬುದನ್ನು ಮಾನ್ಯಮಂತ್ರಿಗಳು ಪರಿಶೀಲನೆ ಮಾಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಇರಿಗೇಷನ್ ಆಕ್ಟು ಪ್ರಕಾರ ಪ್ರೊಜೆಕ್ಟ್ ಮಾಡುವಾಗಲೇ P.W.D. ಆಫೀಸರರು ನಿರ್ಧಾರ ಮಾಡುತ್ತಾರೆ. ಆಮೇಲೆ ಅವರು ಕಳಿಸಿದ ರಿಪೋರ್ಟಿನ ಮೇಲೆ ಬಹುಶಃ ಕಲೆಕ್ಟರರು

ಡಬ್ಬಲ್ ಸೇಫ್ಟಿಗಾಗಿ ವಿಮರ್ಶೆಮಾಡಬೇಕಾಗುತ್ತದೆಂದು ಕಾಣುತ್ತದೆ. ಇದನ್ನು ಸೆಲೆಕ್ಟ್ ಕಮಿಟಿಯಲ್ಲಿ ಆಮೂಲಾಗ್ರವಾಗಿ ವಿಮರ್ಶೆಮಾಡಿ ಅವಶ್ಯವಿರುವ ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಆ ಸಂಬಂಧಪಟ್ಟ ಚಾಪ್ಟರು ರಿಪೀಲು ಆಗುತ್ತದೆಯೇ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಅದಕ್ಕಾಗಿ ಇದನ್ನು ಸೆಲೆಕ್ಟ್ ಕಮಿಟಿಯವರು ನೋಡಿ ಪರಿಹಾರಮಾಡಬೇಕಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಬಿಲ್ಲಿನ ನಾಲ್ಕನೆಯ ಕಲಮ್ಮಿನ ಬಗ್ಗೆ ಇನ್ನೊಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಅಪೇಕ್ಷಿಸುತ್ತೇನೆ. ಈ ಸಬ್ ಕ್ಲಾಸಿನಲ್ಲಿ ಈರೀತಿ ಇದೆ :

" After taking into account the increase in its capital value as estimated in the prescribed manner "

ಬಹುಶಃ ಇದನ್ನು ಯಾವರೀತಿ ಮಾಡಬೇಕು ಎನ್ನುವುದನ್ನು ನಿರ್ಧರಮಾಡಬೇಕಾಗಿದೆ. ಇದೇನೋ ಸರಿ. ಮೂರನೆಯ ಸಬ್ ಕ್ಲಾಸಿನಲ್ಲಿ :

" 3. Any land holder aggrieved by any determination made by the Collector under sub-section (1) may, within the prescribed time, appeal to the prescribed authority and the prescribed authority may pass such orders on the appeal as it thinks fit."

ಎಂದಿದೆ. ಇದು ಒಂದು ಅಪೆಲಟ್ ಅಥಾರಿಟಿ. ಈಗ ಡೆಪ್ಯುಟೀ ಕಮಿಷನರವರು ಒಂದು ನಿರ್ಧಾರಮಾಡಿದ ಮೇಲೆ ಅದಕ್ಕೆ ಸ್ಟೇ ಆರ್ಡರ್ ಕೊಡಲು ಯಾರಿಗೆ ಅಪೀಲು ಮಾಡಬೇಕು ಎನ್ನುವ ವಿಚಾರವಾಗಿ ಬಹುಶಃ ಸರ್ಕಾರದವರು ಸರಿಯಾದ ನಿರ್ಧಾರಕ್ಕೆ ಬಂದಿಲ್ಲ. ಅದು ಏತಕ್ಕಾಗಿ ಎನ್ನುವುದು ಸರಿಯಾಗಿ ತಿಳಿಯುವುದಿಲ್ಲ. ಅಪೀಲು ಯಾರಿಗೆ ಕೊಡಬೇಕು ಎನ್ನುವುದನ್ನು ಕೂಡ, ನಾವು ಕಾನೂನುಮಾಡುವಾಗ, ಒಂದು ಅನಿಶ್ಚಿತ ಸ್ಥಿತಿಯಲ್ಲಿ ಬಿಡುವುದಕ್ಕೆ ಕಾರಣವಾದರೂ ಏನು ಎನ್ನುವುದನ್ನು ಸಹ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ರೂಲ್ಸಿನಲ್ಲಿ ಅವಕಾಶ ಮಾಡಬಹುದಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ಡಿ.ಸಿ. ಆರ್ಡರಿನ ಮೇಲೆ ಅಪೀಲು ಹೋಗಬೇಕಾದರೆ ಯಾರಿಗೆ ಅಪೀಲು ಹೋಗಬೇಕು ಎನ್ನುವುದು ರೂಲ್ಸಿನಲ್ಲಿ ಬರುವುದು ಅಷ್ಟು ಸಾಧುವಾದುದಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಕ್ಲಾಸು (1) ಮತ್ತು (3) ಒಂದಕ್ಕೊಂದಕ್ಕೆ ಸಂಬಂಧಪಟ್ಟಿದೆ. ಆದ್ದರಿಂದ ಯಾರು ಲೆವಿ ಮಾಡಬೇಕು ಮತ್ತು ಅಪೀಲನ್ನು ಯಾರು ತೀರ್ಮಾನ ಮಾಡಬೇಕು ಎನ್ನುವುದೇ ಇಲ್ಲಿರುವ ವಿಷಯ.

ಶ್ರೀ ಬಿ. ಕೆ. ಪುಟ್ಟಸ್ವಾಮಿ.—ಕಲೆಕ್ಟರು ಎನ್ನುವುದಕ್ಕೆ ಅರ್ಥ ಹೀಗೆ ಕೊಟ್ಟಿದೆ :

" 'Collector' means the Collector or Deputy Commissioner of a District or such other officer not below the rank of a Deputy Collector or Assistant Commissioner as the Government may appoint to discharge the functions of the Collector or Deputy Commissioner under this Act."

ಶ್ರೀ ಹೆಚ್. ಕೆ. ವೀರಣ್ಣಗೌಡ.—ನಾನು ಹೇಳುವುದು ಅದಲ್ಲ. ಪ್ರಿಸ್‌ಕ್ರೈಬ್ಡ್ ಅಥಾರಿಟಿ ಪಿ.ಡಬ್ಲ್ಯು.ಡಿ. ಆಫೀಸರು ಇರಬೇಕೇ ಮತ್ತು ಅವರು ಕೊಟ್ಟ ತೀರ್ಮಾನದಮೇಲೆ ಅಪೆಲೆಟ್ಟು ಅಥಾರಿಟಿ ಯಾರು ಎನ್ನುವುದು ತೀರ್ಮಾನವಾಗಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಮಯದಲ್ಲಿ ಒಂದೇ ಒಂದು ನಿರ್ದಿಷ್ಟವಾದ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಅಪೆಲೆಟ್ಟು ಅಥಾರಿಟಿ ಯಾರು ಎನ್ನುವುದು ಖಚಿತವಾಗಿ ನಿರ್ಧಾರವಾಗಿಲ್ಲ. ಮೊದಲು ಕಾಂಟ್ರಿಬ್ಯೂಷನ್ ಕೊಡುವುದನ್ನು ಯಾರು ನಿರ್ಧಾರಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡಿದಮೇಲೆ ಅಪೀಲುಗಳನ್ನು ಖಚಿತವಾಗಿ ಯಾರು ತೀರ್ಮಾನಮಾಡಬೇಕೆನ್ನುವುದನ್ನು ನಿರ್ಧಾರಮಾಡಬಹುದು ಎಂದು ನನ್ನ ಅಭಿಪ್ರಾಯ. ಐದನೇ ಕಲಂ ಎರಡನೆಯ ಸಬ್ ಕ್ಲಾಸಿನ ಕೊನೆಯ ಸಾಲಿನಲ್ಲಿ :

" the Land holder or in respect of any instalment of the contribution "

ಎಂದಿದೆ. ಇಲ್ಲಿ " or " ಎನ್ನುವುದು ಒಂದು ಅಚ್ಚಿನ ತಪ್ಪೆಂದು ನನಗೆ ತೋರುತ್ತದೆ. ಆ ಸಬ್ ಕ್ಲಾಸು ಹೀಗಿದೆ :

" 2. For the avoidance of doubt it is hereby declared that it shall not be necessary to serve notice on any person other than the land holder who has an interest in the land or a successor in interest of the land holder or in respect of any instalment of the contribution."

ಇದು ಅರ್ಥಕೊಡುವುದಿಲ್ಲ. " or " ಎನ್ನುವ ಪದ ಅಲ್ಲಿ ಬರಬೇಕಾಗಿಯೇ ಇರಲಿಲ್ಲ. ಆರನೆಯ ಕ್ಲಾಜಿನ ವಿಚಾರವಾಗಿ ಮಾತ್ರ ಒಂದು ವಿಷಯ ಹೇಳಬೇಕಾಗಿದೆ. ಇದು ವಿಶಿಷ್ಟ ಸಮಿತಿಯವರು ಬಹಳ ತೀವ್ರವಾಗಿ ಪರಿಶೀಲನೆಮಾಡಬೇಕಾದ ಕಾಲಂ ಎಂದು ಕಾಣುತ್ತದೆ. ಕಾಂಟ್ರಿಬ್ಯೂಷನನ್ನು ಕೊಡುವಾಗ ಯಾವ ರೀತಿ ಕೊಡಬೇಕು ಎನ್ನುವುದನ್ನು ಹೇಳಿದ್ದಾರೆ. ಅದನ್ನು ಇಪ್ಪತ್ತು ಕಂತುಗಳಲ್ಲಿ ಕೊಡಬೇಕು ಎಂದಿದೆ. ಮುಂಚಿತವಾಗಿ ಕೊಟ್ಟರೆ ರೀಬೇಟ್‌ಕೊಡಬೇಕು. ಇದನ್ನೆಲ್ಲ ಒಟ್ಟಿಗೆ ಕೊಡಬೇಕಾದರೆ ರೈತನಿಗೆ ಹಿಂಸೆಯಾಗುತ್ತದೆ. ಅದನ್ನು ಜಮೀನು ರೂಪದಲ್ಲಿಯೂ ಕೊಡಬಹುದು ಎಂದಿದೆ.

" Where the landholder chooses to pay the whole or part of the contribution by surrendering lands, the surrender shall be subject to the following conditions."

(ಶ್ರೀ ಕೆ. ಪುಟ್ಟಸ್ವಾಮಿ)

ಅಲ್ಲಿಗೆ ಕಡ್ಡಾಯವೇನಿಲ್ಲ. ಕಾಂಟ್ರಿಬ್ಯೂಷನ್ ಹಣದ ರೂಪದಲ್ಲಿ ಕೊಡಬಹುದು. ಹಣದ ರೂಪದಲ್ಲಿ ಕೊಡುವುದಕ್ಕಾಗದ ಸಂದರ್ಭದಲ್ಲಿ ಜಮೀನು ರೂಪದಲ್ಲಿ ಕೊಡಬಹುದು ಎಂದು ಹೇಳಿದ್ದಾರೆ. ಇದನ್ನು ಒಪ್ಪಿಕೊಳ್ಳುವುದು ಅಗತ್ಯವೇ ಎನ್ನುವುದನ್ನು, ವಿಶಿಷ್ಟ ಸಮಿತಿಯವರು ಬಹಳ ತೀವ್ರವಾಗಿ ಪರಿಶೀಲನೆ ಮಾಡಬೇಕು. ಕೊನೆಯದಾಗಿ ಒಂದು ವಿಷಯ ವಿದೆ :—

“ ಪರಂತು, ಕಲೆಕ್ಟರು ಸದರಿ ಭೂಮಿಯು ದುರ್ಗಮವಾಗಿರುವುದೆಂಬ ಅಥವಾ ಅನಾನುಕೂಲವಾದ ಸ್ಥಳದಲ್ಲಿರುವದೆಂಬ ಕಾರಣದ ಮೇಲೆ ಅಥವಾ ವಿಧಾಯಕ ಮಾಡಬಹುದಾದಂಥ ಇತರ ಕಾರಣಗಳಮೇಲೆ ಸದರಿ ಒಪ್ಪಿಸಿಕೊಡೋಣವನ್ನು ಸ್ವೀಕರಿಸಲು ನಿರಾಕರಿಸಬಹುದು ”

ಎಂದು ಕನ್ನಡದಲ್ಲಿರುವ ಬಿಲ್ಲಿನಲ್ಲಿದೆ. ಇಂಗ್ಲಿಷಿನಲ್ಲಿಲ್ಲ. ಇದನ್ನು ಏತಕ್ಕಾಗಿ ಓದಿ ಹೇಳಿದೆ ಎಂದರೆ ಡೆಪ್ಯುಟೀ ಕಮಿಷನರವರಿಗೆ ಒಂದು ಅಧಿಕಾರವಿದೆ. ಜಮೀನು ಒಳ್ಳೆಯದಲ್ಲ, ಬಹಳ ದೂರದಲ್ಲಿದೆ ಅದಕ್ಕೆ ಬೆಂಬಾಳುವುದಿಲ್ಲ ಅಥವಾ ಅದರ ಟೈಟಲ್ಲು ಸಮರ್ಪವಾಗಿಲ್ಲ ಎನ್ನುವ ಕಾರಣದಮೇಲೆ ಜಮೀನನ್ನು ಒಪ್ಪಿಕೊಳ್ಳದೆ ಹೋಗಬಹುದು. ಸಾಧಾರಣವಾಗಿ ರೈತ ಜಮೀನು ಕೊಡಬೇಕೆಂದರೆ ಕೊಡುವುದಿಲ್ಲ. ಸ್ವಾಮಿ, ಇಷ್ಟು ಮಾತ್ರ ಖಚಿತ. ರೈತ ತನ್ನ ಜೀವವನ್ನಾದರೂ ಕೊಟ್ಟಾನೇ ವಿನಾ ಜಮೀನನ್ನು ಕೊಡುವುದಿಲ್ಲ. ಜಮೀನು ಕೊಟ್ಟೇ ಕೊಡಬೇಕೆಂದರೆ ಅವನ ಅನುಕೂಲಕ್ಕೆ ಬಾರದಂತಹದಿರಬೇಕು. ಅಂತಹದನ್ನೇ ಕೊಡುತ್ತಾನೆ. ವ್ಯವಸಾಯುಗಾರ ಎಷ್ಟೇ ಅನಾನುಕೂಲದಲ್ಲಿ ಇರಬಹುದು. ಆದರೆ ತನ್ನ ಜಮೀನು ಬಿಟ್ಟು ಕೊಡುವುದಿಲ್ಲ. ಒಂದು ವೇಳೆ ಜಮೀನನ್ನು ಕಾಂಟ್ರಿಬ್ಯೂಷನ್ನಿಗೆ ಬದಲಾಗಿ ಕೊಟ್ಟರೂ ನಮ್ಮ ಡೆಪ್ಯುಟೀ ಕಮಿಷನರು ಒಪ್ಪದೆ ಇರಲು ಅವಕಾಶ ಮಾಡಿದ್ದೀರಿ. ಅಂತಹ ಕಲಂನ್ನು ತಾವು ಇಲ್ಲಿ ಇಟ್ಟಿದ್ದೀರಿ. ಆದರಿಂದ ಏನು ಪರಿಣಾಮವಾಗುತ್ತದೆ ಎಂದರೆ, ಯಾವ ಜಮೀನು ಬೇಕಾದರೂ ಯೋಗ್ಯವಲ್ಲ ಎಂದು ಹೇಳಬಹುದು. ನ್ಯಾಯವಾಗಿ ಚೆನ್ನಾಗಿರತಕ್ಕ ಜಮೀನನ್ನು ಯೋಗ್ಯವಲ್ಲ ಎಂದು ಎನ್ನುವುದಕ್ಕೆ ಕಾರಣವಾಗುತ್ತದೆ. ಜಮೀನಿಗೆ ಬೆಲೆ ಇರುವ ಕಾಲದಲ್ಲಿ ಜಮೀನು ರೂಪದಲ್ಲಿ ಕಾಂಟ್ರಿಬ್ಯೂಷನ್ ಕೊಡಬಹುದು ಎಂದು ಒಂದು ಕಲಂ ಇಟ್ಟುಕೊಳ್ಳಲಾಗದಿದ್ದರೆ ಇದನ್ನೇಕೆ ಇಟ್ಟುಕೊಳ್ಳಬೇಕು ?

ಎರಡನೆಯದು, ಇದೂ ಒಂದು ವಿಧದಲ್ಲಿ ಕಾಫಿ, ಟೀ ವ್ಯಾಪಾರದಂತೆ ಈಗ ಜಮೀನನ್ನು ಮಾರುವುದೂ ಸುಲಭ, ಅದನ್ನು ಹಣಕ್ಕೆ ತೆಗೆದುಕೊಳ್ಳುವುದೂ ಸುಲಭ. ರೈತ ತಾನು ಸರಕಾರಕ್ಕೆ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ತನ್ನ ಜಮೀನನ್ನು ಮಾರಿ ಸುಖವಾಗಿ ಕೊಡಬಹುದು. ಅನೇಕವೇಳೆ ಯೋಗ್ಯವಾದ ಭೂಮಿಯಿರಬಹುದು. ಅದನ್ನು ಕಾಂಟ್ರಿಬ್ಯೂಷನ್ನಿನ ರೂಪವಾಗಿ ಕೊಡಬೇಕು ಎಂದರೆ ತಕರಾರು ಮಾಡುವುದಕ್ಕೆ ಕಾನೂನು ಇದೆ. ಯೋಗ್ಯವಾದ ಯಾವ ಬೆಳೆಯನ್ನೇ ಆಗಲೀ ಬೆಳೆಯುತ್ತಿಲ್ಲ ಎಂದು ಹೇಳಲು ಅವಕಾಶವಾಗುತ್ತದೆ. ಆ ರೀತಿ ಏತಕ್ಕೆ ಮಾಡಬೇಕು ಎಂದು ಆಲೋಚನೆಮಾಡಬೇಕು.

ಹಿಂದೆ ಕೃಷ್ಣರಾಜಸಾಗರ ಅಣೆಕಟ್ಟನ್ನು ಕಟ್ಟುವಾಗ ಕೆಲವು ಕಡೆ ಎಷ್ಟೋ ಜಮೀನುಗಳನ್ನು ಬಿಡಿಸಿಕೊಂಡಿದ್ದರು. ಅದಕ್ಕೆ ಕಾನೂನು ಬಲ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆಗಾಗ್ಗೆ ಮಳೆಯಿಂದ ಚಾನಲ್ ತುಂಬಿಹೋಗಿ ಬನ್ನೂರು ಹೋಬಳಿಯಲ್ಲಿ ಹೆಚ್ಚು ನೀರು ಹರಿಯುತ್ತದೆ, ಅಲ್ಲಿ $\frac{1}{3}$ ಭಾಗ ಜಮೀನು ಬಿಟ್ಟುಕೊಡಬೇಕು ; ಇಲ್ಲದಿದ್ದರೆ ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಗೊತ್ತುಮಾಡಿದರು. ಹಾಗೆ ಸರ್ಕಾರದವರು ತೆಗೆದುಕೊಂಡ ಜಮೀನನ್ನು ಯಾವ ರೀತಿಯಲ್ಲೂ ಇದುವರೆಗೂ ವಿಲೇವಾರಿ ಮಾಡಿಲ್ಲ; ಅದನ್ನು ಬಿಡಿಸಿಕೊಂಡದ್ದು ಎಕ್ಸ್ ಪ್ರೊಪ್ರಿಯೇಟೆಡ್ ರೈತರಿಗೆ ಕೊಡಬೇಕು ಎನ್ನುವ ಉದ್ದೇಶದಿಂದ ಕೃಷ್ಣರಾಜಸಾಗರ ಅಣೆಕಟ್ಟಿನ ಸಂಬಂಧದಲ್ಲಿ $\frac{1}{3}$ ಭಾಗ ಜಮೀನನ್ನು ಬಿಡಿಸಿಕೊಂಡಿದ್ದರ ಮೇಲೆ ಅದನ್ನು ಜಮೀನು ಮುಳುಗಡೆಯಾದವರಿಗೆ ವಿಲೇವಾರಿ ಮಾಡುವ ವಿಚಾರಕ್ಕೆ ಸರ್ಕಾರದವರು ಗಮನಕೊಟ್ಟಿಲ್ಲ. 25-30 ಎಕರೆ ತರೀ ಜಮೀನು ಇದ್ದವರಿಗೇ ಪುನಃ ಈ ಜಮೀನನ್ನು ಕೊಟ್ಟ ಭಾಗದಲ್ಲಿ ಅದರಿಂದ ಜಮೀನಿಲ್ಲದವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಇದು ದೋಷವಾಗುತ್ತದೆ. ನಾನು ಸರ್ಕಾರದ ಮೇಲೆ ಆರೋಪಣೆ ಮಾಡುತ್ತಿದ್ದೇನೆಂದು ಭಾವನೆ ಮಾಡಬಾರದು. ಬಿಡಿಸಿಕೊಂಡ ಜಮೀನನ್ನು ಬೇರೆಯವರಿಗೆ ಗ್ರಾಂಟ್ ಮಾಡುವಾಗ ಜಮೀನ್ದಾರರಿಗೇ ಆ ಜಮೀನನ್ನು ಕೊಟ್ಟರೆ ದೋಷಗಳು ಬರುವುದಕ್ಕೆ ಕಾರಣವಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಪರಿಶೀಲನೆಮಾಡಬೇಕು. ಹೆಚ್ಚು ಜಮೀನು ಇಟ್ಟುಕೊಂಡಿರುವವರು ಕಾಂಟ್ರಿಬ್ಯೂಷನ್ನಿಗೆ ಬದಲಾಗಿ ಜಮೀನು ಬಿಟ್ಟುಕೊಟ್ಟರೆ ಅದನ್ನು ಜಮೀನು ಇಲ್ಲದವರಿಗೆ ಕೊಡುವುದಕ್ಕೆ ಅನುಕೂಲವಾಗಲಿ ಎನ್ನುವ ಒಂದೇ ಒಂದು ಅಂಶ ಇದರಲ್ಲಿ ಕಾಣುತ್ತದೆ. ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಭಯ ನನಗಿದೆ. ಇದನ್ನು ಕಮಿಟಿಯವರು ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ಕಾಂಟ್ರಿಬ್ಯೂಷನ್ ಬಾಕಿ ಬಿದ್ದಾಗ ಅದಕ್ಕೆ ಬಡ್ಡಿಯನ್ನು ಪ್ರಿಸ್ಕ್ರೈಬ್ ರೇಟಿನಂತೆ ಕೊಡಬೇಕೆಂದರೆ ಕಷ್ಟವಾಗುತ್ತದೆ. ಆದರೆ ಸರಿಯಾದ ಬಡ್ಡಿಯನ್ನು ಇಷ್ಟೇ ಇರಬೇಕೆಂದು ಗೊತ್ತುಮಾಡುವುದಕ್ಕೆ ಕಷ್ಟವಿಲ್ಲ. ಆ ರೀತಿ ಗೊತ್ತುಮಾಡುವುದಕ್ಕೆ ಅವಕಾಶವಿದೆಯೆಂದು ನಾನು ಹೇಳುತ್ತೇನೆ.

ಇನ್ನು 10ನೆಯ ಕ್ಲಾಸಿನ ವಿಚಾರ. ಇದು ನೀರು ಸರದಿಯನ್ನು ವಿಧಿಸುವ ಕ್ರಮವನ್ನು ನಿರ್ಧರಿಸುತ್ತದೆ. ಅದರಲ್ಲಿ ‘Government should be entitled to levy a separate charge referred to as water rate’ ಎಂದು ಹೇಳಿದ್ದಾರೆ. ಈ ಕ್ಲಾಸಿನ ಪ್ರಕಾರ ನೀರು ಸರದಿಯನ್ನು ವಸೂಲು ಮಾಡಬಹುದು. ನೀರು ಸರದಿಗೆ ಏನು ಆಧಾರ, ಯಾವ ರೀತಿ ವಸೂಲು ಮಾಡಬೇಕು, ಬೆಳೆಯ ಆಧಾರದ ಮೇಲೆ ನೀರು ಸರದಿಯನ್ನು ವಸೂಲು ಮಾಡುತ್ತಾರೆಯೇ, ಹಾಗೆ ಮಾಡಿದರೆ ಎಷ್ಟು ಪ್ರಮಾಣದಲ್ಲಿ ನೀರನ್ನು ಉಪಯೋಗಿಸುತ್ತಾರೆ, ಎಷ್ಟು ಕಾಲ ಉಪಯೋಗಿಸುತ್ತಾರೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೇ, ಸರ್ಕಾರದವರು ಯಾವ ರೀತಿ ನೀರು ಸರದಿಯನ್ನು ವಿಧಿಸಬೇಕೆಂದಿದ್ದಾರೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಎಷ್ಟು ಹಣ ವಿಧಿಸಬೇಕೆಂದಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ಈಗ ಕೆಲವು ಕಡೆ 10 ರೂಪಾಯಿಗಳು ಇವೆ. ಇಷ್ಟು ಹಣಕ್ಕಿಂತ ಹೆಚ್ಚಿಗೆ ವಿಧಿಸಕೂಡದು ಎಂದು ಯಾವ ಪರಿಮಿತಿಯೂ ಇಲ್ಲ. ಕಾನೂನು ಮಾಡುವಾಗ ಈ ರೀತಿ ಡಿಲಿಗೇಟೆಡ್ ಲೆಜಿಸ್ಲೇಷನ್ ಮಾಡುವುದು ಸರಿಯಲ್ಲ. ಸರ್ಕಾರವೇ ಈ ರೀತಿ ಕಾನೂನು ಮಾಡುವುದನ್ನೆಲ್ಲಾ ವಹಿಸಿಕೊಳ್ಳುವುದು

ಸರಿಯಲ್ಲ. ಈ ಕಾಲದಲ್ಲಿ ಕೆಲವರು ಡಿಲಿಗೇಟೆಡ್ ಲೆಜಿಸ್ಲೇಷನ್ ಇಲ್ಲದೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಈ ಸಭೆಯು ಇದನ್ನೆಲ್ಲಾ ನಿರ್ಧಾರಮಾಡಬೇಕೆಂದರೆ ಬಹುಶಃ 365 ದಿನಗಳೂ ಈ ಸಭೆ ಸೇರಬೇಕಾಗುತ್ತದೆ ಮತ್ತು ಕಾರ್ಯಾಂಗಕ್ಕೆ ಬೇರೆ ಯಾವ ಕೆಲಸವನ್ನು ಮಾಡುವುದಕ್ಕೂ ಅವಕಾಶವಿರುವುದಿಲ್ಲ. ಆದ್ದರಿಂದ ಉಪ ಕಾನೂನುಗಳನ್ನು ಮಾಡಲು ಈ ಸಭೆಗೆ ಇರುವ ಅಧಿಕಾರವನ್ನು ನಾವು ಸರ್ಕಾರಕ್ಕೆ ವಹಿಸಿಕೊಡಬೇಕಾದದ್ದು ಅಗತ್ಯವಾಗಿದೆ. ಅದನ್ನು ವಹಿಸಿಕೊಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಯಾವ ರೀತಿಯಲ್ಲಿ ಮಾಡುತ್ತಾರೆ ಎನ್ನುವುದನ್ನು ಇದರಲ್ಲಿ ಕಾಣಿಸಬೇಕು. ಉದಾಹರಣೆಗೆ ಕಾಂಟ್ರಿಬ್ಯೂಷನ್ ವಿಚಾರ ಹೇಳಿದ್ದಾರೆ. ಕಾಂಟ್ರಿಬ್ಯೂಷನ್ ಯಾವ ರೀತಿ ಹಾಕಬೇಕು ಎಂಬ ವಿಚಾರದಲ್ಲಿ ಏನು ನಿಯಮವಿದೆಯೆಂದರೆ, ಆ ಜಮೀನಿಗೆ ನೀರು ಒದಗಿಸಿದಮೇಲೆ ಜಮೀನಿಗೆ ಎಷ್ಟು ಪ್ರಮಾಣದಲ್ಲಿ ವರಮಾನವಿರುತ್ತದೋ ಆ ಪ್ರಮಾಣವನ್ನು ಗಮನದಲ್ಲಿ ಇಟ್ಟುಕೊಂಡು ಬೆಟರ್‌ಮೆಂಟ್‌ಫೀಯನ್ನು ನಿರ್ಧಾರ ಮಾಡಬೇಕು ಎಂದಿದೆ. ಈ ವಾಟರ್‌ರೇಟ್ ಸೂಚನೆ ಮಾಡುವಾಗ ಯಾವುದನ್ನು ಗಮನದಲ್ಲಿ ಇಟ್ಟುಕೊಂಡು ಮಾಡುತ್ತೀರಿ ? ಕೆಲವು ಕಡೆ ಬೆಳೆ ಗಮನದಲ್ಲಿಟ್ಟು ನೀರು ಸರದಿ ವಸೂಲು ಮಾಡುವುದು ಉಂಟು. ಹಳೆಯ ಮೈಸೂರಿನಲ್ಲಿ ಬೆಳೆಯನ್ನು ಗಮನದಲ್ಲಿ ಇಟ್ಟುಕೊಂಡಿಲ್ಲ. ಅವರೇಜನ್ನು ವಸೂಲು ಮಾಡುತ್ತಿದ್ದಾರೆ. ತಾವು ಸ್ವಲ್ಪ ಈ ವಿಚಾರದಲ್ಲಿ ಹೆಚ್ಚು ಗಮನ ಕೊಡುತ್ತೀರೆಂದು ನಾನು ನಂಬಿದ್ದೇನೆ. ಅದನ್ನು ಕಾನೂನಿನಲ್ಲಿಯೇ ನೀರು ಸರದಿ ಇಷ್ಟು ಮೊಬಲಗಿಗಿಂತ ಹೆಚ್ಚು ಇರುವುದಿಲ್ಲವೆಂದು, ವಿಶದೀಕರಿಸಬೇಕು. ಅದಿಲ್ಲದೆ ಹೋದರೆ ಡಿಲಿಗೇಟೆಡ್ ಲೆಜಿಸ್ಲೇಷನ್ ಮೂಲಕ ಸರ್ಕಾರದವರು ನೀರು ಸರದಿಯನ್ನು ನಿಗದಿ ಮಾಡುವುದಕ್ಕೆ ಯಾವೊಂದು ಹೊಸ ನಿಯಮಗಳು ಸರಿಯೆಂದು ಕಾಣುತ್ತವೋ ಆ ನಿಯಮಗಳನ್ನು ಆಧಾರವಾಗಿಟ್ಟುಕೊಂಡರೆ ಈಗಿರುವ ಹಾಗೆ ನೀರಿನ ಕಂದಾಯವನ್ನು ವಿಧಿಸುವುದಕ್ಕೆ ಅವಕಾಶವಾಗುತ್ತದೆ. ಅದು ಈ ಸಭೆಯ ಅಧಿಕಾರಕ್ಕೆ ಮೀರಿದ್ದು ಎಂದು ನನ್ನ ಭಾವನೆ. ಅಷ್ಟು ತೆರಿಗೆ ವಿಧಿಸುವುದನ್ನು ಒಂದು ಡಿಲಿಗೇಟೆಡ್ ಲೆಜಿಸ್ಲೇಷನ್ ಮೂಲಕ ವಹಿಸಿಕೊಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲ. ಈ ವಿಚಾರವನ್ನು ತಾವು ಆಲೋಚನೆಮಾಡಬೇಕು. ಇದರಲ್ಲಿ ಇರತಕ್ಕ ನಿಯಮಗಳು ಎರಡು. ಆ ನಿಯಮಗಳ ಮೇಲೂ ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ಕಾನೂನಿನ ಪ್ರತಿಯೊಂದು ಕಲಂನಲ್ಲೂ "the rates to be prescribed, ಎಂದು ಹೇಳಿದ್ದಾರೆ; ಆ ರೀತಿ ಬಹಳ ಕಡೆ ಬಂದಿದೆ. ಅಪೀಲು ಹಾಕುವುದಕ್ಕೆ ಯಾವ ಕೋರ್ಟಿಗೆ ಹೋಗಬೇಕೆಂದು ರೂಲ್ಸ್‌ಮಾಡಬೇಕಾಗಿದೆ. ಕಾಂಟ್ರಿಬ್ಯೂಷನ್ನನ್ನು ನಿಗದಿ ಮಾಡುವುದಕ್ಕೆ ರೂಲ್ಸ್‌ಮಾಡಬೇಕು. ಈ ಬಿಲ್ಲು 6-7 ಪುಟಗಳಿಂದ ಕೂಡಿದೆ. ರೂಲ್ಸ್ ಮಾಡಿದರೆ ಬಹುಶಃ 70 ಪುಟಗಳು ಆಗಬಹುದು. ಆಗ ಅದು ಇನ್ನೂ ಹೆಚ್ಚಿನ ಅಂಶಗಳಿಂದ ಕೂಡಿರುತ್ತದೆ. ಇದನ್ನು ಮೂಲ ಆಕ್ಟಿನಲ್ಲಿ ಇಟ್ಟಿದ್ದರೆ ಚೆನ್ನಾಗಿತ್ತೋ ಏನೋ ಎಂದು ನನಗೆ ಸಂಶಯ ಬಂದಿದೆ.

ಒಟ್ಟಿನಲ್ಲಿ ಸರ್ಕಾರದವರು ಮೈಸೂರಿನ ಎಲ್ಲಾ ಭಾಗಗಳಿಗೂ ಅನ್ವಯಿಸುವಂತಹ ಬೆಟರ್‌ಮೆಂಟ್ ಫೀಯನ್ನು ವಿಧಿಸುವ ಕಾನೂನನ್ನು ತಂದಿರುವುದು ಬಹಳ ಸ್ವಾಗತಾರ್ಹವಾದುದು. ಈಗತಾನೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಈಗಾಗಲೇ ಎಷ್ಟೋಜನ 700-800 ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಅಣೆಕಟ್ಟುಗಳನ್ನು ಮಾಡಿ ಬೆಳೆ ಖಾತರಿಯಾಗಿ ಬರುವಂತೆ ಅನುಕೂಲಮಾಡಿಕೊಡಿ ಎಂದು ಹೇಳುತ್ತಿದ್ದಾರೆ.

3 P.M.

ಅಂಥಾದ್ದರಲ್ಲಿ ಈಚೆಗೆ ಎಲ್ಲಾ ಅಣೆಕಟ್ಟುಗಳಿಗೂ ಕೂಡ ಖರ್ಚು ಹೆಚ್ಚಾಗುತ್ತಾ ಇದೆ. ಸಿಮೆಂಟು, ಕಬ್ಬಿಣ ಈ ಎಲ್ಲಾ ಸಾಮಾನುಗಳ ಬೆಲೆಯೂ ಹೆಚ್ಚಾಗಿದೆ ಮತ್ತು ಅದರ ಕಾರ್ಯವನ್ನು ನಡೆಸತಕ್ಕ ಅಧಿಕಾರಿಗಳ ಸಂಬಳ ಸಾರಿಗೆಗಳು ಕೂಡ ಹೆಚ್ಚಾಗಿದೆ. ಹೀಗೆ ಈ ನೀರಾವರೀ ಕಾಂಗಾರಿಗಳ ಖರ್ಚು ಜಾಸ್ತಿಯಾಗುತ್ತಿರುವ ಕಾಲದಲ್ಲಿ ಸರ್ಕಾರದವರು 500 ರೂಪಾಯಿಗೆ ಮೀರದಂತೆ ಕಾಂಟ್ರಿಬ್ಯೂಷನ್ ವಸೂಲು ಮಾಡಿಕೊಳ್ಳಬೇಕು ಎಂದು ಅಪೇಕ್ಷೆಪಟ್ಟು ಇಲ್ಲಿ ಸೂಚಿಸಿರುವುದು ಬಹಳ ಸ್ವಾಗತಾರ್ಹವಾದುದು. 500 ರೂಪಾಯಿ ತೆಗೆದುಕೊಂಡರೆ 20 ಚಾನಲ್‌ಗಳಿಗೆ ಕೊಡಬೇಕು. ಎಲ್ಲಿ 500ರೂಪಾಯಿಗಳವರೆಗೂ ವಿಧಿಸುತ್ತಾರೆಯೋ ಅಂತಹ ಕಡೆಯೂ ಕೂಡ ಬಹಳ ಭಾರವಾಗಲಾರದು. ಈಗಾಗಲೇ ನಮ್ಮ ದೇಶದಲ್ಲಿ ಒಂದು ಎಕರೆ ನೀರಾವರಿ ಆಗಬೇಕಾದರೆ ಸರ್ಕಾರದವರು 1,000-1,500 ರೂಪಾಯಿ ಕೂಡ ಖರ್ಚು ಮಾಡುತ್ತಾ ಇದ್ದಾರೆ. ತುಂಗಾ ಅಣೆಕಟ್ಟಿನಲ್ಲಿ 1,500, ನುಗು ಅಣೆಕಟ್ಟಿನಲ್ಲಿ 1,000ರೂಪಾಯಿ, ಈ ರೀತಿ ಆಗುತ್ತಾ ಇದೆ. ಅಂಥಾದ್ದರಲ್ಲಿ 500ರೂಪಾಯಿಗೆ ಮೀರದಂತೆ ವಸೂಲುಮಾಡುತ್ತೇವೆ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳತಕ್ಕದ್ದೇ. ಆದರೂ ಕೂಡ ಸರ್ಕಾರದವರಿಗೆ ನಷ್ಟವಾಗುತ್ತದೆ ಎಂದು ಅಲ್ಲ ; ಇದು ಸರ್ಕಾರದವರು ಮಾಡಬೇಕಾದ ಅತ್ಯಗತ್ಯ ಕರ್ತವ್ಯ. ಒಂದು ಪ್ರಾಂತದಲ್ಲಿ ಖುಷ್ಕಿ ಜಮೀನು ಇದ್ದು, ಅದು ತರೀ ಜಮೀನು ಆದರೆ ಅದು ಎಷ್ಟು ಪ್ರಬುದ್ಧಮಾನ ಸ್ಥಿತಿಗೆ ಬರುತ್ತದೆ ಎಂಬುದನ್ನು ನಾವೆಲ್ಲಾ ದಿನೇ ದಿನೇ ನೋಡುತ್ತಾ ಇರತಕ್ಕ ದೃಶ್ಯ. ಅವರ ಜಮೀನಿಗೆ ನೀರು ಸದಾಕಾಲದಲ್ಲೂ ದೊರೆಯುತ್ತದೆ ಎಂದಾಗ ಅಲ್ಲಿನ ರೈತರಿಗೆ ಒಂದು ನವಚೈತನ್ಯ ಬರುತ್ತದೆ. ಅವರ ಜೀವನದಲ್ಲಿ ಒಂದು ಹರ್ಷ ಬರುತ್ತದೆ. ನಾವು ಇಟ್ಟ ಬೆಳೆ ಕೈಗೆ ಬಂದೇ ಬರುತ್ತದೆ ಎಂದು ಖಾತ್ರಿ ಬರುವುದರಿಂದ ಅವರಿಗೆ ಎಲ್ಲೂ ಇಲ್ಲದ ಧೈರ್ಯ ಬರುತ್ತದೆ, ಅವರು ಅಲ್ಲಿಂದಾಚೆಗೆ ಸಾಮಾನ್ಯವಾಗಿ ಯಾರಿಗೂ ಮಣಿಯುವುದಿಲ್ಲ ಎಂದು ಹೇಳಬಹುದು. ಇಂಥ ಸೌಕರ್ಯ, ಸೌಲಭ್ಯಗಳನ್ನು ಜನರಿಗೆ ಒದಗಿಸಿ ಕೊಡಬೇಕಾದದ್ದು ಸರ್ಕಾರದವರ ಕರ್ತವ್ಯ. ಇದರಲ್ಲೂ ಮೈಸೂರು ಸರ್ಕಾರ 60-70 ವರ್ಷದಿಂದ ಇಂಥ ಉದ್ಯಮದಲ್ಲಿ ಕೈಹಾಕಿ ಬಹಳ ಯಶಸ್ವಿಯಾದಂಥ ಕಾರ್ಯವನ್ನು ಮಾಡಿದೆ. ಈ ದಿನ ಮೈಸೂರಿನಲ್ಲಿರತಕ್ಕ ಜನರು ಬೇರೆ ಪ್ರದೇಶದ ಜನರಿಗಿಂತ ಹೆಚ್ಚು ನೆಮ್ಮದಿಯಿಂದ ಇರಬೇಕಾದರೆ ಈ ಸರ್ಕಾರದವರು ಎಷ್ಟೋ ವರ್ಷಗಳಿಂದ ಈ ನೀರಾವರೀ ಕಾಂಗಾರಿ ವಿಚಾರದಲ್ಲಿ ಅವಲಂಬಿಸಿದಂಥ ಧೈರ್ಯವಾದ ನೀತಿಯೇ ಕಾರಣ. ಆದ್ದರಿಂದ ನಾನು ಈ ಮಸೂದೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಸ್ವಾಮಿ, ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಈ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಮಸೂದೆಯ ವಿಷಯದಲ್ಲಿ ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡುತ್ತ ವಿರೋಧಪಕ್ಷದ ನಾಯಕರು ಮಾತನಾಡಿದ ಕಾಲದಲ್ಲಿ ಅವರಿಗೆ ವಿಷಯ ಗೊತ್ತಿಲ್ಲವೋ ಅಥವಾ ಅವರ ಅನುಭವ ಎಲ್ಲಾ ಎಲ್ಲಿ ಹೋಯಿತೋ ಎಂದು ಕೇಳತಕ್ಕ ರೀತಿಯಲ್ಲಿ ಮಾತ

(ಶ್ರೀ ಬಿ. ಎಸ್. ಶಂಕರಪ್ಪ)

ನಾಡಿದರು. ಆ ವಿಷಯದಲ್ಲಿ ಇಷ್ಟು ಹೇಳಬೇಕಾಗುತ್ತದೆ. ನಿನ್ನೆ ದಿವಸ ನಾನು ಹೊರಗೆ ಹೋಗಿ ಒಳಗೆ ಬಂದಾಗ ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡುತ್ತಿದ್ದರು. ಅದನ್ನು ಕೇಳಿ ನಮ್ಮ ಟೇಬಲ್ ಮೇಲೆ ಇಟ್ಟಿರತಕ್ಕ ಪ್ರೋಗ್ರಾಂ ಬದಲಾವಣೆಮಾಡಿ ಸಂಸ್ಕೃತಿ ಪ್ರಚಾರ ಅಥವಾ ಕನ್ನಡ ಸಾಹಿತ್ಯದ ವಿಷಯವಾಗಿ ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿದೆಯೇ ಎಂದು ನನಗೆ ಅನ್ನಿಸಿತು. ಅವರು ಈ ಬೆಟರ ಮೆಂಟ್ ಕಾಂಟ್ರಿಬ್ಯೂಷನ್ ಬಿಲ್ ಮೇಲೆ ಮಾತನಾಡುತ್ತಾ ಕನ್ನಡ ಶಬ್ದ ಉಪಯೋಗಿಸಿರುವ ವಿಚಾರವನ್ನೇ ಹೆಚ್ಚಾಗಿ ಹೇಳಿದ್ದಾರೆ. ಅವರ ಕಡೆ 'ದೀಪ ಕಚ್ಚು' ಎಂದು ಹೇಳಿದರೆ ನಮ್ಮ ಕಡೆ 'ದೀಪ ಹಚ್ಚು' ಎನ್ನುತ್ತಾರೆ. ಹೀಗೆ ಹಳೆಯ ಮೈಸೂರಿನಲ್ಲಿ ಒಂದೊಂದು ಊರಿನಲ್ಲಿ ಒಂದೊಂದು ತರಹ ಭಾಷೆ ವ್ಯತ್ಯಾಸ ಇದೆ. ಅವರು ಮೈಸೂರು ಜಿಲ್ಲೆಯಲ್ಲಿ ಇದ್ದಾರೆ. ಅದು ಫಲವತ್ತಾದ ಜಿಲ್ಲೆ. ಬೇಕಾದಷ್ಟು ಅಣೆಕಟ್ಟುಗಳು ಇವೆ. ಕೃಷ್ಣ ರಾಜಸಾಗರ ಅಣೆಕಟ್ಟು ಇದೆ, ಹೊನ್ನಿನ ಹೊಳೆ ಹರಿಯುತ್ತಾ ಇದೆ. ಅವರಿಗೆ ಬಡವರ ಕಷ್ಟ ಈ ಬೆಟರ್ ಮೆಂಟ್ ಟ್ಯಾಕ್ಸ್ ವಿಷಯದಲ್ಲಿ ಏನು ಗೊತ್ತಾಗುತ್ತದೆ? ಸರ್ಕಾರ ಈ ಒಂದು ತೆರಿಗೆಯನ್ನು ಹಾಕತಕ್ಕ ಕಾಲದಲ್ಲಿ ಹಳೆಯ ಮೈಸೂರಿನಲ್ಲಿ ಯಾವ ರೀತಿ ಹಾಕಿದ್ದರು, ದೇಶ ವಿಶಾಲವಾದಾಗ ಯಾವ ಯಾವ ದೃಷ್ಟಿ ಯಾವ ಆಧಾರದ ಮೇಲೆ ಈ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಲೆವಿ ಮಾಡಬೇಕೆಂಬುದನ್ನು ಸರ್ಕಾರ ನೋಡಿದೆಯೇ, ಇಲ್ಲವೇ ಎನ್ನತಕ್ಕ ವಿಷಯವನ್ನು ಅವರು ಸೂಚಿಸಲಿಲ್ಲ. ಕೊನೆಯದಾಗಿ ಇವತ್ತು ಸರ್ಕಾರ ಮಾಡಿರುವುದು ತಪ್ಪು ಎನ್ನುವುದನ್ನು ವಿರೋಧಪಕ್ಷದವರು ಹೇಳಿದರೆ ಅದು ತಪ್ಪು ಟೀಕೆ ಎಂದು ಆಗುತ್ತದೆ. ಅವರ ಪಕ್ಷದ ಸದಸ್ಯರು ಹಾಗೆ ಮಾಡಿದರೆ ಒಳ್ಳೆಯದು, ಹೀಗೆ ಮಾಡಿದರೆ ಒಳ್ಳೆಯದು ಎಂದು ಹೇಳತಕ್ಕ ಕಾಲದಲ್ಲಿ ಸರ್ಕಾರದವರಿಗೆ ಹಣ ಬರುವ ವಿಷಯವನ್ನು ಹೇಳಿದರೇ ಹೊರತು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರತಿನಿಧಿಗಳಾಗಿ ಇಲ್ಲಿ ಬಂದು ಪ್ರಜೆಗಳಿಗೆ ಏನು ಹಾನಿಯಾಗುತ್ತದೆ ಅಥವಾ ದೇಶಕ್ಕೆ ಏನು ಲೋಪವಾಗುತ್ತದೆ ಎಂಬುದನ್ನು ಸರ್ಕಾರದ ಮುಂದೆ ಇಟ್ಟು, ಸರ್ಕಾರ ಆ ತೊಂದರೆಗಳನ್ನು ತಪ್ಪಿಸಲಿ ಎಂದು ನಿವೇದನ ಮಾಡುವುದಕ್ಕೆ ಒಬ್ಬ ಪ್ರಜಾಪ್ರತಿನಿಧಿಯಾಗಿ ಒಂದು ಮಾತನ್ನೂ ಹೇಳಿಲ್ಲ. ಉದಾಹರಣೆಗೆ ಜನೋಪಯೋಗಕ್ಕಾಗಿ ಹಿಂದಿನ ಕಾಲದಲ್ಲಿ ಈ ಕೆಲಸಗಳನ್ನು ಸರ್ಕಾರದವರು ಮಾಡುವಾಗ ಏಕೆ ಮಾಡುತ್ತ ಇದ್ದರು ? ದೇಶದ ದೈವದತ್ತವಾದ ಭೂಮಿ ಒಂದು ಕಡೆ ಒಂದು ರೀತಿಯಾಗಿದ್ದರೆ ಮತ್ತೊಂದು ಕಡೆ ಬೇರೆ ರೀತಿಯಾಗಿರುತ್ತದೆ. ಮೈಸೂರು ಜಿಲ್ಲೆಗೂ ಚಿತ್ರದುರ್ಗ ಮತ್ತು ಬಿಜಾಪುರ ಜಿಲ್ಲೆಗೂ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. ಹೀಗಿರುವಾಗ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಎಲ್ಲಾ ಕಡೆಯೂ ಕೊಡಿ ಎಂದರೆ ಏನು ಅರ್ಥವಿದೆ? ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಕೇಳುವುದರಲ್ಲಿ ಎರಡು ತತ್ವ ಇದೆ. ಒಂದನೆಯದು ಎಲ್ಲಿ ಕ್ಷಾಮ, ಡಾಮರ ಬಂದು ಭೂಮಿ ಹೆಚ್ಚು ಬೆಳೆ ಬೆಳೆಯದ ಸ್ವಭಾವ ಉಳ್ಳದ್ದಾಗಿದ್ದು, ಹೆಚ್ಚು ಮಳೆ ಬರದಿರತಕ್ಕ ಪ್ರದೇಶವಾಗಿದ್ದರೆ ಅಲ್ಲಿ ಆ ಪ್ರಾಂತದ ಜನರನ್ನು ಸಂರಕ್ಷಣೆ ಮಾಡುವುದಕ್ಕೆ ಸರ್ಕಾರ ತನ್ನ ಬೊಕ್ಕಸದಿಂದ ಹಣ ಹಾಕಿ ಆ ಪ್ರಾಂತದ ಜನರ ಕಷ್ಟವನ್ನು ಕಾಪಾಡುವುದು ನಮ್ಮ ರಾಜ್ಯಾಂಗದ ಪ್ರಕಾರ ಸರ್ಕಾರದ ಆದ್ಯ ಕರ್ತವ್ಯ. ಅಲ್ಲೂ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕುವುದು, ಇನ್ನೊಂದು ಕಡೆ ಕಾರು ರಾಗಿ, ಭತ್ತ, ಭಂಗಿಸೊಪ್ಪು ಮುಂತಾದುವುಗಳನ್ನು ಬೆಳೆದು ಹೆಚ್ಚು ದುಡ್ಡು ಸಂಪಾದನೆಮಾಡಬೇಕು ಎನ್ನತಕ್ಕ ಪ್ರದೇಶ ಇರುತ್ತದೆ, ಅಲ್ಲಿಗೂ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಹಾಕಿ ಹಣ ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ನೀತಿಯೇ? ಇದನ್ನು ನಿರ್ದಿಷ್ಟವಾಗಿ ಪರಿಶೀಲನೆಮಾಡಬೇಕು. ಒಳ್ಳೆಯ ಸೌಲಭ್ಯ ಇದ್ದು ಹೆಚ್ಚು ಆಹಾರ ಬೆಳೆಯತಕ್ಕ ಪ್ರಕೃತಿ ಸಂಪತ್ತು ಎಲ್ಲಿ ದೇವರು ಕೊಟ್ಟಿದ್ದಾನೆಯೋ ಅಲ್ಲಿ ಕೆರೆ ಕಟ್ಟಬೇಕೆಂದರೆ ಎರಡು ಗುಡ್ಡಗಳಿರುತ್ತವೆ. ಉದಾಹರಣೆಗೆ ವಾಣೀವಿಲಾಸ ಸಾಗರ ಕೆರೆ ಇದೆ. ಆಗ ಸರ್ಕಾರದವರು ಅದನ್ನು ಕಟ್ಟಲು ಏನು ಖರ್ಚು ಮಾಡಿದರು, ಅದರ ಹಿಂಭಾಗದಲ್ಲಿ ಎಷ್ಟು ಜಮೀನು ಸಾಗಿಗೆ ಬರುತ್ತದೆ, ಎಂಬುದನ್ನು ಲೆಕ್ಕಾಚಾರ ಹಾಕಿದರೆ ಆಗ ಖರ್ಚು ಮಾಡಿರತಕ್ಕ ದುಡ್ಡಿಗೆ 50 ಪರ್ಸೆಂಟ್ ಕಾಂಟ್ರಿಬ್ಯೂಷನ್ ನಿಗದಿ ಮಾಡಿದರೆ, ಅಷ್ಟೂ ಕೂಡ ಕೊಡುವುದಕ್ಕೆ ಈಗ ಆಗುವುದಿಲ್ಲ. ಇನ್ನೊಂದು ಕಡೆ ನದಿಯಾಗಲಿ ಕೆರೆಕಟ್ಟೆಗಳಾಗಲಿ ಇರುವುದಿಲ್ಲ; ಬಿಜಾಪುರ ಆಗಲಿ ಮಳೆ ಕಡಿಮೆ ಬರತಕ್ಕ ಪ್ರದೇಶವಾಗಲಿ ಅಲ್ಲಿ ಒಂದು ಕೆರೆ ಕಟ್ಟಬೇಕೆಂದರೆ ನಾಲೆ ತೆಗೆಯಬೇಕೆಂದರೆ ತಕ್ಕ materials ಸಿಕ್ಕುವುದಿಲ್ಲ. ಬಹಳ ಹಣ ಖರ್ಚಾಗುತ್ತದೆ. ಆಗ ಅವರು ಕೊಡಬೇಕಾದ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಏನು? ಇವೆರಡನ್ನೂ ಸರ್ಕಾರದವರು ಪರ್ಯಾಲೋಚನೆ ಮಾಡಬೇಕು. ಮೇಲಾಗಿ ನಾನು ಸೆಲೆಕ್ಟ್ ಸಮಿತಿ ಸದಸ್ಯರಿಗೆ ಈ ಬಗ್ಗೆ ತೀವ್ರಗಮನ ಕೊಡಬೇಕೆಂದು ಮನವಿಮಾಡಿಕೊಂಡಿದ್ದೆ. ಬಿಜಾಪುರ ಜಿಲ್ಲೆ ಕ್ಷಾಮ ಪ್ರದೇಶ ಎಂದು ಹೇಳುತ್ತಾ ಇದ್ದಾರೆ. ಅಲ್ಲಿಗೂ ಕಾಂಟ್ರಿಬ್ಯೂಷನ್ 500ರೂಪಾಯಿ ಪರಿಮಿತಿ ಇಡುವುದು, ಮೈಸೂರು ಜಿಲ್ಲೆಗೂ ಅಷ್ಟೇ ಪರಿಮಿತಿ ಇಡುವುದು ಎನ್ನುವುದರಲ್ಲಿ ಅರ್ಥಾರ್ಥ ಸಂಬಂಧವಿಲ್ಲ.

ಎರಡನೆಯದಾಗಿ ಕಂಟ್ರಿಬ್ಯೂಷನ್ ನಿಗದಿಮಾಡತಕ್ಕ ಅಧಿಕಾರಿಗಳು ಯಾರು ; ಕಂಟ್ರಿಬ್ಯೂಷನ್ ನಿಗದಿ ಮಾಡತಕ್ಕದ್ದು ಯಾವ ಆಧಾರದ ಮೇಲೆ ಎಂಬುದನ್ನು ನಾವು ಪರ್ಯಾಲೋಚನೆ ಮಾಡಬೇಕು. ಹೇಗೆಂದರೆ ಕಂಟ್ರಿಬ್ಯೂಷನ್ ನಿಗದಿಮಾಡತಕ್ಕ ಕಾಲದಲ್ಲಿ ಒಬ್ಬ ಜಿಲ್ಲಾಧಿಕಾರಿಗಳು, ಅಥವ ಸಬ್ ಡಿವಿಷನ್ ಅಧಿಕಾರಿಗಳು ಇದನ್ನು ನಿಗದಿ ಮಾಡುವುದರಲ್ಲಿ ಅಲ್ಲಿರತಕ್ಕ ರೈತನಿಗೆ ನ್ಯಾಯ ದೊರೆಯುತ್ತದೆಯೇ ಎಂದು ಆಲೋಚನೆ ಮಾಡಬೇಕು. ಕಾರಣ, ಕೆಲವೆಡೆಗಳಲ್ಲಿ ರೈತನಾದವನು, ಅಣೆಕಟ್ಟು ಕಟ್ಟಿದ ಮೇಲೂ, ನಾಲೆಯ ನೀರನ್ನು ಕೊಟ್ಟ ಮೇಲೂ ಅಥವ ಕೆರೆಯನ್ನು ನಿರ್ಮಾಣ ಮಾಡಿದಮೇಲೂ ಜಮೀನನ್ನು ಸಾಗಿಗೆ ತರಬೇಕಾದರೆ ಜಮೀನನ್ನು ಮಟ್ಟಮಾಡಿ ಸಾಗಿಗೆ ಬರುವಂತೆ ಏರ್ಪಾಟು ಮಾಡಿಕೊಳ್ಳಬೇಕು. ಇದಕ್ಕೆ ಅವನಿಗೆ ಹಣ ಖರ್ಚಾಗುತ್ತದೆ. ಈ ರೀತಿಯಲ್ಲಿ ಒಂದು ಹದಕ್ಕೆ ತಂದಮೇಲೆ ಕೆಲವು ಭಾಗ ಸಾಗಿಗೆ ಬಂದು ರೈತನಿಗೆ ಫಲ ಕೊಡತಕ್ಕದ್ದಾಗಿ, ಅದರಿಂದ ಉತ್ಪನ್ನ ಬರುತ್ತದೆ. ಫಲ ಕೈಗೆ ಬರಬೇಕಾದರೆ, ನೀರಾವರಿ ಸೌಕರ್ಯವಾದ ಮೇಲೆ ಸುಮಾರು ಹತ್ತು ವರ್ಷಗಳಾದರೂ ಆಗುತ್ತದೆ. ಕೆಲವು ಕಡೆಗಳಲ್ಲಿ ನೀರಾವರಿ ಯೋಜನೆ ಮಾಡಿದಮೇಲೆ, ತಾನಾಗಿಯೇ ದೈವದತ್ತವಾದ ಅನುಕೂಲತೆಗಳಿಂದ ಸಂಪದ್ಯುಕ್ತವಾದ ಜಮೀನಿದ್ದು, ರೈತನು ಹೆಚ್ಚು ಹಣವನ್ನು ಅದರ ಮೇಲೆ ಹಾಕದೆಯೇ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಿದೆ. ಇನ್ನು ಕೆಲವು ಕಡೆಗಳಲ್ಲಿ ರೈತನು ಎಷ್ಟೇ ಮಾಡಿದರೂ ಸಹ ಭೂಮಿಯ ಗುಣದಿಂದ ಹೆಚ್ಚಿಗೆ ಬೆಳೆಯುವುದಿಲ್ಲ. ರೈತನು ತನ್ನ ಶಕ್ತಿ ಮೀರಿ ದುಡಿದು, ಹೊಸ ಮಣ್ಣನ್ನು ತಂದುಹಾಕಿ,

ಆಧುನಿಕವಾದ ಜಾತಿಯ ಗೊಬ್ಬರಗಳನ್ನು ಉಪಯೋಗಿಸಿದರೆ ಮಾತ್ರ ಸ್ವಲ್ಪ ಮಟ್ಟಿಗೆ ಬೆಳೆಯಾಗತಕ್ಕಂಥ ಜಮೀನುಗಳೂ ನಮ್ಮಲ್ಲಿವೆ. Betterment Tax levy ಮಾಡತಕ್ಕ ಕಾಲದಲ್ಲಿ ಈ ಎಲ್ಲ ಅಂಶಗಳನ್ನೂ ಯೋಚನೆಮಾಡಿ, ಭೂಮಿಯನ್ನು classify ಮಾಡಬೇಕು. Classification of land ಎನ್ನುವುದನ್ನು ಎಲ್ಲರೂ ಸಹ ಒಪ್ಪಬೇಕು. ಇವೊತ್ತು Land Reforms Committee ಮಾಡಿದ್ದಾರೆ. Land ceiling limit ಇರಬೇಕು ಎಂದು ಹೇಳುತ್ತಾರೆ. ಸರ್ಕಾರಕ್ಕೆ ಬರತಕ್ಕ ಹಣವನ್ನು ತೆಗೆದುಕೊಳ್ಳುವುದಕ್ಕೆ ಒಂದು ನಿಯಮ, ಸನ್ನಿವೇಶ, ಅಂಕಿ ಅಂಶಗಳು ಯಾವುದೂ ಕೂಡ ಇಲ್ಲದೆ ಇಂಥ ಮಸೂದೆಯನ್ನು ತಂದು ನಮ್ಮ ಮುಂದೆ ಇಟ್ಟರೂ, ನಾವುಗಳು ಏನೂ ವಿರೋಧ ಮಾಡದೆ ಒಪ್ಪಿಕೊಂಡರೆ, ಆಗ ವಿರೋಧ ಪಕ್ಷದ ನಾಯಕರೂ, ವಿರೋಧಪಕ್ಷದ ಸದಸ್ಯರೂ ಉತ್ತಮರು ಎಂದು ಕೆಲವರ ಭಾವನೆ ಇದೆ ಎಂದು ಕಾಣುತ್ತದೆ. ಕಂಟ್ರಿಬ್ಯೂಷನ್ ವಗೈರೆ ಗೊತ್ತುಮಾಡುವವರು ರೆವಿನ್ಯೂ ಅಧಿಕಾರಿಗಳು. ಇವರಿಗೆ ಈ ವಿಷಯದಲ್ಲಿ ಏನು ಅನುಭವವಿದೆ ? ಇವರುಗಳಿಗೆ, ಆರು ತಿಂಗಳ ಕಾಲ ಸರ್ವೆ ಟ್ರೈನಿಂಗ್ ತೆಗೆದುಕೊಂಡ ಮಾತ್ರಕ್ಕೆ ಏನು ಅನುಭವವಿದೆ ಎಂದು ಕೇಳುತ್ತೇನೆ ಹಿಂದೆಲ್ಲ ಸರ್ವೆ ಇಲಾಖೆಯವರು, re-classification of lands ಎಂದು ಮಾಡಿ ಪ್ರತಿಯೊಂದು ಜಮೀನನ್ನೂ ಬಾಗಾಯಿತು, ತರಿ, ಖುಷ್ಕಿ ಮುಂತಾಗಿ ವಿಂಗಡಿಸಿ, ಆಯಾ ಭೂಮಿಯ ಮಣ್ಣನ್ನು ಪರೀಕ್ಷಿಸಿ, ಭೂಮಿಯು ಫಲವತ್ತಾಗಿದೆಯೋ ಇಲ್ಲವೇ ಎಂದು ನೋಡಿ ಅದರ ಮೇಲೆ ಕಂದಾಯವನ್ನು ನಿಗದಿ ಮಾಡುತ್ತಿದ್ದರು. ಮಣ್ಣನ್ನು ಬಾಯಲ್ಲಿ ಹಾಕಿಕೊಂಡು ಆ ಮಣ್ಣಿನ ತರಹೆ ಯಾವ ರೀತಿ ಇವೆ, ಉತ್ಕೃಷ್ಟವಾಗಿದೆಯೋ, ಇಲ್ಲವೇ ಎಂದು ಹೇಳುತ್ತಿದ್ದರು ಮತ್ತು ಯಾವ ತರಹ ಜಮೀನಿಗೆ ಎಷ್ಟು ಕಂದಾಯ ಹಾಕಬಹುದು ಎಂದು ಹೇಳುವಷ್ಟು ಅನುಭವವುಳ್ಳ ಹಳೆಯ ಅಧಿಕಾರಿಗಳಿದ್ದಾರೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಇಂಥ ಒಂದು ಇಲಾಖೆ ಸರ್ಕಾರದ ಅಧೀನವಲ್ಲದ್ದರೂ, ಇವೊತ್ತು Betterment Contribution ನಿಗದಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳನ್ನೋ, ಸಬ್ ಡಿವಿಷನ್ ಅಧಿಕಾರಿಗಳನ್ನೋ ತೋರಿಸುವುದರಿಂದ ಸರಿಯಾದ ನ್ಯಾಯ ರೈತನಿಗೆ ಖಂಡಿತವಾಗಿಯೂ ದೊರೆಯುವುದಿಲ್ಲ. ಆದುದರಿಂದ ಭೂಮಿಯನ್ನು ಸರ್ವೆ ಇಲಾಖೆಯವರಿಂದ classify ಮಾಡಿಸಿ, ಭೂಮಿಯಲ್ಲಿ ಬೆಳೆಯತಕ್ಕ ಬೆಳೆ ಏನು, ಅದಕ್ಕೆ ತಗಲತಕ್ಕ ಖರ್ಚು ಏನು ಎಂದು ನೋಡಬೇಕು. ಭೂಮಿಯಲ್ಲಿ ಕರಲು ಭೂಮಿ ಅಂದರೆ sandy loam ಎಂದು ಇರುತ್ತದೆ. ಇಂಥ ಭೂಮಿಯಲ್ಲಿ ಎಷ್ಟುಮಳೆ ಬಿದ್ದರೂ, ಮಳೆನಿಂತ ಹತ್ತು ನಿಮಿಷಗಳಲ್ಲಿ ನೀರನ್ನೆಲ್ಲ ಆ ನೆಲ ಹೀರಿಬಿಡುತ್ತದೆ. ನಾವು ಆ ಸ್ಥಳದಲ್ಲಿ ತಿರುಗಾಡಿದರೂ ಸಹ ಕಾಲಿಗೆ ನೀರು ಅಂಟುವುದಿಲ್ಲ. ಹೀಗೆಯೇ ಕರೀಮಣ್ಣಿನ ಭೂಮಿಯಲ್ಲಿ ಮಳೆ ಬಿದ್ದರೆ ಆ ಭೂಮಿಯು ನೀರನ್ನು ಹೀರಿಕೊಂಡರೂ, ನೀರು ಯಾವಾಗಲೂ ಇದ್ದೇ ಇರುತ್ತದೆ. ಒಂದು ದೈವಿಕವಾದ ಶಕ್ತಿಯನ್ನು ಆ ಮಣ್ಣಿಗೆ ದೇವರು ಕೊಟ್ಟಿರುತ್ತಾನೆ. ಈ ಭೂಮಿ ತನ್ನಲ್ಲಿರುವ ತನುವನ್ನು ತಿಂಗಳಾನುಗಟ್ಟಲೆ ಬಿಡುವುದಿಲ್ಲ. ಹೀಗೆ ಭೂಮಿಯಲ್ಲಿ ನಾನಾ ತರಹ ಗುಣಗಳಿರುವುದರಿಂದ ಇದನ್ನೆಲ್ಲ classify ಮಾಡಿ, ವ್ಯವಸಾಯಕ್ಕೆ ಯಾರಿಗೆ ಹೆಚ್ಚಾಗಿ ಖರ್ಚಾಗುತ್ತದೆ, ಅವರು ಬೆಳೆಯತಕ್ಕ ಬೆಳೆ ಏನು, ಅದರ ಉತ್ಪನ್ನವೇನು, ಅವರಿಗೆ ಕೊಡತಕ್ಕ ಚೈತನ್ಯವಿದೆಯೋ ಎಂಬಿವೇ ಅಂಶಗಳನ್ನು ಪರಿಶೀಲನೆ ಮಾಡಿ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕುವುದು ಸೂಕ್ತ. ಈ ಕೆಲಸವನ್ನು ರೆವಿನ್ಯೂ ಅಧಿಕಾರಿಗಳಿಗೆ ವಹಿಸಿದರೆ ಖಂಡಿತವಾಗಿಯೂ ಅನ್ಯಾಯವಾಗುತ್ತದೆ. ಆ ದೆಸೆಯಿಂದ ಇದನ್ನು ನಿಗದಿ ಮಾಡತಕ್ಕ ಕಾಲದಲ್ಲಿ ಸರ್ವೆ ಇಲಾಖೆಯಿಂದ ವಿವರಗಳನ್ನು ತರಿಸಿ, ಮೇಲೆ ಹೇಳಿದ ಅಂಶಗಳನ್ನೆಲ್ಲ ಸರ್ಕಾರದವರು ಪರಿಶೀಲನೆ ಮಾಡಿ, ತನ್ಮೂಲಕ, ಇವರು ತಂದಿರತಕ್ಕ ಮಸೂದೆಯಿಂದ ರೈತನಿಗೆ ಏನು ಅನ್ಯಾಯವಾಗುತ್ತದೆಯೋ ಆ ಅನ್ಯಾಯವನ್ನೂ ತಪ್ಪಿಸಬೇಕು. ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ರೈತನು ದೇಶದ ಬೆನ್ನು ಮೂಳೆ, ಎಂದು ಏನು ಹೇಳುತ್ತಿದ್ದರೋ ಅಂಥ ರೈತನಿಗೆ, ಈಗ ಅವರು ಅಧಿಕಾರ ಸೂತ್ರವನ್ನು ಹಿಡಿದಿರುವುದರಿಂದ, ಅನುಕೂಲವನ್ನು ಕಲ್ಪಿಸಿ, ನ್ಯಾಯ ದೊರೆಯುವಂತೆ ಮಾಡಿ ಪುಣ್ಯವನ್ನು ಕಟ್ಟಿಕೊಳ್ಳಲಿ ಎಂದು ಒತ್ತಾಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ವಾಟರ್ ರೇಟ್ ಯಾವ ರೀತಿ ಹಾಕಬೇಕು ಎಂಬುದನ್ನು ಈ ಮಸೂದೆಯಲ್ಲಿ ವಿಧಾಯಕ ಮಾಡಿದ್ದಾರೆ. ಆದರೆ ವಾಟರ್‌ರೇಟ್ ಎನ್ನತಕ್ಕದ್ದನ್ನು ನಿಗದಿ ಮಾಡಿಲ್ಲ. ಅದನ್ನು ಶ್ರೀಮಾನ್ ಪುಟ್ಟಸ್ವಾಮಿಯವರೂ ಸಹ ಸೂಚನೆ ಮಾಡಿದ್ದಾರೆ. ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ನಿಗೆ ಒಂದು ನಿಯಮವಿಲ್ಲ ಒಂದು ಗಂಟಿನಲ್ಲಿ ಕೊಡತಕ್ಕದ್ದಕ್ಕೆ, ಸರ್ಕಾರಕ್ಕೆ ವಾಟರ್ ರೇಟ್ ಎನ್ನುವುದನ್ನು ಸಾರೋದ್ಧಾರವಾಗಿ ಕೊಡಬೇಕು. ಅದಕ್ಕೆ ಒಂದು ಕಾಲ ಪರಿಮಿತಿ ಇಲ್ಲ. ಕೆರೆಯ ರೆಸ್ಟೋರೇಷನ್ ಆಗಲಿ, ಫೀಡರ್ ನಾಲೆಯ ದುರಸ್ತಾಗಲಿ, ಯಾವುದೇ ಒಂದು ರೆಸ್ಟೋರೇಷನ್ ಕೆಲಸವನ್ನು ತೆಗೆದುಕೊಂಡರೂ ಅದಕ್ಕೆ ವಾಟರ್ ರೇಟ್ ಕೊಡಬೇಕೆಂದು ರೈತರಿಂದ ಮುಚ್ಚಳಿಕೆ ಬರೆಸಿಕೊಂಡು ವಾಟರ್‌ರೇಟ್ ತೆಗೆದುಕೊಳ್ಳುತ್ತಿದ್ದಾರೆ. ಹಿಂದಿನ ಮೈಸೂರಿನಲ್ಲಿ ಒಂದು ಎಕರೆಗೆ ಎರಡು ರೂಪಾಯಿ ವಾಟರ್‌ರೇಟ್ ಇವೆ, ಕೆಲವು ಕಡೆಗಳಲ್ಲಿ ಕಡಮೆ ಇದೆ. ಕಡಮೆ, ಜಾಸ್ತಿ ಎನ್ನುವುದು ಅಲ್ಲಿರತಕ್ಕ ಭೂಮಿಯ ಗುಣದ ಮೇಲೆ ಹೋಗುತ್ತದೆ. ಮತ್ತು ಆ ಜನರಿಗೆ ಇದನ್ನು ಕೊಡತಕ್ಕ ಶಕ್ತಿ ಇದೆಯೋ ಎನ್ನುವ ಆಧಾರದ ಮೇಲೆ ಗೊತ್ತು ಮಾಡುತ್ತಾರೆ. ಈಗ ನಮ್ಮ ಮುಂದಿರುವ ಮಸೂದೆಯಲ್ಲಿ ವಾಟರ್ ರೇಟ್ ಎಷ್ಟು ಕೊಡಬೇಕು ಎಂದು ನಮೂದು ಮಾಡಿಲ್ಲ. ವಾಟರ್‌ರೇಟನ್ನು ನಿಗದಿ ಮಾಡುವವರು ಸರ್ವೆ ಇಲಾಖೆಯವರು. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಎಸ್ಟಿಮೇಟ್ ತಯಾರುಮಾಡಿ ಎಂದು ಹೇಳಿದರೆ ತಯಾರುಮಾಡುತ್ತಾರೆ. ಅವರಿಗೆ ವಾಟರ್ ರೇಟು ಏನು ಕೊಡಬೇಕು ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಮೊದಲು ಹೇಳಿದ ಹಾಗೆ classification of land ಮಾಡಿ ಆ ಪ್ರಕಾರವಾಗಿ ಯಾವ ಮಣ್ಣು ಹೆಚ್ಚು ನೀರನ್ನು ತೆಗೆದುಕೊಳ್ಳುತ್ತದೆ, ಯಾವುದು ತೆಗೆದುಕೊಳ್ಳುವುದಿಲ್ಲ, ಅಲ್ಲಿ ಬೆಳೆಯತಕ್ಕ ಬೆಳೆ ಏನು ಅದರಿಂದ ರೈತನಿಗೆ ಬರತಕ್ಕ ಆದಾಯವೇನು, ಎನ್ನುವುದರ ಅಂಕಿ ಅಂಶಗಳನ್ನೆಲ್ಲ ಗಣನೆಗೆ ತೆಗೆದುಕೊಂಡು ಆಲೋಚನೆ ಮಾಡಿ ವಾಟರ್ ರೇಟ್ ನಿಗದಿ ಮಾಡಬೇಕು. ಈ ವಿಷಯವನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಕನಂಬಾಡಿ ಮುಂತಾದ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಿಸುವಾಗ ಹತ್ತಾರು ಸಾವಿರ ಎಕರೆ ಭೂಮಿಯು ತರಿಸಾಗುವಳಿಗೆ ಬರುತ್ತದೆ. ಇಂಥ ಕಡೆಗಳಲ್ಲಿ ಬಡವರಿಗೆ ಅವಕಾಶ ಸಿಕ್ಕುವುದಿಲ್ಲ.

(ಶ್ರೀ ಬಿ. ಎಸ್. ಶಂಕರಪ್ಪ)

ಬಡವರು ಕೈಹಾಕುವುದಕ್ಕೇ ದುಸ್ಸಾಧ್ಯವಾಗುತ್ತದೆ. ಎಲ್ಲೆಲ್ಲಿ ನೀರಾವರಿಗೆ ಅನಾನುಕೂಲ ಬರುತ್ತದೆಯೋ ಅಂಥ ಕಡೆ ಕೆರೆಕಟ್ಟೆಗಳನ್ನು ನಿರ್ಮಿಸಬೇಕು. ಬಿಜಾಪುರ ಜಿಲ್ಲೆಯಲ್ಲಿ ಬರ ಎಂದು ಹೇಳುತ್ತಾರೆ. ಅಲ್ಲಿ ಅಣೆಕಟ್ಟು ಹಾಕಿ, ವಾಟರ್‌ರೇಟ್ ವಗೈರೆ ಕೊಡಿ ಎಂದರೆ ನ್ಯಾಯವೇ? ಸರ್ಕಾರ ಇಂಥ ಕಾರ್ಯಗಳಿಗೆ ಖರ್ಚು ಮಾಡಿದ ಹಣವನ್ನು ವಾಪಸು ಕೊಡಿ ಎಂದು ಕೇಳುವ ಬ್ಯಾಂಕ್ ಅಲ್ಲ. ಸರ್ಕಾರದವರಿಗೆ ಜನರನ್ನು ಉದ್ಧಾರ ಮಾಡತಕ್ಕ ಜವಾಬ್ದಾರಿ ಇದೆ. ಸಮತಾವಾದ ಸಮಾಜ, Socialistic pattern of Government ಎನ್ನುವುದು ಅನ್ನವಿಲ್ಲದೆ ಇರುವವನು ಅನ್ನವಿರುವವನು, ದುಡ್ಡಿರುವವನು, ದುಡ್ಡಿಲ್ಲದೆ ಇರುವವನು ಇವರಿಂದ ಸರ್ಕಾರಕ್ಕೆ ಬರತಕ್ಕ ದುಡ್ಡಿನಲ್ಲಿ ಮಾತ್ರವೇ ವಿನಾ ಬಾಕಿಯಂತೆ ಕೊಡತಕ್ಕದ್ದರಲ್ಲಿ ಸಮತ್ವ ಇಲ್ಲದಂತಾಗಿದೆ. ಇದೆಲ್ಲವನ್ನೂ ಮಾನ್ಯ ಮಂತ್ರಿಗಳು ಗಮನಿಸಿ, ಸರಿಯಾದ betterment tax rate ನಿಗದಿ ಮಾಡಿ ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕೆಂದು, ಹೇಳಿ, ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri J. H. SHAMSUDDIN (Honawar).—Mr. Speaker, Sir, I rise to support the Bill. The priniciple of the Bill is really laudable because we know that we have to solve our food problem as quickly as possible. We know, Sir, that shortage in food is to a great extent due to the variations of rain in several parts of the State. We have therefore, to supply sufficient water to the agriculturist in order to enable him to get sufficient crop for himself and for the needs of his countrymen.

From that point of view the levy of betterment tax and water-rate should not be considered objectionable. Government was compelled to levy these taxes because of the urgency. Government cannot wait for the finances of the State to improve to such an extent that it would have surplus amount to spend on irrigation projects. On account of the urgency of the situation, Government thought it fit that it should go on with the irrigation schemes beneficial to certain tracts of land and should realise a certain portion of the expenditure from the people who are the direct beneficiaries. My friend on the other side objected to this practice, because, he said, the Government was of the people, for the people. That is, of course, true. Government moneys should be spent on schemes which would benefit the public at large. But if a particular piece of land is benefited because of certain irrigation works, which are constructed out of the public exchequer; if a tank or a channel is improved or constructed or restored, thus benefiting the landholder; does it mean that the entire public benefit by it? Why should the pockets of certain landholders be swollen by Government spending money over their lands? From the point of view of equity, it is necessary that the advantages derived by particular landholders should also be shared by the public treasury, so that that amount could be spent on schemes which would benefit the whole State. That is the principle underlying levy of betterment charges. It cannot be said that such a levy is unjust, or inequitable.

The people from old Mysore should not object to betterment levy because they are used to it since a long time. There is already an Act, which is being repealed by section 12. That Act was enacted in 1932. The original section remains from the inception of the Act, *i.e.*, for 25 years or more and people are accustomed to a levy of betterment charges. That section 30 is still there. It says:

> "After the scheme has been carried out, the Deputy Commissioner of the district may, subject to such rules as may be prescribed by the Government in this behalf, levy from the holders of land within the benefited area in addition to the assessment fixed under the provisions of section 112 of the Mysore Land Revenue Code, 1888 contribution or water-rate or both at the rates referred to in section 29. Such contribution or water-rate shall be recoverable as a revenue demand."

Therefore, there is nothing new in this Bill, so far as the old Mysore area is concerned. It is only in the nature of an enunciation or re-introduction of an old Act. Similarly, when I come to other parts of the State, for example, if I look to the Madras part of this State, I find from section 12, there is an Act of the same nature which is called, Act III of 1955, the Madras

Irrigation (Levy of Betterment Contribution) Act, 1955. Therefore the people of that area also, I think, will not be just if they complain against this Bill and say that it is an innovation.

Then, I would come to the third area, which is a more important area. I am referring to the Bombay area. It is true that an Act of this kind is not in force here. But so far as my memory goes, in the year 1945, the Bombay Government tried to introduce an Act of this nature.

Sri M. C. NARASIMHAN (Kolar Gold Fields).—But you opposed it, then.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹತ್ತು ಲಕ್ಷ ಎಕರೆ, ವಿಲೀನೀಕರಣವಾದ ಉತ್ತರ ಕರ್ನಾಟಕ ಪ್ರದೇಶದಲ್ಲಿ, ಈ ತರಹ ಜಲಾಶಯದ ಅನುಕೂಲವನ್ನು ಪಡೆಯುತ್ತದೆ. ಆದರೆ ಹಳೆಯ ಮೈಸೂರಿನಲ್ಲಿ ಸುಮಾರು ನಾಲ್ಕು ಲಕ್ಷ ಎಕರೆ ಆಗುತ್ತದೆ. ಹೆಚ್ಚು ಭಾಗವೆಲ್ಲಾ ಉತ್ತರ ಕರ್ನಾಟಕ, ಹೈದರಾಬಾದು ಪ್ರದೇಶದಲ್ಲಿರುವುದರಿಂದ ಅಲ್ಲಿನ ಮಾನ್ಯ ಸದಸ್ಯರು ಹೇಳಿದಹಾಗೆ ಅದು 'ಸ್ಕೇರ್ಸಿಟಿ ಏರಿಯಾ' ನಿಜ. ಸ್ಕೇರ್ಸಿಟಿ ಏರಿಯಾ ಎಂದು ಹೇಳಿ ಅದಕ್ಕೆ ಪ್ರೊಟೆಕ್ಷನ್ ಇರುವುದರಿಂದ ಈರೀತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಬದಲಾಗಿ ಪ್ರೊಟೆಕ್ಟೀವ್ ವರ್ಕ್ಸ್ ಎಂದು ಮಾಡಿ ಜನರಲ್‌ಟ್ಯಾಕ್ಸ್ ಹಾಕಿದರೆ ಅವರೂ ಕೊಡಬೇಕಾಗುತ್ತದೆ. ಏಕೆಂದರೆ ಇವತ್ತು ಆ ತರಹ ಪ್ರದೇಶದಲ್ಲಿ ಈ ಸೌಲಭ್ಯವನ್ನು ಕೊಡದಿದ್ದರೆ, ರಿಯಾಯಿತಿ ತೋರಿಸದಿದ್ದರೆ ಖಂಡಿತ ಜನರು ಮುಂದೆ ಬಂದು ನೀರು ತೆಗೆದುಕೊಳ್ಳುತ್ತಾರೆಯೋ ಇಲ್ಲವೋ ಮತ್ತು ರೈತರಿಗೆ ಅದರಿಂದ ಸಂಪೂರ್ಣ ಅನುಕೂಲವಾಗುತ್ತದೆಯೋ ಇಲ್ಲವೋ ಎನ್ನುವುದು ಬಹಳ ಸಂಶಯಕ್ಕೆ ಒಳಗಾದಂಥ ಮಾತು ಎಂದು ಹೇಳಬಯಸುತ್ತೇನೆ. ಆದ್ದರಿಂದಲೇ ಹಿಂದೆ ಬೊಂಬಾಯಿನಲ್ಲಿ ಬೆಟರ್‌ಮೆಂಟ್ ಲೆವಿ ಕೈಬಿಟ್ಟರು ಎಂದು ಕಾಣುತ್ತದೆ. ಇದು ಮಾತ್ರವಲ್ಲದೆ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿಯವರೂ ಸಹ ಸ್ಕೇರ್ಸಿಟಿ ಏರಿಯಾದಲ್ಲಿ ವಾಟರ್‌ರೇಟ್ ವಿಷಯದಲ್ಲಿ $\frac{1}{4}$ ಭಾಗ ಇರಬೇಕೆಂದು ಹೇಳುತ್ತಾರೆ. ಆದ್ದರಿಂದ ಬೆಟರ್‌ಮೆಂಟ್ ಲೆವಿಯ ವಿಷಯದಲ್ಲೂ ಅದೇ ರೀತಿ ರಿಯಾಯಿತಿ ತೋರಿಸಬೇಕೆಂದು ಹೇಳಬಹುದು. ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸ್ಕೇರ್ಸಿಟಿ ಏರಿಯಾ ಎಂದು ಹೇಳಿ ಉತ್ತರ ಕರ್ನಾಟಕ ಹೈದರಾಬಾದು ಪ್ರದೇಶದಲ್ಲಿ ಹೆಚ್ಚು ಜಲಾಶಯಗಳನ್ನು ಕಟ್ಟುತ್ತಾ ಇದ್ದೇವೆ. ಅಂತಹ ಜಾಗದಲ್ಲಿ ಈ ಬೆಟರ್‌ಮೆಂಟ್ ಲೆವಿ ವಸೂಲು ಮಾಡುವುದಕ್ಕಾಗುವುದಿಲ್ಲ. ಹಾಗಿರುವಾಗ ಶಾಸನದ ಮೂಲಕ ಈರೀತಿ ಬೆಟರ್‌ಮೆಂಟ್ ಲೆವಿ ಹಾಕುವುದರಿಂದ ಹೆಚ್ಚಿನ ಲಾಭ ಬಂದು, ಒಳ್ಳೆಯದಾಗುತ್ತದೆಯೇ ಎಂಬುದನ್ನು ನೋಡಬೇಕು. ಇದು ಮಾತ್ರವಲ್ಲದೆ ಹಿಂದಿನ ಮೈಸೂರಿನ ಅನುಭವವನ್ನು ನಾವು ಮರೆತುಬಿಡಬಾರದು. ಇವತ್ತು ಮಂಡ್ಯ ಆಗಲಿ ಮತ್ತೊಂದು ಪ್ರದೇಶವಾಗಲಿ ಅಲ್ಲಿ ಬೆಟರ್‌ಮೆಂಟ್ ಲೆವಿ, ಕಾಂಟ್ರಿಬ್ಯೂಷನ್ ಇದೆ. ಎಷ್ಟು ಹಣ ವಸೂಲಾಗಿದೆ ? ಮಂಡ್ಯ, ಮಾರ್ಕೋನಹಳ್ಳಿ ಪ್ರದೇಶದಲ್ಲಿ ರೈತರು ಅನುಕೂಲವನ್ನು ಹೊಂದಿದ್ದರೂ ಕೂಡ ವರ್ಷಂಪ್ರತಿ ಎಷ್ಟು ಹಣ ವಸೂಲಾಗುತ್ತಿದೆ ? ಲಕ್ಷಾಂತರ ರೂಪಾಯಿ ಬಾಕಿ ನಿಂತಿಲ್ಲವೇ ಎಂಬುದನ್ನು ಸ್ವಲ್ಪ ಗಮನಿಸಬೇಕು. ರೈತರಿಗೆ ಹಣ ತರುವ ಶಕ್ತಿ ಕಡಿಮೆಯಾಗುತ್ತಿದೆ ಎಂಬುದನ್ನು ಮರೆಯಬಾರದು ಎಂದು ಹೇಳುತ್ತೇನೆ.

(SRI M. C. NARASIMHAN)

ಇನ್ನು ನಮ್ಮ ಸ್ನೇಹಿತರು ಸೆಕ್ಷನ್ (3) ಮತ್ತು ಇತರ ವಿಷಯಗಳನ್ನು ಹೇಳಿದ್ದಾರೆ. ಒಂದೇ ಒಂದು ಮಾತು ; ಹೆಚ್ಚಾಗಿ ಅದನ್ನು ಪ್ರಸ್ತಾಪಮಾಡುವುದಿಲ್ಲ. ಈ ಬೆಟರ್‌ಮೆಂಟ್ ಲೆವೀ ಅನ್ನುವುದರಲ್ಲಿ ತತ್ವ ಏನೆಂದರೆ, ಲ್ಯಾಂಡ್‌ನಲ್ಲಿ ಕ್ಯಾಪಿಟಲ್ ವ್ಯಾಲ್ಯೂ ಜಾಸ್ತಿ ಆದರೆ ಸರ್ಕಾರಕ್ಕೆ ಷೇರ್ ಕೊಡಬೇಕು ಎಂದು ಇರುವುದು. ಇದು ಸರಿ. ಆದರೆ ಇದರಲ್ಲಿ 500 ರೂಪಾಯಿ ಮ್ಯಾಕ್ಸಿಮಂ ನಿಗದಿಮಾಡಿರುವುದು ನೋಡಿದರೆ ಆ ತತ್ವ ಕೈಬಿಟ್ಟಿದ್ದಾರೆ ಎಂದು ಅನಿಸುತ್ತದೆ. ಏಕೆಂದರೆ ಈ 500 ರೂಪಾಯಿ ಎನ್ನುವುದು ಹೇಗೆ ಬಂತು, ಎನ್ನುವುದಕ್ಕೆ ಒಂದು ಆಧಾರ ಇಲ್ಲ. ಅದೇನೆಂದರೆ 1954ರಲ್ಲಿ ಡಾಕ್ಟರ್ ನಾಗನಗೌಡರ ಅಧ್ಯಕ್ಷತೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿ ಏರ್ಪಾಡಾಗಿತ್ತು. ಅವರು 600 ರೂಪಾಯಿ ವರೆಗೆ ಬೆಟರ್‌ಮೆಂಟ್ ಲೆವಿ ಹಾಕಬಹುದು ಎಂದು ಹೇಳಿದ್ದಾರೆ. ಅನಂತರ ಸರ್ಕಾರದವರು ಅದನ್ನು ಬದಲಾವಣೆ ಮಾಡಿ 500 ರೂಪಾಯಿ ಮಾಡಬಹುದು ಎಂದು ಒಂದು ಸರ್ಕಾರದ ಆರ್ಡರ್ ಹೊರಡಿಸಿದ ರಂತೆ. ಆದ್ದರಿಂದ ಇದರಲ್ಲಿ ಒಂದು ವಿಷಯ ಇದೆ. ಆ ಸಮಿತಿಯವರು ಯಾವ ಆಧಾರದ ಮೇಲೆ 500 ರೂಪಾಯಿ ಮಾಡಬೇಕು ಅಥವಾ 600 ರೂಪಾಯಿ ಇರಬೇಕೆಂದು ಬರೆದಿದ್ದಾರೆ ಎನ್ನುವುದು ಅವರ ವರದಿಯಿಂದ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಇದನ್ನೆಲ್ಲಾ ನೋಡಿದರೆ ನನಗೆ ಏನು ಅನಿಸುತ್ತದೆ ಎಂದರೆ, ಅವರು ವರ್ಕ್ಸ್‌ನ ಕ್ಯಾಪಿಟಲ್ ಔಟ್‌ಲೇಗೆ ಲಿಂಕ್ ಮಾಡಿದ್ದಾರೆ ಎಂದು ಅನಿಸುತ್ತದೆ. ಲ್ಯಾಂಡ್ ವ್ಯಾಲ್ಯೂಗೆ ಅಲ್ಲ. ಹಿಂದಿನ ಇರಿಗೇಷನ್ ಆಕ್ಟ್ ಪ್ರಕಾರ 200 ರೂಪಾಯಿ ಇತ್ತು ಎಂದು ಕಾಣುತ್ತದೆ. ಮಾರ್ಕೋನಹಳ್ಳಿ ಪ್ರಾಜೆಕ್ಟ್‌ನಲ್ಲಿ 180 ರೂಪಾಯಿ ವಸೂಲಾಗುತ್ತಾ ಇದೆ. ಅದನ್ನು ಹೆಚ್ಚುಮಾಡಿಲ್ಲ. ಕ್ಯಾಪಿಟಲ್ ವರ್ಕ್ಸ್ ಔಟ್‌ಲೇಗೆ ಲಿಂಕ್‌ಮಾಡಿದ್ದಾರೆಯೇ ಹೊರತು ಖಂಡಿತವಾಗಿಯೂ ಇದನ್ನು ಲ್ಯಾಂಡ್ ಕ್ಯಾಪಿಟಲ್ ವ್ಯಾಲ್ಯೂ ಏನು ಹೆಚ್ಚಿದೆ ಅದಕ್ಕೆ ಲಿಂಕ್‌ಮಾಡಿದ್ದಾರೆ ಎಂದು ಅನ್ನಿಸುವುದಿಲ್ಲ. ಆದ್ದರಿಂದ ಈ ಬೇಸಿಸ್ ಬದಲಾವಣೆ ಆಯಿತು. ಇದೇ ವಿಷಯವನ್ನು ಫೈನಾನ್ಷಿಯಲ್ ಎಂಕ್ವೈರಿ ಕಮಿಟಿಯವರೂ ಕೂಡ ಅವರ ವರದಿಯಲ್ಲಿ ಪ್ರಸ್ತಾಪ ಮಾಡಿ ಕ್ಯಾಪಿಟಲ್ ವರ್ಕ್ಸ್ ಔಟ್‌ಲೇ ಏನಿದೆ—ಜಲಾಶಯ ಕಟ್ಟುವುದಕ್ಕೆ ಎಷ್ಟು ಬಂಡವಾಳ ಬೇಕಾಗುತ್ತದೆ ಅದಕ್ಕೆ ಸಂಬಂಧ ಮಾಡಿದರೆ ಬಹಳ ತಪ್ಪಾಗುತ್ತದೆ, ಬೆಟರ್‌ಮೆಂಟ್ ಟ್ಯಾಕ್ಸಿಗೆ ಬೇಸಿಸ್ ಏನಿರಬೇಕು ಎಂದು ಹೇಳಿ ಅವರು ಸ್ಪಷ್ಟವಾಗಿ ನಿಖರವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದುದರಿಂದ ಹೀಗೆ capital outlayಗೆ ಲಿಂಕ್ ಮಾಡಿದ್ದಾರೆನ್ನುವ ಸಂಶಯ ಬರುತ್ತದೆ. ಏಕೆಂದರೆ, 500 ರೂಪಾಯಿಗಳಿಗೆ ಮೀರಿರಬಾರದು ಎಂದು ಮಾಡಿದ್ದಾರೆ. ಸೆಕ್ಷನ್ 4 ರಲ್ಲಿ "The Collector must take into account the increase in capital value " ಎಂದಿದೆ. He can take other factors into account ಎಂದೂ ಆಗುತ್ತದೆ. ಎಂದರೆ ಅದು ಮಾತ್ರವಲ್ಲ, ಇನ್ನೂ ಇತರ ವಿಷಯಗಳನ್ನೂ ತೆಗೆದುಕೊಳ್ಳಬೇಕು. ಹೈದರಾಬಾದಿನಲ್ಲಿ ಶಾಸನ ಹೇಗಿದೆ ಎಂದು ನೋಡೋಣ. 'Not more than half of the increment in capital value shall be betterment value' ಎಂದು ಇದೆ. ಅರ್ಧಕ್ಕಿಂತ ಹೆಚ್ಚಾಗಿ ಮಾಡುವಹಾಗಿಲ್ಲ ಎಂದು ಇದೆ. ಇಲ್ಲಿಯೂ ಹಾಗೆಯೇ ಶಾಸನದಲ್ಲಿ ಏಕೆ ಹಾಕಬಾರದು ? 500 ರೂಪಾಯಿ ಎಂದು ಏಕೆ ಗೊತ್ತುಮಾಡಿದರು ? ಅದನ್ನು ಹಾಗೇಕೆ ಸ್ಪಷ್ಟಮಾಡಿಲ್ಲ? capital value ಯಾವಾಗ ಜಾಸ್ತಿಯಾಗುತ್ತದೆಯೋ ಅದಕ್ಕೆ ಮಾತ್ರ link ಮಾಡಬೇಕು ಎಂದು ಹೇಳಲಾಗಿದೆ. ಹಿಂದಿನ ಮೈಸೂರಿನಲ್ಲಿಯೂಕೂಡ ನನಗೆ ಗೊತ್ತಿದ್ದಮಟ್ಟಿಗೆ ಒಂದು ರೀತಿ ಇತ್ತು. Dry land ಮತ್ತು Wet landಗೆ ಇರತಕ್ಕ ಮಾರ್ಕೆಟ್ ಬೆಲೆಯಲ್ಲಿ 1/5 ಭಾಗ, ಮತ್ತು ⅓ ಭಾಗ ವಸೂಲ್ಮಾಡುತ್ತಿದ್ದರು. ಎಂದರೆ ಸ್ಪಷ್ಟವಾಗಿ ಇವೊತ್ತು ಇದಕ್ಕೆ ಇಷ್ಟೇಕೊಡಬೇಕೆಂದು ಮಾಡಿದ್ದರೆ ಆಕ್ಟ್ ನೋಡಿದ ತಕ್ಷಣ ಗೊತ್ತಾಗುತ್ತಿತ್ತು. ಒಂದುತತ್ವದ ಆಧಾರದ ಮೇಲೆ ನಿಗದಿ ಮಾಡುತ್ತಾರೆಂದು ಗೊತ್ತಾಗುತ್ತಿತ್ತು. 500 ರೂಪಾಯಿಗಳವರೆಗೆ levy ಮಾಡಿದರೂ, ಅಕ್ಟನ್ನು ಸಂಪೂರ್ಣವಾಗಿ ನೋಡಿದರೆ ಖಂಡಿತವಾಗಿ ಏನು ತತ್ವದ ಮೇಲೆ ನಿಗದಿಮಾಡುತ್ತಾರೆಂಬುದು ಸ್ಪಷ್ಟವಾಗುವುದಿಲ್ಲ. ಮದರಾಸಿನಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ ; ಆಂಧ್ರದಲ್ಲಿ ಸ್ಪಷ್ಟಪಡಿಸಿದ್ದಾರೆ, ಹಾಗೆಯೇ ಏಕೆ ಸ್ಪಷ್ಟಪಡಿಸಬಾರದು ? Net Income ಗಣನೆಗೆ ತೆಗೆದುಕೊಂಡು ಗೊತ್ತುಮಾಡಬೇಕಾದದ್ದು ಬಹಳ ಅಗತ್ಯ. Capital value ಒಂದು ಸಮಯ ಜಾಸ್ತಿಯಾಗಿರಬಹುದು. ಜಮೀನಿನ ಬೆಲೆ ಜಾಸ್ತಿಯಾಗಿರಬಹುದು. ಜಮೀನಿನ ಬೆಲೆ ಜಾಸ್ತಿಯಾದ ಮಾತ್ರಕ್ಕೇ ರೈತನಿಗೆ ಕೊಡುವ ಸಾಮರ್ಥ್ಯ ಹೆಚ್ಚಾಗಿದೆ ಎನ್ನುವುದು ಖಂಡಿತ ಸರಿಯಲ್ಲ. ರೈತನಿಗೆ ಕೊಡತಕ್ಕ ಶಕ್ತಿಯು ಸಾಮಗ್ರಿಗಳ ಬೆಲೆ ಕಡಮೆಯಾದಂತೆ ಕಡಮೆಯಾಗುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. 1953-54ನೆ ಇಸವಿ ತೆಗೆದುಕೊಂಡರೆ ಬೆಲೆ ಕಡಮೆಯಾಗಿತ್ತು. ರೈತನಿಗೆ ಕೊಡುವುದಕ್ಕೆ ಶಕ್ತಿ ಇರಲಿಲ್ಲ. ಉದಾಹರಣೆಗೆ ಹೇಳುತ್ತೇನೆ. Parity Index collect ಮಾಡುತ್ತಾರೆ. Agricultural wholesale price, Industrial retail priceಗೆ ಸಮನ್ವಯ ಹಾಕಿ ಏನು ಕಂಡುಹಿಡಿದಿದ್ದಾರೋ ಅದರ ಪ್ರಕಾರ ನೋಡಿದರೆ 1948ನೆಯ ಇಸವಿಯ parity index 100 ಇತ್ತು. 1954ರಲ್ಲಿ ಅದು 84 ಇತ್ತು. 1955ನೆಯ ಇಸವಿಯಲ್ಲಿ 70 ಇತ್ತು. ಹೀಗಿರುವಾಗ ರೈತ ತಾನು ಕೊಂಡುಕೊಳ್ಳತಕ್ಕ ಸಾಮಗ್ರಿಗಳಿಗೆ, 1948ನೆಯ ಇಸವಿಯಲ್ಲಿ ಎಷ್ಟು ಕೊಡಬೇಕಾಗಿತ್ತೋ ಅದಕ್ಕಿಂತ ಹೆಚ್ಚಿಗೆ ತನ್ನ ಉಪಕರಣಗಳಿಗೋಸ್ಕರ 1955ನೆಯ ಇಸವಿಯಲ್ಲಿ ಕೊಡಬೇಕು. ಅದೇ ಸಮಯದಲ್ಲಿ ತಾನು ಕೊಂಡುಕೊಳ್ಳತಕ್ಕದ್ದಕ್ಕೆ ಬೆಲೆ ಜಾಸ್ತಿಯಾಯಿತು, ಅವನಿಗೆ ಬರತಕ್ಕದ್ದು ಕಡಮೆಯಾಯಿತು ಎಂದು ಅಂಕಿ ಅಂಶಗಳ ಸಂಗ್ರಹದಿಂದ ಗೊತ್ತಾಗಿದೆ. ಕೇಂದ್ರ ಸರ್ಕಾರದವರು ಸೋಷಿಯಲ್ ಎಕನಾಮಿಕ್ ಸರ್ವೆ ಮಾಡುತ್ತಾರೆಂದು ಪತ್ರಿಕೆಯಲ್ಲಿ ನೋಡಿದ್ದೇನೆ. ಈ ಸರ್ವೆಯ ವಿವರಗಳು ಬಂದರೆ ಈ ವಿಷಯ ಸ್ಪಷ್ಟವಾಗಿ ಗೊತ್ತಾಗುತ್ತದೆಂದು ತಿಳಿದಿದ್ದೇನೆ. ಆದುದರಿಂದ Agricultural prices ಮೇಲೆ ನಿಗದಿ ಮಾಡಬೇಕೇ ಹೊರತು ಸುಮ್ಮನೆ Capital value ಎಂದು ಮಾಡಿದರೆ ಸರಿಬರುವುದಿಲ್ಲ.

ಇನ್ನೊಂದು ವಿಷಯ. Land classify ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ತುಂಗಭದ್ರಾ ಯೋಜನೆಯ ಉದಾಹರಣೆ ತೆಗೆದುಕೊಂಡರೆ Dry, dry cum wet, wet, perennial zone ಹೀಗೆಲ್ಲ ಭೂಮಿ ವಿಂಗಡಣೆಯಾಗಿ ಇದೆ. ಅಲ್ಲಿ ನೀರಾವರಿ ಸೌಕರ್ಯ ಇದ್ದರೆ ಮಾತ್ರ ಸಾಲದು. ಅದರ ಜೊತೆಗೆ manure ಇರಬೇಕು; type of cultivation

specific ಆಗಿ ಇರಬೇಕು. ಇದೆಲ್ಲ ಇದ್ದರೆ ಮಾತ್ರ ಸಾಧ್ಯ. ಇಲ್ಲದೆ ಇದ್ದರೆ ಖಂಡಿತವಾಗಿ ಸಹಾಯ ವಾಗುವುದಿಲ್ಲ. ವ್ಯವಸಾಯ ಇಲಾಖೆಯವರು ಹೊರ ಡಿಸಿರತಕ್ಕ booklet ನಲ್ಲಿ ಇರಿಗೇಷನ್ ಪ್ರಾಜೆಕ್ಟ್ ಇದ್ದ ಮಾತ್ರಕ್ಕೆ ಅದರಿಂದ ಸೌಕರ್ಯ ಬರುತ್ತದೆ, ಅನುಕೂಲ ಬರುತ್ತದೆ ಎನ್ನುವುದು ತಪ್ಪು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಿರುವಾಗ ಬರೀ Capital value ತೆಗೆದುಕೊಳ್ಳುವುದು ಸರಿಹೋಗುವು ದಿಲ್ಲ, ಇನ್ನೂ ಇತರ ವಿಷಯಗಳನ್ನೂ ಗಣನೆಗೆ ತೆಗೆದು ಕೊಳ್ಳಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ ವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸೆಕ್ಷನ್ 4 ಏನಿದೆ, ಅದನ್ನು ಸಂಪೂರ್ಣವಾಗಿ ತಿದ್ದುಪಾಟುಮಾಡ ಬೇಕು. ಅದರಲ್ಲಿ ಈ ವಿಷಯವನ್ನೆಲ್ಲ ಆಮೂಲಾಗ್ರ ವಾಗಿ ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಹೀಗೆ ಹೇಳುವಾಗ ಮೆಷಿನರಿ ಏನಿದೆ ಅದರಲ್ಲಿ ಡಿಸ್ಟ್ರಿಕ್ಟ್ ಕಲೆ ಕ್ಟರ್ ಒಬ್ಬರೇ ಇರುವುದು ಸರಿಯಾಗಿ ಆಗುವುದಿಲ್ಲ. ಇದರಲ್ಲಿ ಇಂಜಿನಿಯರು ಇರಬೇಕು, ಎಲ್ಲರೂ ಸೇರಿರ ಬೇಕು. ರೆವಿನ್ಯೂ ಅಧಿಕಾರಿಗಳಿರಬೇಕು, ಅಗ್ರಿಕಲ್ಚರಲ್ ಇಲಾಖೆಯವರು soil fertility ಮುಂತಾದವನ್ನೆಲ್ಲ ಗಣನೆಗೆ ತೆಗೆದುಕೊಳ್ಳುವುದಕ್ಕೆ ಇರಬೇಕು. ಮತ್ತು ಇಂಜಿನಿಯರಿಂಗ್ experts ಈ ಮೂರು ಇಲಾಖೆ ಯವರೂ ಸೇರಿರಬೇಕು ಎಂದೆನ್ನಿಸುತ್ತದೆ.

ಅಪೀಲ್ ವಿಷಯದಲ್ಲಿ ಇತರ ಮಾನ್ಯ ಸದಸ್ಯರು ಹೇಳಿರುವುದಿದೆ. ಶಾಸನದಲ್ಲಿ ಇದನ್ನು ಏಕೆ ತೆಗೆದು ಹಾಕಿದ್ದಾರೆನ್ನುವುದು ಗೊತ್ತಾಗುವುದಿಲ್ಲ. ಹೈದರಾ ಬಾದ್ ಪ್ರಾಂತದಲ್ಲಿ ರೆವಿನ್ಯೂ ಬೋರ್ಡಿಗೆ ಅಪೀಲು ಹೋಗುವುದಕ್ಕೆ ಅವಕಾಶವಿರಬೇಕು. Uniformity ಎಂದರೆ ಒಳ್ಳೆಯದನ್ನು ಮಾತ್ರ ತೆಗೆದುಕೊಳ್ಳಬೇಕು. ಕೆಟ್ಟದ್ದನ್ನು ಏಕೆ ತೆಗೆದುಕೊಳ್ಳಬೇಕೆಂಬುದು ಗೊತ್ತಾ ಗುವುದಿಲ್ಲ. ಈ ಶಾಸನ ಬಂದರೆ ಹಿಂದೆ ಇದ್ದ ಕೆಲವು ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬರುತ್ತದೆಂದೆನ್ನಿಸುತ್ತದೆ. ಹಿಂದಿನ Irrigation Act ಪ್ರಕಾರ ಯಾವುದಾದರೂ ಹೊಸ ಕೆಲಸಗಳನ್ನು ಪ್ರಾರಂಭ ಮಾಡಬೇಕಾದರೆ ರೈತರನ್ನು consult ಮಾಡಬೇಕು ಎಂದು consultative aspect ಇತ್ತು. ರೈತರ ಅಭಿಪ್ರಾಯ ವನ್ನು ತೆಗೆದುಕೊಳ್ಳಬೇಕು, ಅವರ rights protect ಮಾಡಬೇಕು. ಅವರಿಗೂ ಒಂದು ಅವಕಾಶಕೊಡಬೇಕು. Irrigation Project ಷುರುಮಾಡುವುದಕ್ಕೆ ಮುಂಚೆ Project ಷುರು ಮಾಡಿದ ಮೇಲೆ ರೈತರಿಂದ ಸಲಹೆ ಗಳನ್ನು ಬೇಕಾದರೆ ತೆಗೆದುಕೊಳ್ಳಿ, ಬೇಡವಾದರೆ ಬಿಡಿ ಎನ್ನುವ ಧೋರಣೆ ಇದೆ. ಇರಿಗೇಷನ್ ಪ್ರಾಜೆಕ್ಟನ್ನು ಷುರು ಮಾಡುವುದಕ್ಕೆ ಮುಂಚೆಯೂ ಕೂಡ ರೈತರನ್ನು consult ಮಾಡಬೇಕು ಎಂದು consultative aspect ಇತ್ತು. ನಮ್ಮ ಮುಂದಿರುವ ಮಸೂದೆ ಯನ್ನು ನೋಡಿದರೆ ಈಗ ಅದನ್ನು ತೆಗೆದುಹಾಕಿದ್ದಾರೆ. Chapter VI of the Irrigation Act ಹೋಗು ತ್ತದೆ. ಆದುದರಿಂದ ಆ ಸೆಕ್ಷನ್ ಏನಿದೆ ಅದನ್ನು ಮುಂದಕ್ಕೆ ಹೊಸ ಇರಿಗೇಷನ್ ಆಕ್ಟ್ ಬರುವಾಗ ಸೇರಿಸುತ್ತಾರೆಯೋ ಅಥವಾ ಇದರಲ್ಲಿಯೇ ಮುಳುಗಿ ಹೋಗುತ್ತದೆಯೋ ಗೊತ್ತಾಗುವುದಿಲ್ಲ. ರೈತರನ್ನೂ ಕೂಡ consult ಮಾಡಬೇಕೆಂಬ right ಇರಬೇಕು ಎಂದು ಹೇಳ ಬಯಸುತ್ತೇನೆ.

ಮತ್ತೆ ಇನ್ನೊಂದು ವಿಷಯ. ಮದರಾಸ್ ಕಾನೂ ನಿನಲ್ಲಿ ಬಹಳ ಮುಖ್ಯವಾದ ಒಂದಂಶವಿದೆ. ಸೋಷಿಯ ಲಿಸಂ ಎಂದು ಹೇಳಿದಾಗ ಜ್ಞಾಪಕಕ್ಕೆ ಬಂತು. ಬೆಟರ್‌ಮೆಂಟ್‌ಲೆವಿ ವಿಚಾರದಲ್ಲಿ ಮದರಾಸಿನಲ್ಲಿ ಕೊಟ್ಟಿ ರತಕ್ಕ ಸೋಷಿಯಲಿಸ್ಟ್ ತತ್ವವನ್ನು ಗಾಳಿಗೆ ತೂರಿ ಬಿಟ್ಟಿದ್ದಾರೆ, 'works the cost of which exceeds 25 thousand rupees' ಎಂದು ಮದರಾಸ್ ಆಕ್ಟಿನ ಮೂರನೆಯ ಸೆಕ್ಷನ್ನಲ್ಲಿದೆ. ಎಂದರೆ 25 ಸಾವಿರ ರೂಪಾಯಿಗಳಿಗಿಂತ ಹೆಚ್ಚು ವೆಚ್ಚವಾಗುವ ಜಲಾಶಯಗಳಿಗೆ ಮಾತ್ರ ಬೆಟರ್ ಮೆಂಟ್ ಲೆವಿ ಕೊಡಬೇಕೆಂದಿದೆ. ಹೊಸ ಮೈಸೂರಿಗೆ ಬಂದ ತಕ್ಷಣ 25 ಸಾವಿರ ರೂಪಾಯಿಗಳವರೆಗೆ ರಿಯಾಯಿತಿ ತೋರಿಸಿದ್ದುದನ್ನು ಏಕೆ ತೆಗೆದುಹಾಕಿ ದರು? ಏನು type of socialism ಎಂದು ಆಶ್ಚರ್ಯ ವಾಗುತ್ತದೆ.

ಮತ್ತೆ ರೆಸ್ಟೊರೇಷನ್ ವಿಷಯದಲ್ಲಿ ಈಗಾಗಲೇ ಸದಸ್ಯರು ಹೇಳಿದ್ದಾರೆ. ರೆಸ್ಟೊರೇಷನ್ ವಿಷಯದಲ್ಲಿ ಒಂದು ವ್ಯತ್ಯಾಸವನ್ನು ಮಾಡಿದ್ದಾರೆ. ಇದು ಹಿಂದಿನ ಇರಿಗೇಷನ್ ಆಕ್ಟ್‌ನಲ್ಲಿತ್ತು ಎಂದು ತಿಳಿದುಕೊಂಡಿದ್ದೇನೆ. ಏನೆಂದರೆ ರೆಸ್ಟೊರೇಷನ್ ಮಾಡುವುದರಿಂದ ಮೊದಲು ಇದ್ದುದಕ್ಕಿಂತ ಜಾಸ್ತಿ ಎಕರೆ ಭೂಮಿ ಇವೊತ್ತು ನೀರಾವರಿ ವ್ಯವಸಾಯಕ್ಕೆ ಬರುತ್ತದೆಂದರೆ ರೆಸ್ಟೋ ರೇಷನ್ ಮೂಲಕ irrigated area ಜಾಸ್ತಿಯಾಗು ತ್ತದೆ. ಆ ತರಹ ಸಂದರ್ಭದಲ್ಲಿ ಮಾತ್ರ ಹೊಸ ಪ್ರದೇಶಕ್ಕೆ ಬೆಟರ್‌ಮೆಂಟ್, ವಾಟರ್‌ರೇಟ್ ಅನ್ವಯಿಸು ತ್ತದೆಂದು ಹೇಳಿದರೆ ಸರಿಹೋಗುತ್ತದೆ. ಹಿಂದಿನ ಇರಿಗೇಷನ್ ಆಕ್ಟ್‌ನಲ್ಲಿ ಇದ್ದಹಾಗೆ restoration define ಮಾಡಿಲ್ಲವೆಂಬುದನ್ನು ನೋಡಿದರೆ ಸ್ವಲ್ಪ ತಪ್ಪಾಗಿ ಕಾಣುತ್ತದೆ. ಮದರಾಸಿನಲ್ಲಿ, ಹೈದರಾ ಬಾದಿನಲ್ಲಿ ಮತ್ತು ಬೊಂಬಾಯಿನಲ್ಲಿ ತೆಗೆದುಕೊಂಡರೆ ಈ ಮೂರು ಭಾಗಗಳಲ್ಲಿಯೂ ಈಗಲೂ ರೆಸ್ಟೊರೇ ಷನ್ನಿಗೆ ಬೆಟರ್‌ಮೆಂಟ್‌ಲೆವಿ ಚಾರ್ಜ್ ಮಾಡಬೇಕೆಂದಿರ ಲಿಲ್ಲ. ಇನ್ನೂ ಒಂದು ಗೊಂದಲದ ವಿಷಯವೇನೆಂದರೆ, ಮೈನರ್ ಇರಿಗೇಷನ್ ಕೆರೆಗಳು, ಮೇಜರ್ ಇರಿಗೇಷನ್ ಕೆರೆಗಳು, ಮೇಜರ್ ಇರಿಗೇಷನ್ ವರ್ಕ್ಸ್ ಎಲ್ಲವನ್ನೂ ಸೇರಿಸಿಬಿಟ್ಟಿದ್ದಾರೆ. ಯಾವ ಯಾವದಕ್ಕೆ ಯಾವ ಯಾವ ರೀತಿಯಲ್ಲಿ rate ನಿಗದಿಮಾಡಿದ್ದಾರೆ ಎಂದು ತಿಳಿಯಲು ಆಕ್ಟ್ ನೋಡಿ ದರೆ ಗೊತ್ತಾಗುವುದಿಲ್ಲ. ರೂಲ್ಸ್ ನೋಡಿ ಎಂದು ಹೇಳುತ್ತಾರೆ. ಯಾವ ರೀತಿಯಾಗಿ ಇದನ್ನು ಮಾಡ ತ್ತಾರೆಂದು ನಂತರ ನೋಡಬೇಕು. ಇದಕ್ಕೆ ಸ್ಪಷ್ಟ ವಾಗಿ ಒಂದು ಕ್ಲಾಸಿಫಿಕೇಷನ್ ಬೇಕು. ಏಕೆಂದರೆ ಹೀಗೆ ಹಿಂದಿನ ಇರಿಗೇಷನ್ ಆಕ್ಟ್‌ನಲ್ಲಿದೆ.

ಇನ್ನೊಂದು ಸಂಶಯ ಬರುತ್ತದೆ. ಏನೆಂದರೆ Chapter VI ಹೋಗುತ್ತದೆ. Chapter VI-A ಏನಾಗುತ್ತದೆಯೆಂಬುದು ಗೊತ್ತಾಗುವುದಿಲ್ಲ. ಮೈಸೂರು ಇರಿಗೇಷನ್ ಆಕ್ಟ್‌ನಲ್ಲಿ Chapter VI-A ಇದೆ. ಮೈನರ್ ಇರಿಗೇಷನ್ ವಿಷಯದಲ್ಲಿ, ಸಣ್ಣ ಪುಟ್ಟ ಕೆರೆಗಳ ವಿಷಯದಲ್ಲಿ ಇವೊತ್ತು ಕೆಲವು ಅಂಶಗಳನ್ನು ನಿಗದಿಮಾಡಿದ್ದಾರೆ. ಅದು ಉಳಿಯುತ್ತದೆಯೋ, ಹೋಗುತ್ತದೆಯೋ ಎಂದು ನೋಡಿದರೆ ಉಳಿಯುತ್ತದೆ ಎಂದು ತಿಳಿದುಕೊಂಡಿದ್ದೇನೆ.

ಇಲ್ಲಿ ಒಂದು ಪ್ರಶ್ನೆ ಬಂದಿದೆ. ಮೈಸೂರು ಇರಿ ಗೇಷನ್ ಆಕ್ಟಿನ 30 (c) ಗೂ ಈ ಮಸೂದೆಯ ಮೂರ ನೆಯ ಕ್ಲಾಜಿನ IIನೆಯ ಎಕ್ಸ್‌ಪ್ಲನೇಷನಿಗೂ ಸ್ವಲ್ಪ ವಿರೋಧವಾಗುತ್ತದೆ. ಈ ಮಸೂದೆಯ ಮೂರನೆಯ ಕ್ಲಾಜಿನಲ್ಲಿ:

"A land shall not be deemed to be benefited, merely by reason of the execution of ordinary repairs, and maintenance of an existing

(SRI M. C. NARASIMHAN)

work wholly or partly at the expense of Government.''

ಎಂದು ಹೇಳಿದೆ, ಆದರೆ ಇರಿಗೇಷನ್ ಆಕ್ಟಿನ 30 (c) ವಿಧಿಯನ್ನು ನೋಡಿದರೆ ಈ ರೀತಿಯ ರಿಪೇರಿಗೂ ಸ್ವಲ್ಪ ಹಣವನ್ನು ರೈತರು ಕೊಡಬೇಕೆಂದಿದೆ. ''...Every holder of lands in the benefited area, shall pay to the Government an acreage contribution at such rates, not exceeding three rupees per acre per annum, as the Government may, by order, determine'' ಎಂದು ಹೇಳಿದೆ. ಈ ವಿಧಿ ಹೋಗುತ್ತದೆಂದು ಈ ಮಸೂದೆಯಲ್ಲಿ ಎಲ್ಲಿಯೂ ಹೇಳಿಲ್ಲ. ಈ ಮಸೂದೆಯ ಮೂರನೆಯ ವಿಧಿಯ ಅರ್ಥ ವಿವರಣೆಯಲ್ಲಿ ರಿಪೇರಿಗೆ 'ಬೆಟರ್ ಮೆಂಟ್‌ಲೆವಿ' ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳ ಬಹುದಾಗಿತ್ತು. . . . .

*ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೂ ಇದಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಮೈನರ್ ಇರಿಗೇಷನ್ ಕೆಲಸ ಗಳನ್ನು ರೈತರೇ ಮೇಂಟೇನ್ ಮಾಡಬೇಕೆಂದಿದೆ. ಅವರು ಅನೇಕ ವರ್ಷಗಳು ಈ ಕೆಲಸಮಾಡದೆ ಉದಾ ಸೀನವಾಗಿದ್ದರೆ ಸರ್ಕಾರವೇ ಮಾಡಬೇಕೆಂಬ ಸಂದರ್ಭ ಬಂದಾಗ ರೈತರು ಎಕರೆಗೆ ಒಂದೆರಡು ರೂಪಾಯಿ ಕೊಡಲು ಒಪ್ಪಿಕೊಳ್ಳ ಬೇಕೆಂದಿದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಮಾಡಬೇಕಾದ ಕಾಮಗಾರಿಯನ್ನು ಮಾಡಿದರೆ ರೈತರು ಏನೂ ಕೊಡ ಬೇಕಾದುದಿಲ್ಲ. ರೈತರು ಮಾಡಬೇಕಾದುದನ್ನು ಸರ್ಕಾರ ಮಾಡಬೇಕಾಗಿ ಬಂದರೆ ಕೊಡಬೇಕಾಗು ತ್ತದೆ. ಈಗಿರುವ ಪದ್ಧತಿಯ ಪ್ರಕಾರ ರೈತರೇ ಮಾಡಬೇಕು. ಅವರು ಮಾಡದೆ ನೀವೇ ಮಾಡಿ ಎಂದು ಸರ್ಕಾರವನ್ನು ಕೇಳಿದರೆ, ಇದಕ್ಕೆ ಮುಕ್ಕಾಲು ಭಾಗ ಅಚ್ಚುಗಟ್ಟುದಾರರು ಒಪ್ಪಿಕೊಂಡರೆ ಆಗ ಸರ್ಕಾರವೇ ಮಾಡಿ, ಏಕರೇಜ್‌ಸೆಸ್ ಎಂದು ಹಾಕುತ್ತಾರೆ. ಇದೇ ವ್ಯತ್ಯಾಸ.

ಶ್ರೀ ಎಂ. ಸಿ. ನರಸಿಂಹನ್.—ಕಾಂಟ್ರಿಬ್ಯೂಷನ್ ಕೊಡದೆ ಬಾಕಿ ಉಳಿದುಕೊಂಡರೆ ಬಡ್ಡಿ ವಿಧಿಸಬೇಕೆಂದು ಈ ಕಾನೂನಿನಲ್ಲಿ ನಮೂದಾಗಿದೆ. ಆಗಲೇ ನನ್ನ ಮಿತ್ರರು ಹೇಳಿದ ಹಾಗೆ ಮದರಾಸು ಕಾನೂನಿನಲ್ಲಿ ಈ ಬಡ್ಡಿಯ ದರ ಶೇಕಡ ಆರು ಇರಬೇಕೆಂದು ತಿದ್ದು ಪಡಿಯಾಗಿದೆ. ನನಗೆ ತಿಳಿದ ಮಟ್ಟಿಗೆ ಹೈದರಾಬಾದಿ ನಲ್ಲಿ ಅಲ್ಲಿನ ಕಾನೂನಿನ ಪ್ರಕಾರ ಬಡ್ಡಿ ವಿಧಿಸುವುದಿಲ್ಲ. ಆದುದರಿಂದ ನಾವು ಮದರಾಸಿನ ಉದಾಹರಣೆ ತೆಗೆದುಕೊಳ್ಳಬೇಕಾಗಿಲ್ಲ. ಹೈದರಾಬಾದಿನ ಕಾನೂ ನನ್ನನುಸರಿಸೋಣ, ಬಡ್ಡಿಹಾಕುವುದು ಬೇಡ ಎಂದು ಸೂಚಿಸುತ್ತೇನೆ.

ಎರಡನೆಯದಾಗಿ, ಈಗಿರುವ ಹಾಗೆ, ಎರಡು ವರ್ಷದಲ್ಲಿ ಕಾಂಟ್ರಿಬ್ಯೂಷನ್ ಕೊಟ್ಟರೆ ಮದರಾಸಿನಲ್ಲಿ ಶೇಕಡ 20ರಷ್ಟು ರಿಬೇಟ್ ಬರುತ್ತದೆ ಎಂದು ಹೇಳಿ ದ್ದಾರೆ. ಆದರೆ ಇದರಲ್ಲಿ ಶೇಕಡ 10 ಎಂದು ನಮೂದಾಗಿದೆ. ಇದನ್ನು ಹೆಚ್ಚಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳ ಬೇಕಾಗಿದೆ. ಮೈನರ್ ಮತ್ತು ಮೇಜರ್ ಇರಿಗೇಷನ್ ವರ್ಕ್ಸ್ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಸರ್ಕಾರದ ವಶದಲ್ಲಿ ಅನೇಕ ಕೆರೆಗಳಿರುವುದಲ್ಲದೆ ಖಾಸಗಿ ಜನರ ವಶದಲ್ಲಿಯೂ ಇವೆ. ಈ ಖಾಸಗಿ ಜನರು ಅವುಗಳ ರಿಪೇರಿಯನ್ನು ಸರಿಯಾಗಿ ಮಾಡುತ್ತಿ ಲ್ಲವೆಂದು ತಿಳಿದು ಬಂದಿದೆ. ಈ ಬಗ್ಗೆ ಸರ್ಕಾರ ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡಬೇಕಾಗಿದೆ. ದೇಶದ ಲ್ಲಿರುವ ಎಲ್ಲ ಕೆರೆಗಳನ್ನೂ ರಿಪೇರಿ ಮತ್ತು ಜೀರ್ಣೋ ದ್ಧಾರ ಮಾಡುವ ಜವಾಬುದಾರಿಯನ್ನು ಸರ್ಕಾರವೇ ವಹಿಸಿಕೊಳ್ಳುವುದು ಒಳ್ಳೆಯದು. ಹಾಗಿಲ್ಲದೆ ಖಾಸಗಿ ಜನರಿಗೇ ಬಿಟ್ಟರೆ ಖಂಡಿತವಾಗಿ ಈ ಕಾರ್ಯ ಸರಿ ಯಾಗಿ ನಡೆಯುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜ ನಗರ).—ಎಲ್ಲ ಮೇಜರ್ ಮತ್ತು ಮೈನರ್ ಕೆರೆಗಳ ಕೆಲಸಗಳನ್ನೂ ಸರ್ಕಾರ ತೆಗೆದುಕೊಳ್ಳಬೇಕೆಂತಲೆ ?

ಶ್ರೀ ಎಂ. ಸಿ. ನರಸಿಂಹನ್.—ಹೌದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ರೆವಿನ್ಯೂ ಇಲಾಖೆಯ ಅಡಳಿತದಲ್ಲಿವೆ, ಖಾಸಗಿ ಜನರ ಆಡಳಿತ ದಲ್ಲಿಲ್ಲ; ಅವರು ಕೆರೆಗಳನ್ನು ರಿಪೇರಿಮಾಡಿಸಬೇಕು, ಕೆರೆಗಳು ಒಣಗಿ ಹೋದಾಗ ರೈತರು ವ್ಯವಸಾಯ ಮಾಡ ಲು ಅವಕಾಶ ಕೊಡುತ್ತಾರೆಯೇ ಹೊರತು ಖಾಸಗಿ ಜನರ ಮ್ಯಾನೇಜ್‌ಮೆಂಟಿನಲ್ಲಿಲ್ಲ. ಹಿಂದೆ ನೀರು ಹಂಚಿಗೆಯ ಬಗ್ಗೆ ಸಮಿತಿಗಳನ್ನು ಮಾಡಿದ್ದರು. ಮೈನರ್ ಕೆರೆಗಳು ರೆವಿನ್ಯೂ ಇಲಾಖೆಯ ಆಡಳಿತ ದಲ್ಲಿವೆ, ಮೇಜರ್ ಕೆರೆಗಳು ಪಬ್ಲಿಕ್‌ವರ್ಕ್ಸ್ ಇಲಾ ಖೆಯ ಆಡಳಿತದಲ್ಲಿವೆ. ಮೇಜರ್ ಕೆರೆಗಳಲ್ಲಿ ನೀರು ಹಂಚಿಗೆಯ ಬಗ್ಗೆ ಸೌಡಿಗಳನ್ನು ನೇಮಕಮಾಡಿದ್ದಾರೆ. ಮೈನರ್ ಕೆರೆಗಳಿಗೂ ಹೀಗೆ ನೇಮಕ ಮಾಡಿದರೆ ಖರ್ಚು ಹೆಚ್ಚಾಗುತ್ತದೆ. ಹತ್ತು ಜನರ ಹುಲ್ಲುಕಡ್ಡಿ ಒಬ್ಬನ ತಲೆ ಹೊರೆ ಎಂದು ಹೇಳುವ ಹಾಗೆ ರೈತರೇ ಮಾಡಿದರೆ ಒಬ್ಬರ ಮೇಲೆ ಹೆಚ್ಚಿನ ಹೊರೆ ಬೀಳುವುದಿಲ್ಲ ವೆಂದು ಈಗ ಹೀಗೆ ಮಾಡಿದ್ದಾರೆ. ಆದರೆ ಇದು ಸರಿ ಯಾಗಿ ನಡೆಯುತ್ತಿಲ್ಲವಾದುದರಿಂದ ಈ ಕೆಲಸವನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೇ ತೆಗೆದುಕೊಳ್ಳಬೇಕೆಂಬ ಸೂಚನೆ ಇದೆ. ಆದರೆ ಇದರಿಂದ ಖರ್ಚು ಹೆಚ್ಚಾಗು ತ್ತದೆ. ರೈತರು ಎಕರೆಗೆ ಪ್ರತಿವರ್ಷವೂ ಎರಡು ಮೂರು ರೂಪಾಯಿ ಏಕರೇಜ್‌ಸೆಸ್ ಕೊಡಬೇಕಾಗು ತ್ತದೆ. ಆದುದರಿಂದ ಎಲ್ಲವನ್ನೂ ಸರ್ಕಾರದ ವಶಕ್ಕೇ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಕಾಣುತ್ತದೆ. ಈಗ ದವಸ ಧಾನ್ಯಗಳ ಬೆಲೆ ಹೆಚ್ಚಾಗಿರುವುದರಿಂದ ರೈತರು ಇದನ್ನು ಕೊಟ್ಟರೂ ಕೊಡಬಹುದು.

ಶ್ರೀ ಯು. ಎಂ. ಮಾದಪ್ಪ.—ಟ್ಯಾಂಕ್ ಪಂಚಾ ಯಿತಿ ನೇಮಕಮಾಡಿ ಅವರ ವಶಕ್ಕೆ ಕೊಡಬೇಕೆಂದಿದೆ, ಅದನ್ನು ಮಾಡಲಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಮಾಡಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಈ ಮಸೂದೆಯ 9ನೆಯ ವಿಧಿಯ ಪ್ರಕಾರ ಕಾಂಟ್ರಿಬ್ಯೂಷನ್ ವಸೂಲಿಯ ಕ್ರಮದಲ್ಲಿ ಹೇಗೆ ಮಾಡಬೇಕೆಂಬ ಸೂಚನೆಯಿದೆ. ಇದು ಮೈಸೂರಿಗೆ ಸೇರಿರುವ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ರೀತಿ ಇದೆ. ಬೊಂಬಾಯಿನಲ್ಲಿ ಬೆಟರ್‌ಮೆಂಟ್ ಕಾಂಟ್ರಿಬ್ಯೂಷನ್ ಲ್ಯಾಂಡ್ ಹೋಲ್ಡರ್ ಕೊಡಬೇಕೆಂ ದಿದೆ; ಹೈದರಾಬಾದಿನಲ್ಲಿ ಲ್ಯಾಂಡ್ ಲಾರ್ಡ್ ಅರ್ಧ ಕೊಡಬೇಕು, ಇನ್ನರ್ಧವನ್ನು ಗೇಣಿದಾರಕೊಡಬೇಕು ಎಂದಿದೆ. ಮೈಸೂರು ಟೆನೆನ್ಸಿ ಕಾನೂನಿನ ಪ್ರಕಾರ ಲ್ಯಾಂಡ್ ಲಾರ್ಡ್ ಸಂಪೂರ್ಣವಾಗಿ ಕೊಡಬೇಕೆಂದಿದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲ್ಯಾಂಡ್‌ಲಾರ್ಡ್ ಕೊಡ ಬೇಕೆಂದ ಮಾಡಲಾಗಿದೆ. ಇದು ಸರಿಯಲ್ಲ. ಏಕೆಂ ದರೆ, ಮುಂದೆ ನಾವು ಟೆನೆನ್ಸಿ ಕಾನೂನಿನಲ್ಲಿ ಏನು ಸುಧಾರಣೆ ತರಬೇಕೆ ದಿದ್ದೇವೋ ಅದಕ್ಕೆ ಇದು ವಿರೋಧವಾಗುತ್ತದೆ. ಹೊಸ ಕಾಯಿದೆ ಬರುವವರೆಗೆ ಅದನ್ನು ರದ್ದುಮಾಡಬೇಕು. ಅಲ್ಲದೆ ಇದನ್ನು ಲ್ಯಾಂಡ್

ಲಾರ್ಡ್ ಕೊಡಬೇಕು. ಗೇಣಿದಾರ ಅಥವಾ ಟೆನೆಂಟ್ ಕೊಡಬಾರದೆಂದು ಸ್ಪಷ್ಟವಾಗಿ ಹೇಳಬೇಕು. ಲಾಭ ಪಡೆಯುವವನು ಜಮೀನ್ದಾರನಾದುದರಿಂದ ಟೆನೆಂಟ್ ಕೊಡಬೇಕೆಂದು ಹೇಳುವುದು ಸೂಕ್ತವಲ್ಲ. ಆದುದರಿಂದ ಒಂಭತ್ತನೆಯ ಕ್ಲಾಜನ್ನು ವಜಾಮಾಡುವುದು ಸೂಕ್ತ. ಹಾಗಿಲ್ಲದಿದ್ದರೆ ಈಗಲೇ ಇದರಲ್ಲಿ ಟೆನೆಂಟ್ ಕೊಡಬೇಕಾಗಿಲ್ಲವೆಂದು ಸ್ಪಷ್ಟಪಡಿಸಬೇಕು.

ಇತ್ತೀಚೆಗೆ ನಮ್ಮ ಮೇಜರ್ ನೀರಾವರಿ ಕಾಮಗಾರಿಗಳನ್ನು ಸಾಲವನ್ನೆತ್ತಿ ಕಟ್ಟುತ್ತಿದ್ದಾರೆ. ಇವುಗಳನ್ನು ಕೇಂದ್ರ ಸರ್ಕಾರದಿಂದ ಮತ್ತು ಸಾರ್ವಜನಿಕರಿಂದ ಪಡೆಯುವ ಸಾಲದಿಂದ ನಡೆಸಬೇಕಾದ ಪ್ರಸಂಗ ಬಂದಿದೆ. ಸಾರ್ವಜನಿಕ ಸಾಲದ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ಇಂಡಿಯಾ ಸರ್ಕಾರದಿಂದ ಪಡೆಯುವ ಸಾಲದ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ನಮ್ಮ ರಾಜ್ಯಕ್ಕೆ scarcity areas ಎಂದರೆ, ಕ್ಷಾಮ ಪೀಡಿತ ಪ್ರದೇಶಗಳೂ ಬಂದಿರುವುದರಿಂದ, ನಾವು ಪಡೆದ ಸಾಲಕ್ಕೆ ಬಡ್ಡಿಯನ್ನು ಕೊಡದಿರುವಂತೆ ಮಾಡಬೇಕು. ಇಲ್ಲದಿದ್ದರೆ, ಈ ಕಾಮಗಾರಿಗಳಿಂದ ಯಾವಾಗ ನೀರು ಒದಗುತ್ತದೆಯೋ ಅಲ್ಲಿಯವರೆಗೆ ಕೇಂದ್ರ ಸರ್ಕಾರಕ್ಕೆ ನಾವು ಬಡ್ಡಿ ಕೊಡದಿರುವ ಹಾಗೆ ಮಾಡಬೇಕು. ಅಲ್ಲದೆ ಅದುವರೆಗೆ ಸಾಲದ ಕಂತನ್ನೂ ನಮ್ಮಿಂದ ಅವರು ವಸೂಲು ಮಾಡದೇಯಿರುವ ಹಾಗೆ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಈ ಕಾಮಗಾರಿಗಳಿಗಾಗುವ ಖರ್ಚು ಹೆಚ್ಚುವುದಕ್ಕೆ ಕಾರಣವೇನೆಂಬುದನ್ನು ಯೋಚಿಸಬೇಕು. ಈ ವಿಷಯ ಕೇಂದ್ರ ಪಾರ್ಲಿಮೆಂಟಿನಲ್ಲಿಯೂ ಚರ್ಚೆ

5-30 P.M.

ಯಾಯಿತು ವರ್ಷವರ್ಷವೂ ಈ ವರ್ಷ ಬೆಲೆ ಏರುತ್ತದೆ. ಮೊದಲು ಭದ್ರಾ ಯೋಜನೆಗಾಗಿ 15 ಕೋಟಿ ರೂಪಾಯಿಗಳಿದ್ದುದು ಈಗ 24 ಕೋಟಿ ರೂಪಾಯಿಗಳಾಗಿದೆ ಎಂದು ಕಂಡು ಬರುತ್ತದೆ. ಆದ್ದರಿಂದ ಸರ್ಕಾರದವರು ಇವತ್ತು ಕಾಸ್ಟ್ ಆಫ್ ಪ್ರೊಡಕ್ಷನ್ ಏನಿದೆಯೋ ಅದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಬೆಟರ್‌ಮೆಂಟ್ ಲೆವಿಯಿಂದ ಬರತಕ್ಕ ಹಣವನ್ನು ಹೇಗೆ ಉಪಯೋಗ ಮಾಡಬೇಕೆಂದು ಹೇಳುತ್ತೇನೆ.

ಈಗಾಗಲೇ ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿದ್ದ ಜಲಾಶಯಗಳಿಂದ ನಾವು ಸ್ವಲ್ಪ ಲಾಭ ಸಂಪಾದಿಸುತ್ತಿದ್ದೇವೆ. ಮೈಸೂರು ಫೈನಾನ್ಸ್ ಕಮಿಟಿಯವರು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಕೃಷ್ಣರಾಜಸಾಗರದಿಂದ 5·7 ಲಕ್ಷ, ವಾಣೀವಿಲಾಸ ಸಾಗರದಿಂದ 1.6 ಲಕ್ಷ, ಮಾರ್ಕೊನಹಳ್ಳಿ ಜಲಾಶಯದಿಂದ 4.9 ಲಕ್ಷ, ಹೀಗೆ ಹಿಂದಿನ ರಿಸರ್‌ವಾಯರ್‌ಗಳಿಂದ ಒಂದು ನೆಟ್ ರಿಟರ್ನ್ ಬರುತ್ತದೆ. ಹಿಂದೆ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿಯವರು ಸೂಚಿಸಿರುವ ಹಾಗೆ, ಮತ್ತು ಮಾನ್ಯ ಸದಸ್ಯರು ಸೂಚಿಸಿರುವ ಹಾಗೆ ಒಂದು ಇರ್ರಿಗೇಷನ್ ಫಂಡಿಗಾಗಿ ಕಂದಾಯ ವಸೂಲುಮಾಡುವಂತೆ ಏರ್ಪಾಡು ಮಾಡಬೇಕು. ಇವೊತ್ತು ಜಾಸ್ತಿ ವಸೂಲು ಮಾಡುತ್ತಿದ್ದೀರಿ. ಎಷ್ಟೆಷ್ಟೋ ಮೈನರ್ ಇರ್ರಿಗೇಷನ್‌ಗಳ ಮೇಂಟೆನೆನ್ಸ್ ಚಾರ್ಜುಗಳು ಜಾಸ್ತಿಯಾಗಿರುವುದರಿಂದ, ಅವಕ್ಕೆಲ್ಲಾ ಹಣವನ್ನು ಒದಗಿಸಬೇಕಾಗಿದೆ. ರೋಡ್ ರಿಪೇರಿ, ಬಿಲ್ಡಿಂಗ್ ರಿಪೇರಿ, ಇತ್ಯಾದಿ ಕೆಲಸಗಳಿಗೆ non-lapsing fund ಎಂದು ಇರಬೇಕು. ಅದನ್ನು ಇವತ್ತು ಇರ್ರಿಗೇಷನ್ ಸೌಕರ್ಯಗಳಿಗಾಗಿ ಉಪಯೋಗಿಸಬಹುದು. ಅದೇ ರೀತಿಯಲ್ಲಿ ನಮ್ಮ ಪ್ರೊಡಕ್ಷನ್ ಜಾಸ್ತಿ ಮಾಡುವುದಕ್ಕೆ ಏನೇನು ಸೌಕರ್ಯಗಳು ಬೇಕೋ ಅವುಗಳನ್ನು ಇದರ ಮೂಲಕ ಕಲ್ಪಿಸಿ ಕೊಡಬೇಕು. ಅದಕ್ಕೋಸ್ಕರವೇ ಒಂದು ಫಂಡ್ ಇರಬೇಕು. ಅದಕ್ಕೆ ಬೇಕಾದ ಹಣವನ್ನು earmark ಮಾಡಬೇಕು. ಇಲ್ಲದಿದ್ದರೆ ಜನರಲ್ ಎಸ್ಟಾಬ್ಲಿಷ್‌ಮೆಂಟಿಗೆಂದು ಭಾರಿ ಖರ್ಚಾಗುತ್ತದೆ. ಅದರಿಂದ ಏನೂ ಉಪಯೋಗವಾಗುವುದಿಲ್ಲವೆಂಬ ದೃಷ್ಟಿಯಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ಬೆಟರ್‌ಮೆಂಟ್ ಲೆವಿಗೆ ಒಂದು ಫಂಡ್ ಇರಬೇಕೆಂದು ನಾನು ಸೂಚಿಸುತ್ತೇನೆ. ವಾಟರ್ ರೇಟ್ ವಿಷಯದಲ್ಲಿ ಮಾತನಾಡುತ್ತಾ ಮಾನ್ಯ ಸದಸ್ಯರಾದ ಶ್ರೀಮಾನ್ ಅಣ್ಣಾರಾಯರು no profit, no loss ಇರಬೇಕೆಂದು ಹೇಳಿದರು. ಇದು ಸರಿಯಲ್ಲ. ಹಲವಾರು ರೀತಿಯಲ್ಲಿ ಇರಬೇಕು. ಆದರೆ some loss, no loss, some profit, no profit ರೀತಿಯಲ್ಲಿ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿಯವರು ವಿಂಗಡಣೆ ಮಾಡಿದ್ದಾರೆ. ಸ್ಕೇರ್ಸಿಟಿ ಏರಿಯಾಗಳಲ್ಲಿ some loss, no profit ಎಂದು ವಾಟರ್ ರೇಟ್ ನೀತಿ ಇರಬೇಕು. ಈ ತತ್ವದ ಆಧಾರದ ಮೇಲೆ ನಾವು ವಾಟರ್‌ರೇಟನ್ನು ಲೆವಿ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇದರ ಸಾಧ್ಯತೆಯನ್ನು ಪರಿಶೀಲನೆ ಮಾಡಬೇಕು. ಯಾರಿಗೇ ಆಗಲಿ ಒಂದು ಎಕರೆ ಅಥವಾ ಎರಡು ಎಕರೆ ಜಮೀನು ಇದ್ದರೆ ಅಂತಹವರಿಗೆ ವಾಟರ್ ರೇಟ್ ಬೆಟರ್‌ಮೆಂಟ್ ಫೀಯನ್ನು ವಿನಾಯತಿ ಕೊಡಬೇಕೆಂದು ನನ್ನ ಸಲಹೆ. ಇದು ನಿಜವಾಗಿಯೂ ಸೋಷಿಯಲಿಸ್ಟ್ ಪ್ಯಾಟರ್ನ್ ಆಫ್ ಸೊಸೈಟಿಯ ತತ್ವಕ್ಕೆ ಅನುಗುಣವಾಗುತ್ತದೆ. ಅದನ್ನು ಎಲ್ಲರೂ ಒಪ್ಪಬೇಕು. ಆದರೆ ಬೆಟರ್‌ಮೆಂಟ್ ಲೆವಿ ಮೂಲಕವೇ ಹೆಚ್ಚು ಹಣವನ್ನು ಸಂಪಾದಿಸುವುದು ಸರಿಯಲ್ಲ. ಲ್ಯಾಂಡ್ ರಿಫಾರಂ ಮೂಲಕ ಸೀಲಿಂಗ್ ಇರಬೇಕೆಂದಿರುವುದರಿಂದ ಇವತ್ತು ನಿಜವಾಗಿಯೂ ಕ್ಯಾಪಿಟಲ್ ವ್ಯಾಲ್ಯು ಜಾಸ್ತಿಯಾಗುವುದಿಲ್ಲ. ಮಾರ್ಕೆಟ್‌ನಲ್ಲಿ ಕಾಂಪಿಟಿಷನ್ ಕಡಮೆಯಾಗುತ್ತದೆ. ಯಾರೂ ಹೆಚ್ಚು ಹೆಚ್ಚಾಗಿ ಕಂದಾಯ ಕೊಡಲು ಮುಂದೆ ಬರುವುದಿಲ್ಲ. ಇದನ್ನು ಕೂಡ ಸೆಲೆಕ್ಟ್ ಕಮಿಟಿಯವರು ವಿಶೇಷವಾಗಿ ಗಮನಕ್ಕೆ ತೆಗೆದುಕೊಂಡು ಈ ರೇಟುಗಳನ್ನು ಆದಷ್ಟು ಕಡಮೆ ಮಾಡಿ ಬಡ ರೈತರಿಗೆ ಹೆಚ್ಚು ಸಹಾಯ ಕಲ್ಪಿಸುತ್ತೀರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀಮತಿ ರತ್ನಮ್ಮ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಮರಾಮತ್ತು ಶಾಖಾ ಸಚಿವರು ಮಂಡಿಸಿರುವ ಈ ಮಸೂದೆಯನ್ನು ನಾನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳಲು ತಮ್ಮ ಅಪ್ಪಣೆ ಬೇಡುತ್ತೇನೆ. ಈ ಮಸೂದೆಯ ಸ್ವರೂಪ ಸ್ವಲ್ಪ ಹೊಸದಾದರೂ, ಅದರಲ್ಲಿ ಅಡಗಿರುವ ತತ್ವದ ರೀತಿನೀತಿ ಯೇನೋ ಹಾಲಿಜಾರಿಯಲ್ಲಿರುತ್ತದೆ. ವಿಶಾಲ ಮೈಸೂರಿನ ಹಳೆಯ ಮೈಸೂರು, ಬೊಂಬಾಯಿಕರ್ಣಾಟಕ, ಮದ್ರಾಸ್ ಕರ್ಣಾಟಕ, ಹೈದರಾಬಾದ್‌ಕರ್ಣಾಟಕ ಮತ್ತು ಕೊಡಗು ಪ್ರದೇಶನಲ್ಲಿ ಈ ಮಸೂದೆಯಲ್ಲಿ ಅಡಕವಾಗಿರುವತತ್ವಗಳು ವಿವಿಧ ರೂಪಗಳಲ್ಲೂ, ಬೇರೆ ಬೇರೆ ಪ್ರಮಾಣಗಳಲ್ಲೂ ಜಾರಿಯಲ್ಲಿರುತ್ತವೆ. ಆದ್ದರಿಂದ ಈ ಮಸೂದೆಯಲ್ಲಿ ಸೂಚಿಸಿರುವ ಹಾಗೆ ವಿಶಾಲಮೈಸೂರಿನಲ್ಲಿ ಜಾರಿಯಲ್ಲಿರುವ ಬೇರೆ ಬೇರೆ ಶಾಸನಗಳನ್ನು ಸಮನ್ವಯಗೊಳಿಸಿ, ಏಕರೀತಿಯ ಶಾಸನವನ್ನು ಜಾರಿಗೆ ತರುವ ಉದ್ದೇಶದಿಂದಲೇ ಈ ಮಸೂದೆಯನ್ನು ಮಂಡಿಸಲಾಗಿದೆಯೆಂದು ನಾನು ಖಂಡಿತವಾಗಿ ಹೇಳಬಯಸುತ್ತೇನೆ. ಬರೀ ಮಳೆಯನೀರಿನಿಂದಲೇ

(ಶ್ರೀಮತಿ ರತ್ನಮ್ಮ)

ಜಮೀನಿನಲ್ಲಿ ರೈತ ಬೆಳೆ ಬೆಳೆಯುವ ಕಾಲದಲ್ಲಿ ಸಕಾಲದಲ್ಲಿ ಮಳೆಯಾಗದೆ ಅನೇಕ ಸಂದರ್ಭಗಳಲ್ಲಿ ರೈತನ ಕೈಗೆ ಬೆಳೆ ಸಿಕ್ಕದೆ ಅನೇಕ ರೀತಿಗಳಲ್ಲಿ ಅವನು ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗಿದೆ. ಕೆಲವು ವೇಳೆ ಸಾಕಷ್ಟು ಆಹಾರ ಉತ್ಪತ್ತಿಯಾಗದೆ ಆಹಾರ ಕೊರತೆ ಉಂಟಾಗುತ್ತದೆ. ಇಂತಹ ಕಠಿಣ ಪರಿಸ್ಥಿತಿ ದೇಶದಲ್ಲಿ ಒದಗದಂತೆ ನಮ್ಮ ಸರ್ಕಾರದವರು ನೀರಾವರಿಯೋಜನೆಗಳನ್ನು ಕಾರ್ಯಗತ ಮಾಡಲು ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೆ. ಇದು ಬಹಳ ಸಂತೋಷದ ವಿಚಾರ.

ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ 35 ದೊಡ್ಡ ಮತ್ತು ಸಣ್ಣ ಪ್ರಮಾಣದ ಜಲಾಶಯಗಳನ್ನು ಕಟ್ಟಲು ಅವಕಾಶ ಕಲ್ಪಿಸಲಾಗಿದೆ. ಅವುಗಳಲ್ಲಿ ಭದ್ರಾಜಲಾಶಯ ಮತ್ತು ತುಂಗಾ ಜಲಾಶಯ ಭಾರೀ ಪ್ರಮಾಣವುಳ್ಳದ್ದಾಗಿವೆ. ಅಲ್ಲದೆ ಹೊಸ ರಾಜ್ಯ ನಿರ್ಮಾಣವಾದ ನಂತರ ತುಂಗಭದ್ರಾ ಜಲಾಶಯದ ಪ್ರಯೋಜನವೂ ಸಹ ನಮ್ಮ ರಾಜ್ಯದ ರೈತರಿಗೆ ದೊರಕಿದೆ. ಇಂತಹ ಜಲಾಶಯಗಳನ್ನು ಸರ್ಕಾರದವರು ನಿರ್ಮಾಣ ಮಾಡಿ ಭೂಮಿ ಉಳುವವನಿಗೆ ಬೆಳೆ ಬೆಳೆಯಲು ಬೇಕಾಗಿರುವ ನೀರನ್ನು ಸಕಾಲದಲ್ಲಿ ಒದಗಿಸಲು ಮಾಡಿರುವ ಪ್ರಯತ್ನದಿಂದ ರೈತನ ದುಡಿಮೆಗೆ ತಕ್ಕ ಪ್ರತಿಫಲವೂ ಮತ್ತು ದೇಶದಲ್ಲಿ ಆಹಾರೋತ್ಪತ್ತಿ ಹೆಚ್ಚಿನ ಪ್ರಮಾಣದಲ್ಲಿಉಂಟಾಗಲೂ ಅವಕಾಶವಾಗುತ್ತದೆ. ಭಾರೀ ಜಲಾಶಯಗಳನ್ನು ನಿರ್ಮಾಣ ಮಾಡಲು ನಮ್ಮ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಇದಕ್ಕೆ ತಗಲುವ ಹಣವನ್ನು ಯಾವ ರೀತಿ ಒದಗಿಸಬೇಕೆಂಬುದನ್ನು ನಾವು ಗಮನಿಸಬೇಕಾಗಿದೆ. ಸಂಸ್ಥಾನದ ಸಾಮಾನ್ಯ ವರಮಾನದಲ್ಲಿ ಭಾರೀ ಜಲಾಶಯಗಳಿಗೆ ಹಣ ಒದಗಿಸಲು ಸಾಧ್ಯವಿಲ್ಲವೆಂಬ ಮಾತು ನಿರ್ವಿವಾದವಾದುದು. ಅದಕ್ಕಾಗಿ ಈ ಬಾಬಿಗೆ ಹಣ ಒದಗಿಸಲು ಸರ್ಕಾರ ಬೇರೆ ಯಾವುದಾದರೂ ಮಾರ್ಗಗಳನ್ನು ಕಂಡುಹಿಡಿಯಬೇಕಾಗಿದೆ. ಇಂಡಿಯಾ ಸರ್ಕಾರದಿಂದ ಬಡ್ಡಿಯ ಷರತ್ತಿನ ಮೇಲಾಗಲಿ, ಅಥವಾ ನಿಬಡ್ಡಿ ಷರತ್ತಿನ ಮೇಲಾಗಲಿ, ಅಥವಾ ಸಾರ್ವಜನಿಕರಿಂದ ಬಡ್ಡಿ ಷರತ್ತಿನ ಮೇಲಾಗಲಿ ಸಾಲ ಪಡೆಯಬೇಕು. ಹೀಗೆ ಸಾಲ ಪಡೆದು ಜಲಾಶಯಗಳನ್ನು ನಿರ್ಮಾಣ ಮಾಡಬೇಕು. ಜಲಾಶಯಕ್ಕೆ ಖರ್ಚು ಮಾಡಿದ ಹಣದಲ್ಲಿ ಒಂದು ಭಾಗವನ್ನು ಜಲಾಶಯದ ನೀರಿನ ಪ್ರಯೋಜನವನ್ನು ಹೊಂದುವ ರೈತರಿಂದ ವಸೂಲು ಮಾಡುವುದು ನ್ಯಾಯವಾಗಿರುತ್ತದೆ. ಸದಾ ಕಾಲದಲ್ಲೂ ನೀರಿನ ಸರಬರಾಜಿಗೆ ಅವಕಾಶವಿರುವುದರಿಂದ ಜಮೀನಿನಲ್ಲಿ ಬೆಳೆಯ ಉತ್ಪತ್ತಿಗೆ ಯಾವ ಧಕ್ಕೆಯೂ ಇರುವುದಿಲ್ಲ. ಆಗ ಜಮೀನಿನ ಬೆಲೆಯೂ ಹೆಚ್ಚುತ್ತದೆ. ಈ ದೃಷ್ಟಿಯಿಂದ ಯಾವ ರೈತನೇ ಆಗಲಿ ಈ ಮಸೂದೆಯಲ್ಲಿ ಸೂಚಿಸಿರುವಂತೆ ನೀರು ಸರಬರಾಜಿಗೆ ಕಂದಾಯವನ್ನು ಪಾವತಿ ಮಾಡಿದರೂ ಸಹ, ಅದರಿಂದ ಅವನಿಗೆ ಜಮೀನಿನ ಬೆಲೆ ಹೆಚ್ಚುವುದೂ ಅಲ್ಲದೆ ಮಳೆನೀರಿನ ಆಧಾರದ ಮೇಲೆ ನಿಲ್ಲದೆ ತನ್ನ ಜಮೀನಿನಲ್ಲಿ ಯಾವ ಬೆಳೆಯನ್ನಾದರೂ ಬೆಳೆದು ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮ ಗೊಳಿಸಲು ಸಮರ್ಥನಾಗುತ್ತಾನೆ.

ಇನ್ನು ಅಭಿವೃದ್ಧಿಗಾಗಿ ವಿಧಿಸಿರುವ ಕಂದಾಯದ ಪ್ರಮಾಣವನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಜಲಾಶಯದ ನೀರು ಹಾಯುವ ಜಮೀನಿಗೆ ಪ್ರತಿ ಎಕರೆಗೂ 500 ರೂಪಾಯಿಗಳಿಗೆ ಮೀರದಂತೆ ಆಯಾ ಸ್ಥಳ, ಭೂಮಿ ಗುಣ, ಜಲಾಶಯದ ನಿರ್ಮಾಣಕ್ಕೆ ತಗಲುವ ಖರ್ಚು—ಇವುಗಳನ್ನೆಲ್ಲಾ ಗಮನಿಸಿ ಕಂದಾಯವನ್ನು ತೀರ್ಮಾನಿಸಬೇಕೆಂದು ನಿರ್ಧರಿಸಲಾಗಿದೆ. ಈ ನಿರ್ಧಾರ ನ್ಯಾಯ ಸಮ್ಮತವಾಗಿರುತ್ತದೆಂಬ ಅಂಶವನ್ನು ನಾನು ಈ ಸಭೆಯ ಗಮನಕ್ಕೆ ತರಲು ಆಶಿಸುತ್ತೇನೆ. ಈಗ ಉದಾಹರಣೆಗೆ ತುಂಗಾ ಜಲಾಶಯವನ್ನು ತೆಗೆದುಕೊಳ್ಳೋಣ. ಈ ಜಲಾಶಯದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಇದರಿಂದ ಸುಮಾರು 22 ಸಾವಿರ ಎಕರೆ ಜಮೀನಿಗೆ ನೀರನ್ನು ಒದಗಿಸಬಹುದು. ಆಗ ಎಕರೆಗೆ ಸುಮಾರು 500 ರೂಪಾಯಿಗಳಂತೆ ತೆರಿಗೆ ವಿಧಿಸಿದರೂ ಸಹ ಸರ್ಕಾರಕ್ಕೆ ಸುಮಾರು ಒಂದು ಕೋಟಿ 10 ಲಕ್ಷ ರೂಪಾಯಿಗಳು ಮಾತ್ರ ಅವರು ಜಲಾಶಯದ ಮೇಲೆ ಹಾಕಿರುವ ಬಂಡವಾಳದಿಂದ ವಾಪಸ್ಸು ಬಂದಂತಾಗುತ್ತದೆ. ಮೂರು ಕೋಟಿ ರೂಪಾಯಿಗಳನ್ನು ಜಲಾಶಯ ನಿರ್ಮಾಣಕ್ಕೆ ಖರ್ಚು ಮಾಡಿದರೂ ಅದರಿಂದ ಪ್ರಯೋಜನ ಹೊಂದುವವರಿಂದ ಅದರ ಒಂದು ಭಾಗ ಮಾತ್ರ ವಾಪಸ್ಸು ಪಡೆಯುವ ಅಭಿಲಾಷೆಯನ್ನು ಸರ್ಕಾರ ವ್ಯಕ್ತ ಪಡಿಸಿರುವುದು ನಿಜವಾಗಿಯೂ ರೈತರ ಏಳಿಗೆಯಲ್ಲಿ ಸರ್ಕಾರಕ್ಕೆ ಎಷ್ಟು ಆಸಕ್ತಿ ಮತ್ತು ಸಹಾನುಭೂತಿ ಇದೆಯೆಂಬ ಅಂಶ ವ್ಯಕ್ತವಾಗುತ್ತದೆ.

ಇನ್ನು ವಾಟರ್ ರೇಟಿನ ವಿಷಯ. ಈ ವಿಷಯದಲ್ಲಿ ಸರ್ಕಾರದವರು ಬಹಳಜಾಗರೂಕತೆ ವಹಿಸಿ, ಜಮೀನಿನಲ್ಲಿ ಬೆಳೆಯುವ ಪದಾರ್ಥದ ಮೇಲೆ ಮೊತ್ತವನ್ನು ನಿರ್ಧರಿಸಬೇಕೇ ಶಿವಾಯಿ ಎಲ್ಲಾ ಜಮೀನಿನ ಮೇಲೂ ಏಕ ರೀತಿಯಲ್ಲಿ ನಿರ್ಧರಿಸಿದರೆ ಕೆಲವು ರೈತರಿಗೆ ಅನ್ಯಾಯವಾಗುವುದರಲ್ಲಿ ಸಂಶಯವಿಲ್ಲ. ಆಹಾರ ಪದಾರ್ಥಗಳ ಬೆಳೆಯ ಮೇಲೆ ಹೆಚ್ಚು ತೆರಿಗೆ ಹಾಕಿದರೆ ಆಗ ಯಾರಿಗೂ ಅನ್ಯಾಯವಾಗುವುದಿಲ್ಲ. ಈ ಪದ್ಧತಿ ಬೊಂಬಾಯಿ ಪ್ರಾಂತದಲ್ಲಿದೆಯೆಂದು ನಾನು ತಿಳಿಯುತ್ತೇನೆ. ಈ ವಾಟರ್ ರೇಟನ್ನು ನಿರ್ಧರಿಸುವಾಗ ಸರ್ಕಾರದವರು ಬೊಂಬಾಯಿ ಕರ್ಣಾಟಕದಲ್ಲಿ ಹಾಲಿ ಇರುವ ದರವನ್ನು ಗಮನಿಸಿದರೆ ನಮ್ಮ ರೈತರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಭೂಮಿ ಗುಣ, ಬೆಳೆ ಇತ್ಯಾದಿ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಈ ಕಂದಾಯದ ಹೊರೆ ರೈತರ ಮೇಲೆ ಬಹಳವಾಗಿ ಬೀಳದಂತೆ ಎಚ್ಚರಿಕೆಯಿಂದ ದರವನ್ನು ನಿರ್ಧರಿಸಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಲ್ಲದೆ ಮಲೆನಾಡಿನ ಪ್ರದೇಶದಲ್ಲಿ ಆದಷ್ಟು ಕಡಮೆ ದರವನ್ನು ನಿಗದಿ ಮಾಡಬೇಕಾಗಿರುತ್ತದೆ. ಏತಕ್ಕೆಂದರೆ ಅಲ್ಲಿಯ ಹವಾ ಗುಣದಿಂದ ರೈತರು ಮಾಡುವ ಕೆಲಸಕ್ಕೆ ತಕ್ಕ ಪ್ರತಿಫಲ ಸಿಕ್ಕುವುದು ಬಹಳ ಕಡಮೆ ರೈತನು ಎಷ್ಟೇ ಕಷ್ಟಪಟ್ಟರೂ ಮಲೆನಾಡಿನಲ್ಲಿ ಒಂದು ಎಕರೆಯಲ್ಲಿ ಆಗುವ ಬೆಳೆ ಮೈದಾನ ಪ್ರದೇಶದಲ್ಲಿ ಆಗುವ ಬೆಳೆಯಲ್ಲಿ ಅರ್ಧಕ್ಕಿಂತ ಕಡಮೆ ಎಂಬ ಅಂಶವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಆ ಪ್ರದೇಶಗಳಲ್ಲಿ ವಾಟರ್ ರೇಟನ್ನು ಆದಷ್ಟು ಕಡಮೆ ದರದಲ್ಲಿ ನಿರ್ಧರಿಸಬೇಕೆಂದು ಪ್ರಾರ್ಥನೆ ಮಾಡಿ ಈ ಮಸೂದೆಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಮಸೂದೆ ಚರ್ಚೆಗೆ ಬೇಕಾದಷ್ಟು ಅವಕಾಶಕೊಟ್ಟಿದೆ. ಇದುವರೆಗೆ ನೋಡಿದ್ದರಲ್ಲಿ ಕಾಂಗ್ರೆಸ್ ಸದಸ್ಯರಾಗಲಿ ಅಥವಾ ಎದುರು ಪಕ್ಷದವರಾಗಲಿ ಹೊಸ ಅಂಶವನ್ನೇನೂ ಹೇಳಿದಂತೆ ಕಾಣಲಿಲ್ಲ. ಹೇಳಿದ್ದನ್ನೇ ಹೇಳುತ್ತಾ ಒತ್ತಾಯಮಾಡಿ ಹೇಳುತ್ತಿದ್ದಾರೆ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ, ಮಾನ್ಯ ಸದಸ್ಯರು ಹೇಳಿದ ಅಂಶಗಳನ್ನು ಆ ಸಮಿತಿಯವರು ಗಮನಿಸುತ್ತಾರೆ, ಎದುರು ಪಕ್ಷದವರೂ ಆ ಸಮಿತಿಯಲ್ಲಿದ್ದಾರೆ. ಈಗ ಅಧಿವೇಶನ ಮುಗಿಯುವ ವೇಳೆಯಾಯಿತು. ಈ ದಿವಸ ಎಂಟು ಗಂಟೆಯವರೆಗೂ ಕುಳಿತುಕೊಳ್ಳಬೇಕು. ಅನೇಕರು ಮಾತನಾಡಬೇಕು ಎಂದು ಹೇಳಿದರೆ ನನ್ನ ಅಭ್ಯಂತರವೇನೂ ಇಲ್ಲ. ಮುಖ್ಯವಾದ ಉದ್ದೇಶ ಜನರಿಗೆ ಈ ಕಾನೂನಿನಿಂದ ತೊಂದರೆಯಾಗಬಾರದೆಂಬುದು. ಈ ಮಸೂದೆ ಸೆಲೆಕ್ಟ್ ಕಮಿಟಿಯಿಂದ ಬಂದಮೇಲೆ ಮತ್ತೆ ಚರ್ಚೆಯಾಗುತ್ತದೆ. ಆಗಲೂ ಮಾನ್ಯ ಸದಸ್ಯರಿಗೆ ಅವಕಾಶವಿದೆ. ಅಲ್ಲದೆ ಕೆಲವು ಮಾನ್ಯ ಸ್ನೇಹಿತರು ಕ್ಲಾಜುವಾರಾಗಿ ಚರ್ಚೆಮಾಡಿದ್ದಾರೆ. ಯಾರೂ ಹೊಸ ಅಂಶ ಹೇಳಿದಂತೆ ಕಾಣಲಿಲ್ಲ. ಸೆಲೆಕ್ಟ್ ಕಮಿಟಿ ವರದಿ ಬಂದಮೇಲೆ ತಿದ್ದುಪಡಿ ಕಳುಹಿಸಬಹುದು, ಚರ್ಚೆ ಮಾಡಬಹುದು. ಈ ದಿವಸವೇ ಈ ಚರ್ಚೆ ಮುಕ್ತಾಯವಾಗುವುದಿಲ್ಲ, ಈ ಮಸೂದೆ ಕಾನೂನಾಗುವುದಿಲ್ಲ. ಇದರ ತತ್ವವನ್ನು ಸಾಮಾನ್ಯವಾಗಿ ಚರ್ಚೆಮಾಡಿದ್ದೇವೆ. ಇದರಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ಅದನ್ನೇ ಬೇರೆ ಸ್ನೇಹಿತರೂ ಒತ್ತಾಯಮಾಡಿ ಹೇಳಿದ್ದಾರೆ. ಆದ್ದರಿಂದ ಈ ಚರ್ಚೆಯನ್ನು ಇಲ್ಲಿಗೆ ಸಾಕುಮಾಡಬಹುದೆಂದು ನನಗೆ ತೋರುತ್ತದೆ.

[MR. SPEAKER in the Chair]

Sri M. RAMAPPA (Harihara).—Sir, a closure motion is put before the House under rule 154. Hardly one member has spoken from this side. The Minister for Public Works has stated that he did not expect any fresh points on this Bill. I only request you to give chance to at least one or two members on this side.

Sri H. K. VEERANNA GOWDH.—I have no objection at all. I could gather from the trend of discussion by the members who spoke that they dwelt on the same issues.

Sri M. RAMAPPA.—On this side, only one member Sri Shankarappa has spoken. I request the Chair to give more chances to members on this side.

*Sri H. M. CHANNABASAPPA.—With due deference to what has been stated by the Minister, I would like to submit this much. This is a very important Bill. No doubt some of the points have been repeated. Still I hope fresh light is bound to come and important points are bound to come to light in the course of the debate. If the Hon'ble Ministers wants this Bill to go to the Select Committee, certainly we welcome it. Yet I think we can take some time and permit some more discussion and see that whoever wants to throw more light may be given chances.

Mr. SPEAKER.—I want to know from the Hon'ble Member whether this has not been discussed for two days.

Sri H. M. CHANNABASAPPA.—It may have been discussed for two days. In my humble opinion there is much to be discussed yet.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ. ಈ ಮಸೂದೆಯ ಮೇಲೆ ಮೂರು ದಿವಸ ಚರ್ಚೆಯಾಯಿತು, ಈ ಮಸೂದೆ ಸರಿಯಾಗಿದೆಯೆಂದು ಯಾರ ವಾದ ಮಾಡಿದರೋ ಅವರೇ ಮೂರು ದಿವಸವೂ ಮಾತನಾಡಿದರು. ಮೊದಲನೆಯ ದಿವಸ ಶ್ರೀ ಪುಟ್ಟಸ್ವಾಮಿಯವರು ಮಾತನಾಡಿದರು; ಮತ್ತೆ ನಿನ್ನೆಯೂ ಅವರೇ ಮಾತನಾಡಿ ಈ ದಿವಸ ಅವರ ಭಾಷಣ ಮುಗಿಸಿದರು. ಈಗ ಈ ಮಸೂದೆ ತಂದಿರುವ ಪಕ್ಷದವರೇ ಈ ಬಿಲ್ಲು ಸರಿಯಾಗಿದೆಯೆಂದು ಹೇಳುವವರೇ ಶೇಕಡ 75 ಮಂದಿ ಮಾತನಾಡಿದ್ದಾರೆ. ನಮ್ಮ ಕಡೆ ಒಬ್ಬಿಬ್ಬರು ಮಾತ್ರ ಮಾತನಾಡಿದ್ದಾರೆ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದರಲ್ಲಿದ್ದೇವೆ. ಹಾಗಿರುವಾಗ ನಮ್ಮ ವಾದವನ್ನು ಸಭೆಯ ಮುಂದಿಡವುದಕ್ಕೆ ಅವಕಾಶವಿಲ್ಲ ಈ ಮಸೂದೆಯನ್ನು ತಂದಿರುವವರ ಪಕ್ಷದವರೇ ಜಾಸ್ತಿಯಾಗಿ ಮಾತನಾಡಿದ್ದಾರೆ. ಈ ಮಸೂದೆ ಸರಿಯಾಗಿದೆಯೋ, ಇಲ್ಲವೇ, ಏನಾದರೂ ತೊಂದರೆಯಿದೆಯೋ, ಇಲ್ಲವೇ ಎಂದು ಹೇಳುವುದಕ್ಕೆ ನಮ್ಮ ಕಡೆ ಸ್ವಲ್ಪ ಜನರಿಗೆ ಅವಕಾಶ ಕೊಟ್ಟಿದ್ದರೆ ನಮ್ಮ ಅಭಿಪ್ರಾಯ ಸಮಿತಿಯ ಗಮನಕ್ಕೆ ಬರುತ್ತಿತ್ತು.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲಾ ಕಡೆಯವರೂ ಸಮಿತಿಯಲ್ಲಿದ್ದಾರೆ, ಅಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಲ್ಲಿ ಶೇಕಡ 75 ಮಂದಿ ಕಾಂಗ್ರೆಸ್ಸಿನವರೂ ಮತ್ತು 25 ಮಂದಿ ಈ ಕಡೆಯವರೂ ಇರುತ್ತಾರೆ. ಹಾಗಿರುವಾಗ ಈ ಮಸೂದೆಯ ವಿಚಾರದಲ್ಲಿ ಮಾತನಾಡಲು ನಮ್ಮವರಿಗೇ ಹೆಚ್ಚು ಮನ್ನಣೆ ಕೊಡಬೇಕೇ ವಿನಾ ನಾವು ಮಾಡಿರುವುದೇ ರಿಯೆಂದು ಹೇಳುವವರಿಗೆ ಮನ್ನಣೆ ಕೊಟ್ಟು, ಇಷ್ಟೇಸಾಕು ಎಂದು ಹೇಳಿದರೆ ಹೇಗೆ? ಈಗ ಒಬ್ಬ ಸದಸ್ಯರಿಗೇ ಮೂರು ದಿವಸ ಅವಕಾಶ ಸಿಕ್ಕಿದೆ, ಕ್ಲೋಷರ್ ಮೋಷನ್ ಮಂಡಿಸಬಹುದು, ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರವಿದೆ, ತಮಗೆ ಅಧಿಕಾರವಿದೆ, ಅಧಿಕಾರದಲ್ಲಿರುವ ಪಕ್ಷದವರೇ ಹೆಚ್ಚಾಗಿದ್ದಾರೆ, ಓಟಿಗೆ ಹಾಕಿದರೂ ಹೆಚ್ಚು ಜನ ಅವರ ಪರವಾಗಿ ಓಟು ಮಾಡಲು ಅವಕಾಶವಿದೆ, ಆ ಶಕ್ತಿಯಿದೆ, ನಮಗೆ ಬೇಕಾದಹಾಗೆ ಮಾಡಿಕೊಳ್ಳುತ್ತೇವೆಂದು ಹೇಳಿದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಕ್ಲೋಷರ್ ವಿಚಾರದ ಮೇಲೆ ಇಷ್ಟು ಹೇಳಿದರೆ ಹೇಗೆ? ಸ್ವಲ್ಪದರಲ್ಲೇ ಹೇಳಿ.

Sri B. K. PUTTARAMIYA.—I have never come across. . . . .

ಅಧ್ಯಕ್ಷರು.—ನಮ್ಮ ಕಡೆಯವರು ಜಾಸ್ತಿ ಮಾತನಾಡಿಲ್ಲ, ಆದ್ದರಿಂದ ನಮಗೆ ಹೆಚ್ಚು ಅವಕಾಶ ಕೊಡಬೇಕು, ಕ್ಲೋಷರ್ ಮೂವ್ ಮಾಡಕೂಡದು ಎಂದು ತಾನೆ ತಾವು ಹೇಳುವುದು ?

Sri V. S. PATIL.—I want to submit that this is an important Bill and the taxation that is tried to be imposed is a new tax in our part. This contribution business is not there in our part till now. So we have to take this clause by clause and I will point out later that the whole draft is a hopeless one. That is the reason why the closure motion should not be accepted. Otherwise it may amount to gagging our mouths. Further, out of three days taken, most of the time has been taken by the Congress members. The hon'ble member Sri K. Puttaswamy took three days. He commenced his speech last day and today also he has taken more than an hour. If we thus calculate the time given, very little time has been given to us. Therefore, I submit that the closure motion must not be accepted and we must be given full time and if there are repetitions please check it. We will try to make only the new points that will still arise or have not been discussed in this House. I submit that the closure motion should not be accepted at this stage.

ಅಧ್ಯಕ್ಷರು.—ಯಾರು ಯಾರು ಎರಡು ದಿವಸಗಳಿಂದ ಈ ಬಿಲ್ಲಿನ ಮೇಲೆ ಮಾತನಾಡಿರುತ್ತಾರೆಂಬ ಬಗ್ಗೆ ಈಗ ನನ್ನಲ್ಲಿ ಆ ಲಿಸ್ಟ್ ಇಲ್ಲ. ಆದರೆ ಈಗ ನಾವು ಇನ್ನೂ ಒಂದು ಘಂಟೆ ಬೇಕಾಗಿದ್ದರೆ ಕುಳಿತುಕೊಂಡು ಈ ಬಿಲ್ಲನ್ನು ಮುಗಿಸಿ ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸೋಣವೆಂಬುದು ನನ್ನ ಅಭಿಪ್ರಾಯ.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಸ್ವಾಮಿ, ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಗೂ ಕೂಡ, ನನ್ನನ್ನು ಕೇಳಿದರೆ, ಕಳುಹಿಸಬೇಕಾದದ್ದೇ ಇಲ್ಲ ಎಂದು ಹೇಳುತ್ತೇನೆ. ತಾವು ಈ ಮಸೂದೆಯನ್ನು ಏಕ್‌ದಂ ಓಟಿಗೆ ಬೇಕಾದರೂ ಹಾಕಬಹುದು. ಸ್ವತಂತ್ರ ಪಕ್ಷದ ಸದಸ್ಯರು ಮತ್ತು ಪಿ.ಎಸ್.ಪಿ. ಪಕ್ಷದ ಸದಸ್ಯರು ಹೇಗಿದ್ದರೂ ಕಡಮೆ ಇದ್ದಾರೆ. ಈ ಮಸೂದೆ ಆಗ ಹೇಗೂ ಪಾಸಾಗಿಯೇ ಆಗುತ್ತದೆ. ಆದರೆ ಈ ಮಸೂದೆಯ ಮೇಲೆ ಈ ವರೆಗೆ ಮಾತನಾಡಿರತಕ್ಕವರಲ್ಲಿ ಎಷ್ಟು ಜನ ಜಮೀನ್ದಾರರು, ಎಷ್ಟು ಜನ ಹಳ್ಳಿ ಪರಿಸ್ಥಿತಿಯನ್ನರಿತಿರುವವರು ಎಂಬುದನ್ನು ತಾವು ಈಗ ಮುಖ್ಯವಾಗಿ ತಮ್ಮ ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ತಾವು ಯಾರು ಯಾರು ಹೊಸ ವಿಚಾರ ತಿಳಿಸುತ್ತಾರೋ ಅಂಥವರಿಗೆ ಮಾತ್ರ ಮಾತನಾಡಲು ಅವಕಾಶಕೊಡಿ. ನಾನು ಹೊಸವಿಚಾರ ತಿಳಿಸುತ್ತೇನೆ. ನನಗೆ ಮಾತನಾಡಲು ತಾವು ಅವಕಾಶ ಕೊಡಿ. ಆದರೆ ಅಧ್ಯಕ್ಷರು ಈಗ ಮೂವ್ ಮಾಡಿರುವ ಕ್ಲೋಷರ್ ಮೋಷನ್ನನ್ನು ಅಂಗೀಕರಿಸಬಾರದೆಂದು ಹೇಳುತ್ತೇನೆ. ಹಾಗೆ ತಾವು ಒಂದುವೇಳೆ ಅದನ್ನು ತಾವು ಅಂಗೀಕರಿಸುವುದಾದರೆ ಅದಕ್ಕಿಂತಲೂ ಸುಲಭವಾದ ಇನ್ನೊಂದು ಮಾರ್ಗವಿದೆ. ನಾನಾಗಲೇ ಹೇಳಿದ ಹಾಗೆ ಏಕ್‌ದಂ ಓಟಿಗೇ ಹಾಕಿಬಿಡಿ. ಅದಿನ್ನೂ ಎಷ್ಟೋ ಒಳ್ಳೆಯದು. ದಿವಸಕ್ಕೆ ಹದಿನಾರು ರೂಪಾಯಿಗಳ ಉಳಿತಾಯವಾದರೂ ಆಗುತ್ತದೆ. ಇಷ್ಟು ದಿವಸ ಈ ಸಭೆ ಕುಳಿತುಕೊಳ್ಳಬೇಕಾದ ಅವಶ್ಯಕತೆಯೇ ಇರುತ್ತಿರಲಿಲ್ಲ.

ಅಧ್ಯಕ್ಷರು —ಅವರು ಮೂವ್ ಮಾಡಿರಬಹುದು. ಆದರೆ ನಾನು ಅದನ್ನು ಓಟಿಗೆ ಹಾಕುವುದಿಲ್ಲ. ಆ ಬಗ್ಗೆ ನಿಮಗೆ ಸಂಶಯವೇಕೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಈ ವಿಚಾರಗಳೆಲ್ಲಾ ನಮ್ಮ ಮಾನ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಈ ಹಿಂದೆ ಒಂದಾವರ್ತಿ ಸರ್ ಮಿರ್ಜಾರವರ ದಿವಾನಗಿರಿ ಯಿದ್ದಾಗ ಇವರೇ ಒಂದು ರೈತರ ಗುಂಪನ್ನು ಮದ್ದೂರಿನಿಂದ ಬೆಂಗಳೂರುವರೆಗೂ ಕಾಲು ನಡಗೆಯಲ್ಲೆ ನಡೆಸಿಕೊಂಡು ಬಂದಿದ್ದ ವಿಚಾರ ಅನೇಕರಿಗೆ ಗೊತ್ತಿದೆ. ಆ ದಿವಸ ತಮಗೆ ಅಷ್ಟು ದೇಶಪ್ರೇಮವಿತ್ತು. ಈ ದಿವಸ ಅದೆಲ್ಲಾ ಎಲ್ಲಿ ಮಾಯವಾಗಿ ಹೋಯಿತು? ಈ ಇಕ್ಕಟ್ಟಿಗೆ ಬಂದು ತಾವು ಏಕೆ ಸಿಕ್ಕುಹಾಕಿಕೊಂಡಿರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನನಗೆ ಯಾರಿಂದಲೂ ಸರ್ಟಿಫಿಕೇಟ್ ಬೇಕಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವ್ಯವಸಾಯಕ್ಕೆ ನೀರನ್ನು ಉಪಯೋಗಿಸಿಕೊಂಡು ಜೀವನ ನಡೆಸುತ್ತಿರುವ ರೈತನ ವಿಚಾರಕ್ಕೆ ಈ ಮಸೂದೆ ಸಂಬಂಧಪಟ್ಟಿರುವುದರಿಂದ ನಾವೀಗ ಇದನ್ನು ಚರ್ಚೆ ಮಾಡಲು ಕಾತರರಾಗಿದ್ದೇವೆ. ಹಾಗಿರುವಾಗ ತಾವೇಕೆ ನಮಗೆ ಮಾತನಾಡಲು ಅವಕಾಶ ಕೊಡಬಾರದು ? ತಮಗೆ ಈ ಮಸೂದೆಯಿಂದೇನೂ ನಾಳೆಯೇ ಐದಾರು ಕೋಟಿ ರೂಪಾಯಿಗಳು ಬರುವುದಿಲ್ಲ. ಈ ದಿವಸ ಕಳೆದರೆ ನಾಳೆ ಆ ಹಣವೆಲ್ಲಾ ಹೋಗಿಬಿಡುತ್ತದಲ್ಲಾ ಎಂಬ ಗಾಬರಿಯೇನೂ ಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನು ತಿಳಿದುಕೊಂಡಿರುವ ಹಾಗೆ ಸರ್ಕಾರವನ್ನು ನಡೆಸುತ್ತಿರುವುದು ಈ ಸಭೆ. ಈಗ ಈ ಸಭೆಯು ಇಲ್ಲಿ ಕೆಲಸ ಮಾಡುತ್ತಿರುವುದೂ ಸಹ ಸರ್ಕಾರದ ಪರವಾಗಿ ಎಂದು ತಿಳಿದುಕೊಂಡಿದ್ದೇನೆ. ಹಾಗೊಂದುವೇಳೆ ತಮಗೆ ಆವಶ್ಯಕವೆಂದು ಕಂಡುಬಂದಲ್ಲಿ ಆ ಸೆಲೆಕ್ಟ್ ಸಮಿತಿಗೆ ವಿರೋಧ ಪಕ್ಷದಿಂದ ಇನ್ನೂ ಕೆಲವು ಸದಸ್ಯರನ್ನು ತೆಗೆದುಕೊಳ್ಳೋಣ. ಆದರೆ ಈ ಮಸೂದೆಯೇನೂ ಈ ಅಧಿವೇಶನದಲ್ಲೇ ಚರ್ಚೆಗೆ ಬರುವುದಿಲ್ಲ. ಈಗ ಇದರ ಮೇಲೆ ಚರ್ಚೆ ನಡೆದಿರುವುದು ಸಾಕು, ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸೋಣ ಎಂದು ಕೇಳಿದ್ದಕ್ಕೇ ನೀವು ಅಷ್ಟಕ್ಕೇ ನಮನ್ನು ಕೈಬಿಟ್ಟಿರಿ ಎಂದು ಹೇಳುತ್ತಿದ್ದೀರಿ. ಆ ರೀತಿ ಯಾರು ಹೇಳಿದರು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮಂತ್ರಿಗಳು ಹೀಗೆ ಉದಾರವಾಗಿ ಹೇಳಿದರೋ ನಾವೂ ಹಾಗೆಯೇ ಉದಾರವಾಗಿ ಹೇಳುತ್ತೇವೆ. ಅವರೂ ಕೂಡ ರೈತನ ಮನೆಯಿಂದ ಬಂದ ಜನರಾಗಿದ್ದಾರೆ. ನಾವಾದರೋ ಈ ಮಸೂದೆಯ ಮೇಲೆ ಹೊಸ ಬೆಳಕನ್ನು ಚೆಲ್ಲತಕ್ಕವರಾಗಿದ್ದೇವೆ. ಮಂತ್ರಿಗಳು ಆ ಸೆಲೆಕ್ಟ್ ಸಮಿತಿಯಲ್ಲಿ ರಾತ್ರಿಯೆಲ್ಲಾ ಕುಳಿತುಕೊಂಡು ಕಣ್ಣಿಗೆ ಎಣ್ಣೆ ಹಾಕಿಕೊಂಡು ಏಕೆ ಆ ಕಷ್ಟಗಳನೆಲ್ಲಾ ಪಡುತ್ತಿದ್ದಾರೆ ? ಏತಕ್ಕೆ ಅಷ್ಟೆಲ್ಲಾ ದುಡ್ಡನ್ನು ಅವರು ವೆಚ್ಚ ಮಾಡುತ್ತಿದ್ದಾರೆ? ಹಾಗೆ ತಮಗೆ ನಮ್ಮಿಂದ ಸಹಕಾರ ಬೇಕಾಗಿದ್ದರೆ ಬೇಕೆಂದು ಕೇಳಿ—ಕೊಡುತ್ತೇವೆ. ತಮಗೆ ಎಲ್ಲ ವಿಚಾರಗಳಲ್ಲೂ ನಾವು ಸಹಕಾರ

ಕೊಡುತ್ತಲೇ ಬಂದಿದ್ದೇವೆ. 208 ಜನರಿರತಕ್ಕಂಥ ಈ ಸಭೆಗೆ ಈ ಮಸೂದೆಯ ದೇಶದ ಬಗ್ಗೆ ಒಂದು ಅಭಿಪ್ರಾಯ ಮಂಡಿಸಲು 50 ಜನರಿಗಾದರೂ ತಾವು ಮಾತನಾಡಲು ಅವಕಾಶ ಕೊಡಬೇಡವೇ ?.........

ಅಧ್ಯಕ್ಷರು.—ಈಗ ತಾವು ಹಾಗೆಲ್ಲ ಭಾಷಣ ಮಾಡಲಿಕ್ಕೆ ಹೋಗಬೇಡಿ. ಆ ಕ್ಲೋಷರ್ ಮೋಷನ್ನನ್ನು ಒಪ್ಪಿಕೊಳ್ಳಬೇಕು—ಇಲ್ಲ ಒಪ್ಪಿಕೊಳ್ಳಬಾರದು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವೇನಿದೆ ಎಂಬುದನ್ನು ತಿಳಿಸಿದರೆ ಈಗ ಸಾಕು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಈಗಾಗಲೇ ನಾವು ಮಧ್ಯಾನ್ಹ ಒಂದು ಘಂಟೆಯಿಂದ ಆರು ಘಂಟೆ ತನಕ ಕುಳಿತುಕೊಂಡಿದ್ದೇವೆ. ಸಾಕಾಗಿದೆ. ಇನ್ನು ಇದರ ಮೇಲೆ ಕುಳಿತ್ಕುಕೊಳುವುದು ಬೇಡ ಎಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಅಧ್ಯಕ್ಷರು.—ಈ ದಿವಸ 'Half-an-hour motion' ಬೇರೆ ಇದೆ.

ಶ್ರೀ ವಿ. ಎಸ್. ಪಾಟೀಲ್ (ರಾಯಬಾಗ್).—ಭಾಲ್ಕಿ—ಬೆಳಗಾಂ ಇತ್ಯಾದಿ ಪ್ರದೇಶಗಳಿಗೆ ಈ ಮಸೂದೆ ಹೊಸದು. ರಾಯಬಾಗ್-ಚಿಕ್ಕೋಡಿ ಭಾಗದಿಂದ ಯಾರೂ ಇದುವರೆಗೆ ಈ ಮಸೂದೆಯಮೇಲೆ ಮಾತನಾಡಿಲ್ಲ. ಅವರಿಗೆ ಅವಕಾಶವೇ ಸಿಕ್ಕಿಲ್ಲ. ಆದ್ದರಿಂದ ಕ್ಲೋಷರ್ ಮೋಷನ್ನನ್ನು ಹಾಕಬಾರದೆಂದು ಹೇಳುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಈ ವರೆಗೆ ಎಂದೂ ಹೀಗೆ ಕ್ಲೋಷರ್ ಮೋಷನ್ ಬಂದಿರಲಿಲ್ಲ. ಈಗ ಹೊಸದಾಗಿ ಉದ್ಭವಿಸಿದೆ. ಆದ್ದರಿಂದ ಅಧ್ಯಕ್ಷರು ಈಗ ಇದನ್ನು ಯಾವರೀತಿ ತೀರ್ಮಾನ ಮಾಡಿದರೆ ಆ ರೀತಿ ಆಗುತ್ತದೆ. ಈ ಮಸೂದೆಯ ಬಗ್ಗೆ ಈವರೆಗೂ ಸರ್ಕಾರದ ಪಾರ್ಟಿಯವರೇ ಮಾತನಾಡಿದ್ದಾರೆ. ಅವರು ತಮ್ಮ ಚರ್ಚೆ ಪೂರೈಸಿದ ಕೂಡಲೇ ಈ ಮಸೂದೆಯನ್ನು ಪಾಸ್ ಮಾಡಬೇಕೆಂದು ಪ್ರಯತ್ನ ಹೂಡಿರುವ ಅಂಶ ಅಧ್ಯಕ್ಷರ ಗಮನಕ್ಕೆ ಬಂದಹಾಗಾಯಿತು. ಈ ಹಿಂದೆಲ್ಲಾ ಅವರೂ ನಾವೂ ಏನೋ ಒಂದು ಪರಸ್ಪರ ಒಡಂಬಡಿಕೆಯ ಮೇಲೆ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿದ್ದೆವು. ಆದರೆ ಈಗ ಸರ್ಕಾರದ ಪಾರ್ಟಿಯವರೇನೋ ಇನ್ನು ಈ ಮಸೂದೆಯಮೇಲೆ ಚರ್ಚೆಗೆ ಅವಕಾಶ ಕೊಡಬಾರದೆಂಬ ಸಿದ್ಧಾಂತಕ್ಕೆ ಬಂದಿದ್ದಾರೆ. ಈ ವರೆಗೂ ಮೂರು ದಿವಸಗಳ ಚರ್ಚೆ ಆದಂತಾಗಿದೆ. ಆದರೆ ಈ ಮಸೂದೆ ಯಾವತ್ತೋ ಒಂದು ದಿನ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಅನಂತರ ಮಧ್ಯೆ ಕಟ್ಟಾಯಿತು. ಪುನಃ ಚರ್ಚೆಗೆ ಬಂದಿದೆ. ಹೀಗಾದರೆ ನಮಗೆ ಆ ಟ್ರೆಂಡೇ ಕಟ್ಟಾಗಿ ಬಿಡುತ್ತದೆ. ನಾವು ಯಾವಾಗ ಓದಿಕೊಂಡು ಬರಬೇಕು, ಏನು ಯಾವುದು ಎಂಬುದೊಂದೂ ಗೊತ್ತಾಗುವುದಿಲ್ಲ. ಈಗ. . . . .

ಅಧ್ಯಕ್ಷರು.—ಕ್ಲೋಜರ್ ಮೋಷನ್ ಒಪ್ಪಲಿ ಅಥವಾ ಬಿಡಲಿ ಅದು ಬೇರೆ ಪ್ರಶ್ನೆ. ಈ ಅಧಿವೇಶನ ಮುಗಿಯುವುದರೊಳಗಾಗಿ ಈ ಬಿಲ್ಲನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಲೇಬೇಕು. ಇದಕ್ಕೆ ನೀವು ಒಪ್ಪಬೇಕು. ಇದನ್ನು ಹೀಗೆ ಮುಂದುವರಿಸುವುದು ಸರಿಯಲ್ಲ ಮತ್ತು ಯೋಗ್ಯವೂ ಅಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಈ ಬಿಲ್ಲಿನ ಬಗ್ಗೆ, ಸೆಲೆಕ್ಟ್ ಸಮಿತಿಯನ್ನು ರಚಿಸಿದ್ದೇ ಕಾಣಲಿಲ್ಲ.

ಅಧ್ಯಕ್ಷರು.—ಮೋಟಾರ್ ಟ್ಯಾಕ್ಸೇಷನ್ ಬಿಲ್ ಈಗ ಬರುವುದಿಲ್ಲವೆಂದು ಕಾಣುತ್ತದೆ. ನಾವು ಈ ಅಧಿವೇಶನದಲ್ಲಿ ಮುಗಿಸಬೇಕಾಗಿರುವುದು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ ಒಂದು. ಮತ್ತು ಸೆಲೆಕ್ಟ್ ಸಮಿತಿಗೆ ಈಗ ಚರ್ಚೆಯಾಗುತ್ತಿರುವ ಬಿಲ್ಲನ್ನು ಕಳುಹಿಸುವಂತೆ ಮಾಡುವುದು. ಈಗ ಈ ಎರಡು ಕೆಲಸಗಳು ಮಾತ್ರ ನಮ್ಮ ಮುಂದೆ ಉಳಿದಿವೆ. ಇಷ್ಟನ್ನು ಮುಗಿಸುವುದಕ್ಕೆ ನೀವೆಲ್ಲರೂ ಒಪ್ಪಿಕೊಳುವುದಾಗಿದ್ದರೆ ನನ್ನ ಅಭ್ಯಂತರವೇನೂ ಇಲ್ಲ. ಮುಂದಿನ ವ್ಯವಸ್ಥೆಯನ್ನು ನಾನು ಹೇಳಬಲ್ಲೆ.

ಶ್ರೀ ಯು. ಎಂ. ಮಾದಪ್ಪ.—ಈ ಅಧಿವೇಶನ ಎಷ್ಟು ದಿವಸ ಕುಳಿತುಕೊಳ್ಳುತ್ತದೆ ಎಂಬುದೇ ನಮಗೆ ಗೊತ್ತಿಲ್ಲದಿರುವಾಗ ನಾವು ಅದನ್ನು ಹೇಗೆ ತಿಳಿಸಲು ಸಾಧ್ಯ ?

ಅಧ್ಯಕ್ಷರು.—ಭಾನುವಾರ ಬೆಳಿಗ್ಗೆ ಮತ್ತು ಮಧ್ಯಾನ್ಹ ಕುಳಿತುಕೊಳ್ಳೋಣ. ಅಗತ್ಯವಿದ್ದರೆ ಸೋಮವಾರವೂ ಕುಳಿತುಕೊಳ್ಳೋಣ. ಈ ಅವಧಿಯೊಳಗೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲನ್ನು ಪಾಸ್ ಮಾಡಿ ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಅಲ್ಲಿಗೆ ಈ ಅಧಿವೇಶನದ ಕಾರ್ಯ ಮುಗಿಯುತ್ತದೆ. ಈ ತೀರ್ಮಾನಕ್ಕೆ ತಾವೆಲ್ಲರೂ ಒಪ್ಪಿಕೊಳ್ಳುವುದು ಒಳ್ಳೆಯದು.

ಶ್ರೀ ಯು. ಎಂ. ಮಾದಪ್ಪ.—ಹಾಗದರೆ ಈ ಅಧಿವೇಶನಕ್ಕೆ ಇನ್ನು ಉಳಿದಿರುವ ಕಾರ್ಯ ಈ ಇವೆರಡೇನೇ ?

6 P.M.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖಾ ಮಂತ್ರಿಗಳು).—ತಮ್ಮ ಊರುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ಬಹಳ ದೂರ ಹೋಗಬೇಕಾಗಿರುವದರಿಂದ ಆದಷ್ಟು ಮಟ್ಟಿಗೆ ಬೇಗನೆ ಕೆಲಸವನ್ನು ಮುಗಿಸಬೇಕೆಂದು ಕೆಲವು ಸದಸ್ಯರು ಸಲಹೆ ಕೊಟ್ಟಿದ್ದಾರೆ. ಆದಕಾರಣ ದಯವಿಟ್ಟು ದೊಡ್ಡ ಮನಸ್ಸು ಮಾಡಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ ಬಿಲ್ ಪಾಸಮಾಡಿದರೆ ಒಳ್ಳೆಯದು. ಸೆಲೆಕ್ಟ್ ಕಮಿಟಿಯಿಂದ ವಾಪಸ್ಸು ಬಂದಮೇಲೆ ಇರಿಗೇಷನ್ ಬಿಲ್ ಮೇಲೆ ಮತ್ತೆ ಚರ್ಚೆ ಮಾಡಬಹುದು. ಸೆಲೆಕ್ಟ ಕಮಿಟಿಯಲ್ಲಿ ಕೂಲಂಕಷವಾಗಿ ಚರ್ಚಿಸುವುದಕ್ಕೆ ಅವಕಾಶವಿದೆ ಆದುದರಿಂದ ಭಾನುವಾರ ಬೆಳಗ್ಗೆ ಮತ್ತು ಮಧ್ಯಾಹ್ನದಲ್ಲಿ ಪುನಃ ಸಭೆ ಸೇರಿ ಕೆಲಸ ಮುಗಿಸಿದರೆ ಭಾನುವಾರ ಸಾಯಂಕಾಲ ಊರಿಗೆ ಹೋಗುವವರಿಗೆ ಅನುಕೂಲವಾಗುವುದು ಹಾಗೂ ಮೊದಲೇ ಅರೇಂಜಮೆಂಟ್ ಮಾಡಿಕೊಳ್ಳಲು ಬರುವುದು. ಉಳಿದ ಎಲ್ಲ ಬಿಲ್ಲುಗಳನ್ನು ಮುಂದೆ ಪುನಃ ಸಭೆ ಸೇರಿದಾಗ ತೆಗೆದುಕೊಳ್ಳೋಣ. ಹತ್ತನೆಯ ತಾರೀಖಿಗೆ ಕೆಲಸವನ್ನು ಮುಗಿಸುತ್ತೇವೆಂದೂ ವಿಳಂಬಮಾಡಬಾರದೆಂದೂ ಶ್ರೀ ಕೆಂಚಪ್ಪನವರು ಭರವಸೆ ಕೊಟ್ಟಿದ್ದಾರೆ. ಶ್ರೀ ಪುಟ್ಟರಾಮಯ್ಯನವರೂ ಶ್ರೀ ಕೆಂಚಪ್ಪನವರೂ ಮಾತನಾಡಿಕೊಂಡು ಅಭಿಪಾಯ ಕೊಟ್ಟಿದ್ದಾರೆ. ಆದುದರಿಂದ ಭಾನುವಾರ ಬೆಳಿಗ್ಗೆ ಮತ್ತು ಸಾಯಂಕಾಲ ಸಭೆ ನಡೆಸೋಣ. ಉಳಿದ ಬಿಲ್ಲುಗಳನ್ನು ಮುಂದಿನ ಸೆಶನ್‌ನಲ್ಲಿ ತೆಗೆದುಕೊಳ್ಳೋಣ.

ಶ್ರೀ ಯು. ಎಂ. ಮಾದಪ್ಪ.—ಅಧಿವೇಶನವು ಇಲ್ಲದಿರುವಾಗ ಸೆಲೆಕ್ಟ ಕಮಿಟಿ ಕರೆದರೆ ದುಡ್ಡು ವಿನಾಕಾರಣ ಬಹಳ ಖರ್ಚಾಗುವುದು.

ಶ್ರೀ ಟಿ. ಮರಿಯಪ್ಪ.—ಸೆಲೆಕ್ಟ ಕಮಿಟಿಯಲ್ಲಿ ಮಸೂದೆಯನ್ನು ಪರಿಶೀಲಿಸಬೇಕೆಂದಿರುವಾಗ ದುಡ್ಡು ಖರ್ಚು ಆಗುವುದೆಂಬುದನ್ನು ಗಮನಿಸಬಾರದು. ದಯವಿಟ್ಟು ಈ ಬಿಲ್ಲನ್ನು ಸೆಲೆಕ್ಟ ಕಮಿಟಿಗೆ ಕಳಿಸುವುದಕ್ಕೆ ಒಪ್ಪಿಕೊಳ್ಳಬೇಕು. ಅಗ್ರಿಕಲ್ಚರಲ್ ಇನ್‌ಕಂಟಾಕ್ಸ

(ಶ್ರೀ ಟಿ. ಮರಿಯಪ್ಪ)

ಬಿಲ್ಲನ್ನು ಪಾಸ್‌ಮಾಡುವದರ ಸಲುವಾಗಿ ಭಾನುವಾರ ದಿವಸ ಎಷ್ಟು ಹೊತ್ತು ಬೇಕಾದರೂ ಅಷ್ಟು ಹೊತ್ತು ಕುಳಿತುಕೊಳ್ಳಲು ನಾವು ತಯಾರಿದ್ದೇವೆ.

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಇದುವರೆಗೆ ನಡೆದುಕೊಂಡು ಬಂದಿರತಕ್ಕ ರೀತಿಯನ್ನು ನೋಡಿದರೆ ನಾವು ನಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುತ್ತಿದ್ದೇವೆ ಎಂಬದನ್ನು ಯಾರೂ ಹೇಳಲಿಲ್ಲ. 10ನೇ ತಾರೀಖಿನವರೆಗೆ ಎಷ್ಟು ಕೆಲಸವಾಗುತ್ತದೆಯೋ ಅಷ್ಟನ್ನು ಮಾಡಿ ಮುಗಿಸುವುದಕ್ಕೆ ನಾವು ತಯಾರಿ ಇದ್ದೇವೆ. ಆದರೆ ಹೆಚ್ಚು ಬಿಲ್ಲುಗಳನ್ನು ಸಭೆಯ ಮುಂದೆ ತಂದು, ಸಾಕಷ್ಟು ಚರ್ಚೆಯು ಆಗದೇ ಇದ್ದರೂ ಸಹ ಇಷ್ಟೇ ಅವಧಿಯಲ್ಲಿ ಬಿಲ್ಲುಗಳನ್ನೆಲ್ಲಾ ಪಾಸ್‌ಮಾಡಿ ಬಿಡೋಣವೆಂದರೆ ನಾವು ಒಪ್ಪುವದಿಲ್ಲ, ಸಾಕಷ್ಟು ಚರ್ಚೆಯು ಆಗದೇಇದ್ದ ಮೂಲಕ ಈ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ ಬಿಲ್ಲನ್ನು ಸದ್ಯಕ್ಕೆ ತೆಗೆದುಕೊಳ್ಳದೆ ಮುಂದಕ್ಕೆ ಹಾಕಬೇಕು. ಆತುರ ಆತುರವಾಗಿ ಕೆಲಸ ಮಾಡುವುದು ಬೇಡ. ಸರಕಾರಕ್ಕೆ ನಾವು ಸಹಕಾರ ನೀಡುತ್ತಿದ್ದೇವೆ. ಖಾಸಗಿ ನಿರ್ಣಯದ ಬಗ್ಗೆ ನಾವು ತುಂಬ ಸಹಕಾರ ಮಾಡಿದ್ದೇವೆ. ಭಾನುವಾರ ಕೆಲಸವಾಡಿ ಮನೆಗೆ ಹೋಗೋಣ. ಬಿಲ್ಲು ಪಾಸಮಾಡುವುದು ಬೇಡ.

ಅಧ್ಯಕ್ಷರು.—ಈಗ ನಮ್ಮ ಮುಂದೆ ಎರಡು ಪ್ರಶ್ನೆಗಳು ಇವೆ. ಮೊದಲನೆಯದಾಗಿ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ ಬಿಲ್ಲು ಪಾಸಮಾಡಬೇಕಾದುದು. ಎರಡನೆಯದಾಗಿ ಇರಿಗೇಷನ್ ಬೆಟರ್‌ಮೆಂಟ್ ಟಾಕ್ಸ್ ಬಿಲ್ಲನ್ನು ಸೆಲೆಕ್ಟ ಕಮಿಟಿಗೆ ಕಳಿಸುವುದು. ಮೊದಲನೆಯದಾದ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ ಬಿಲ್ಲು ಪಾಸಮಾಡಬೇಕೆಂಬ ಬಗ್ಗೆ ಸಮಾಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಈ ಮೊದಲೇ ಬಂದಿದ್ದೇವೆ. ಇನ್ನು ಎರಡನೆಯದಾದ ಇರಿಗೇಷನ್ ಬಿಲ್ಲಿನ ಬಗ್ಗೆ ಚರ್ಚೆ ಮಾಡುವುದಕ್ಕೆ ಜಾಸ್ತಿ ಕಾಲಾವಕಾಶ ಬೇಕಾಗಿದ್ದರೆ ಹೆಚ್ಚುಕಾಲ ಕುಳಿತುಕೊಳ್ಳೋಣ. ಆದರೆ ಹೊರಟು ಹೋಗುವ ಮುಂಚೆ ಸೆಲೆಕ್ಟ ಕಮಿಟಿಗೆ ಬಿಲ್ಲನ್ನು ಕಳಿಸೋಣ. ಅಂದರೆ ಚೆನ್ನಾಗಿ ಆಗುತ್ತದೆ. ಈ ಮೊದಲೇ ನಾವು ಏನು ಒಂದು ನಿರ್ಣಯ ಮಾಡಿದ್ದೇವೆಯೋ ಅದು ಸರಿಯಾಗಿದೆ. ಅಗ್ರಿಕಲ್ಚರಲ್ ಇನ್‌ಕಂಟಾಕ್ಸ ಬಿಲ್ಲು ಪಾಸಮಾಡೋಣ ಮತ್ತು ಇರಿಗೇಷನ್ ಬಿಲ್ಲು ಸೆಲೆಕ್ಟ ಕಮಿಟಿಗೆ ಕಳಿಸೋಣ.

ಶ್ರೀ ಯು. ಎಂ. ಮಾದಪ್ಪ.—ಖಾಸಗೀ ನಿರ್ಣಯಗಳ ಚರ್ಚೆಗಾಗಿ ಒಂದೇದಿವಸ ಈವರೆಗೆ ಕೊಟ್ಟಿದೆ. ರೂಲ್ಸ್ ಪ್ರಕಾರ ಮೂರುದಿವಸ ಕೊಡಬೇಕಾಗುವುದು.

ಶ್ರೀ ಟಿ. ಮರಿಯಪ್ಪ.—ಖಾಸಗೀ ನಿರ್ಣಯಗಳ ಚರ್ಚೆಗೆ ಸಾಕಷ್ಟು ವೇಳೆ ಕೊಡಲಾಗುವುದು.

ಶ್ರೀ ಯು. ಎಂ. ಮಾದಪ್ಪ.—ಈಗ ನಾನ್ ಅಫಿಷಿಯಲ್ ರೆಸಲೂಷನ್ನಿನ ವಿಚಾರವಾಗಿ ಒಂದು ನಿರ್ಧಾರ ಕೊಟ್ಟಿದ್ದೀರಿ. ಪ್ರೊಸೀಜರ್ ಪ್ರಕಾರ ಮೂರು ದಿನಗಳಿರಬೇಕಾಗಿತ್ತು. ಈಗ ಒಂದು ದಿವಸವಾಗಿದೆ, ಇನ್ನೂ ಬಾಕಿ ಎರಡುದಿನಗಳು ಬರಬೇಕಾಗಿತ್ತು. ಅದು ಹೇಗಾಗುತ್ತದೆ ಎನ್ನುವುದನ್ನು ಯೋಚಿಸಬೇಕು.

Sri T. MARIAPPA.—We will give more time to the Hon'ble Members.

ಅಧ್ಯಕ್ಷರು.—ಮೂರು ನಾನ್ ಅಫಿಷಿಯಲ್ ಬಿಲ್‌ಗಳ ಪೈಕಿ ಇನ್ನೆರಡು ಉಳಿದಿವೆ. ಮುಂದಿನ ಸಲ ಅಧಿವೇಶನ 15 ದಿನಗಳು ಕೂಡುವಾಗ ಉಳಿದ ಎರಡು ಬಿಲ್ಲುಗಳನ್ನು ತೆಗೆದುಕೊಳ್ಳೋಣ.

ಶ್ರೀ ಯು. ಎಂ. ಮಾದಪ್ಪ.—ಪ್ರೊಸೀಜರು ಪ್ರಕಾರ ಅಸೆಂಬ್ಲಿಯಲ್ಲಿ ತಂದಿರತಕ್ಕ Resolutions ಗಳೆಲ್ಲ ಮುಂದಿನ ಅಸೆಂಬ್ಲಿಗೆ ಲ್ಯಾಪ್ಸ್ ಆಗುವುದಿಲ್ಲವೇ?

ಅಧ್ಯಕ್ಷರು.—ಇಲ್ಲ. It will be an adjourned session. They will not lapse.

Sri M. C. NARASIMHAN.—If we have to sit on Monday morning also, I think it will be possible to finish the Agricultural Income-tax Bill as reported by the Select Committee, and also there will be some time for consideration of the Mysore Irrigation (Levy of Betterment Contribution and Water Rate) Bill.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಈ ವಿಚಾರದಲ್ಲಿ ಇಷ್ಟು ದೀರ್ಘವಾದ ಚರ್ಚೆಗೆ ಅವಕಾಶವೇ ಇಲ್ಲ. ಸರಕಾರದವರು ಯಾವುದಕ್ಕೂ ಸಿದ್ಧರಾಗಿದ್ದಾರೆ. ಈಗಲೇ ಇನ್ನೂ ಎರಡು ಗಂಟೆಗಳ ಕಾಲ ಕುಳಿತುಕೊಂಡು ಈ ಇರಿಗೇಷನ್ ಬಿಲ್ಲನ್ನು ಚರ್ಚಿಸಿ ಸೆಲೆಕ್ಟು ಸಮಿತಿಗೆ ಒಪ್ಪಿಸೋಣವೆಂದರೆ ಅದಕ್ಕೂ ಒಪ್ಪೋಣ. ಇಲ್ಲದೆ ಸೋಮವಾರ ಸೇರೋಣವೆಂದರೆ ಅದಕ್ಕೂ ಒಪ್ಪುತ್ತೇವೆ. ಇಲ್ಲದೆ ಮುಂದಿನ ಸೆಷನ್‌ಗೆ ತರಬೇಕೆಂದು ನಿರ್ಧಾರ ಮಾಡಿದರೆ, ಅದರಂತೆ ಒಪ್ಪುತ್ತೇವೆ. ಬಹಳ ಸಂತೋಷ

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತಾವು ಈ ಕೆಲಸ ಕಾರ್ಯಗಳು ಆಗಲು ಯಾವರೀತಿ ಮಾಡಬೇಕೆಂಬುದನ್ನು ನಿರ್ಧಾರಮಾಡಿ ಮೊದಲೇ ತಿಳಿಸಿದ್ದರೆ ಅದಕ್ಕೆ ನಾವು ಒಪ್ಪುತ್ತಿದ್ದೆವು.

ಅಧ್ಯಕ್ಷರು.—ಸ್ವಲ್ಪ ನಾನು ಹೇಳುತ್ತೇನೆ. ತಾವು ಹೇಗೆ ಹೇಳಿದರೂ ಹಾಗೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ಏನನ್ನಿಸುತ್ತದೆ ಎಂದರೆ ನಾವೆಲ್ಲ ಭಾನುವಾರದ (11-8-1957) ದಿವಸ ಸೇರಿ ಈ Agricultural Income-tax Bill ಅನ್ನು ಪೂರ್ತಿ ಪಾಸುಮಾಡಬೇಕು.

After all we are here to transact business. There should be give and take. We will sit on Sunday and Monday.

ಈ ಬಿಲ್ಲನ್ನು ಭಾನುವಾರ ಮುಗಿಸಿಬಿಟ್ಟರೆ ಅನುಕೂಲವಾಗುತ್ತದೆ. ಸೋಮವಾರ ಬೇಕಾದರೆ Irrigation ಮಸೂದೆಯನ್ನು ಚರ್ಚೆಮಾಡಿ Select Committeeಗೆ ಕಳುಹಿಸಿದರೆ ಚೆನ್ನಾಗಿರುತ್ತದೆ. ನಾವು ಏಳುವುದಕ್ಕೆ ಮುಂಚೆ ಈ ಸಭೆಯಿಂದ ಈ ಬಿಲ್ಲನ್ನು ಸೆಲೆಕ್ಟ್ ಸಮಿತಿಗೆ ಕಳಹಿಸಿದರೆ ಸಮಿತಿಯಲ್ಲಿ ಚೆನ್ನಾಗಿ ಚರ್ಚೆಯಾಗಿ ಮುಂದಿನ ಅಧಿವೇಶನದ ವೇಳೆಗೆ ಬಂದು ಇಲ್ಲೂಕೂಡ ಚರ್ಚೆಮಾಡಲು ಅನುಕೂಲವಾಗುತ್ತದೆ. ವಿಚಾರ ಮಾಡಲಿಕ್ಕೆ ಮತ್ತು ಅಮೆಂಡುಮೆಂಟು ಸಹ ಕಳುಹಿಸಲಿಕ್ಕೆ ನಿಮಗೆ ಜಾಸ್ತಿ ಕಾಲಬೇಕಾದರೆ ಕೊಡುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಈಗ ಸಾಮಾನ್ಯವಾಗಿ ಒಂದು ಸಂಪ್ರದಾಯವಾಗಿದೆ. ಸರಕಾರ ಒಂದು ಬಿಲ್ಲನ್ನು ತರುವುದು, ಅದನ್ನು ಅರ್ಧಕ್ಕೇ ಬಿಟ್ಟು ಮತ್ತೆ ಬೇರೆ ಇನ್ನೊಂದು ಬಿಲ್ಲನ್ನು ತರುವುದು, ಅದನ್ನು ಅರ್ಧ ಚರ್ಚಿಸುವುದು, ಹೀಗೆ ಈಗ ಮಾಡುತ್ತಿದ್ದಾರೆ. ಇದರಿಂದ ಸರಕಾರದ ನೀತಿ ಏನು ಎಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಯಾವಾಗಲೂ ಒಂದೇ ಬಿಲ್ಲನ್ನು ಪೂರ್ಣವಾಗಿ ಚರ್ಚಿಸಿ ಅದನ್ನು ಮುಗಿಸಿದ ಮೇಲೆ ಮತ್ತೆ ಇನ್ನೊಂದನ್ನು ತೆಗೆದುಕೊಳ್ಳುವುದು ಸರಿಯಾದುದು.

ಅಲ್ಲದೆ ಇದರಲ್ಲಿ ಒಂದು ರೀತಿಯಾದ psychological effect ಇದೆ. ಇದನ್ನು ತಾವು ಕೂಡ ಯೋಚನೆ ಮಾಡಬೇಕು. ಅದು ಬಿಟ್ಟು ಇವೊತ್ತಿನದಿವಸವೇ ಕಾನೂನುಗಳಾಗಬೇಕು ಎಂದು ಆತುರಮಾಡಿದರೆ ಅದನ್ನು ಪೂರ್ತಿಯಾಗಿ ಚರ್ಚಿಸುವುದಕ್ಕೆ ಅವಕಾಶವಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳು ಯಾವಾಗ ಬಿಲ್ಲು ತಂದರೂ ಅದೇನು ದುರದೃಷ್ಟವೋ ಆ ಬಿಲ್ಲನ್ನು ಸರಿಯಾಗಿ ಚರ್ಚೆಮಾಡಲಾಗುವುದಿಲ್ಲ. ಅದು ನಮ್ಮ ದುರದೃಷ್ಟವೋ ಅವರದೋ ಹೇಳುವುದಕ್ಕಾಗುವುದಿಲ್ಲ. ಅವರ ಹೇಳಿದಂತೆ ಮುಂದಿನ ಸೆಷನ್ನಿಗೇ ಬರಲಿ ಬಿಡಿ.

Mr. SPEAKER.—It will be a short session. It will not be a long session. You cannot have full time to get Select Committee Report and discuss it. If it is sent to the Select Committee now they can sit and consider the Bill thoroughly. It is better that the Select Committee consider the Bill when the House is not sitting. As far as possible, I will give the members of the Opposition full chance.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸೆಲೆಕ್ಟ್ ಸಮಿತಿಯಲ್ಲಿ ಬೇಕಾದಷ್ಟು ಜನ ಈ Agricultural Income-tax ಬಿಲ್ಲಿನ ಮೇಲೆ ಮಾತನಾಡಿ ಒಂದು ತೀರ್ಮಾನಕ್ಕೆ ಬಂದು ಇಲ್ಲಿ ನಮ್ಮ ಮುಂದೆ ಆ ಬಿಲ್ಲನ್ನು ತಂದಿದ್ದಾರೆ ತಾವು ಈ ಬಿಲ್ಲಿನ ಮೇಲೆ ಮಾತನಾಡಲು ನಮ್ಮ ಕಡೆಗೇ ಹೆಚ್ಚಿನ ಅವಕಾಶವನ್ನು ಕೊಡುತ್ತೀವೆಂದು ಕೊಟ್ಟುಬಿಟ್ಟರೆ, ಬೇರೆ ಪಕ್ಷದವರಿಂದ ಬರುವ ಅಭಿಪ್ರಾಯಗಳು ಸರಿಯಾಗಿ ತಿಳಿಯುವುದಕ್ಕೆ ಅವಕಾಶವಾಗುವುದಿಲ್ಲ. ಆ ದೃಷ್ಟಿಯಿಂದ ಎಲ್ಲರಿಗೂ ಸರಿಯಾದ ಅವಕಾಶ ಕೊಡಬೇಕು ಎಂದು ನಾನು ಹೇಳುತ್ತೇನೆ.

Mr. SPEAKER.—I will bear that fact in mind. The House will now rise and meet again on Sunday at 8-30 A.M. in the morning.

The House adjourned at Twenty Minutes past Six of the Clock to meet again at Thirty Minutes past Eight of the Clock on Sunday, the 11th August 1957.

WD 4075—GPB—900—12-2-58